ಕರ್ನಾಟಕ ವಿಧಾನ ಸಭೆ

ಗುರುವಾರ 11ನೇ ಮಾರ್ಚ್ 1993 ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10.05 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಪಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

1993-94ನೇ ಸಾಲಿನ ಆಯವ್ಯಯ ಮೇಲಿನ ಸಾಮಾನ್ಯ ಚರ್ಚೆಗೆ ಮುಖ್ಯಮಂತ್ರಿಯವರಿಂದ ಉತ್ತರ

† ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, 1993-94ನೇ ಸಾಲಿನ ಆಯವ್ಯಯ ಅಂದಾಜನ್ನು ಮಂಡನೆ ಮಾಡಿದ ಮೇಲೆ ವ್ಯಾಪಕವಾದಂಥ ಚರ್ಚೆ ನಡೆದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಈ ಕಡೆಯ ಹಾಗೂ ಆ ಕಡೆಯ ಮಾನ್ಯ ಸದಸ್ಯರುಗಳು ಸಾಕಷ್ಟು ಚರ್ಚೆ ಮಾಡಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನಿಮ್ಮಲ್ಲಿ ನನ್ನದೊಂದು ಮನವಿ; ಏನೆಂದರೆ ಈಗ ಈ ಸದನದ ಕಾರ್ಯಕಲಾಪಗಳಲ್ಲಿ ವಿಶೇಷವಾಗಿ ಬಜೆಟ್ ಮತ್ತು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಾಡತಕ್ಕದ್ದು ಬಹಳ ಮಹತ್ವದ ವಿಚಾರಗಳು. ಈ ಸದನದಲ್ಲಿ ನಮ್ಮಂತಹ ಸದಸ್ಯರುಗಳು ನಮ್ಮ ಕ್ಷೇತ್ರಗಳ ಬಗ್ಗೆ ರಾಜ್ಯದ ಸಮಸ್ಯೆಗಳ ಬಗ್ಗೆ ಅಲ್ಪ ಸ್ವಲ್ಪ ತಿಳಿದುಕೊಂಡು, ಏನೋ ನಮಗೆ ತಿಳಿದಮಟ್ಟಿಗೆ ಮಾತನಾಡಬೇಕೆಂದು ಬಯಸುತ್ತೇವೆ. ಈ ಸದನದ ನಿಯಮಾವಳಿಗಳನ್ನು ಬದಲಾವಣೆಯನ್ನು ಮಾಡಲಿಕ್ಕೆ ತಾವು ಒಂದು ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಬಹಳಷ್ಟು ಜನ 2--3 ಗಂಟೆಗಳ ಕಾಲ ಭಾಷಣ ಮಾಡಿದವರು ಇವತ್ತು ಮುಖ್ಯಮಂತ್ರಿಗಳ ಉತ್ತರವನ್ನು ಕೇಳುವುದಕ್ಕೆ ಬಂದಿಲ್ಲ. ಅಂದರೆ ಈ ಸದನವನ್ನು ಕೇವಲ ಪ್ರಚಾರಕ್ಕೋಸ್ಕರವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂಬ ಅನುಮಾನ ಬರುತ್ತದೆ. ಇದು ನನಗೆ ಅರ್ಥವಾಗುತ್ತಿಲ್ಲ.

ಈಗ ನಾನು ಮಾತನಾಡಬೇಕೆಂದಿದ್ದೇನೆ. ಕಳೆದ ನಾಲ್ಕು ವರ್ಷಗಳಿಂದ ವಿರೋಧ ಪಕ್ಷದ ಶಾಸಕನಾಗಿದ್ದರೂ ಸಹ ಒಂದು ಸಾರಿಯೂ ರಾಜ್ಯಪಾಲರ ಭಾಷಣದ ಮೇಲೆ ಆಗಲಿ, ಬಜೆಟ್ ಬಗ್ಗೆ ಆಗಲೀ ಮಾತನಾಡುವುದಕ್ಕೆ ಸಮಯಾಭಾವದಿಂದ ನನಗೆ ಅವಕಾಶ ಆಗುತ್ತಾ ಇಲ್ಲ. ಮಾತನಾಡಬೇಕು, ಏನಾದರೂ ಕಾಂಟ್ರಿಬ್ಯೂಟ್ ಮಾಡಬೇಕು ಎನ್ನುವವರಿಗೆ ಹೀಗೆ ಆಗುತ್ತಿದೆ. ಎರಡು ಗಂಟೆ ಮೂರು ಗಂಟೆ ಮಾತನಾಡಿಕೊಂಡು ಅದಕ್ಕೆ ಉತ್ತರ ಕೊಟ್ಟ ಮೇಲೆ ನಾನು ಏನು ಕ್ಲಾರಿಫಿಕೇಷನ್ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದು? ನನಗೆ ಕೋರಂ ಇಲ್ಲದೇ ಇರುವಾಗ ಭಾಷಣ ಮಾಡುವುದಕ್ಕೆ ಅವಕಾಶ ಸಿಗುತ್ತದೆ. ನಿನ್ನೆ ಸಾಯಂಕಾಲ 7 ಗಂಟೆಗೆ ಸಿಂಧ್ಯರವರೇ ಮಾತನಾಡಿ ಎಂದರು. ಕೋರಂ ಇರಲಿಲ್ಲ. ಎಲ್ಲರೂ ಹೊರಟು ಹೋಗಿದ್ದರು. ಆಗ ನಾನು ಅರಣ್ಯರೋದನ ಮಾಡಬೇಕು. ಇದು ಇರತಕ್ಕ ಪರಿಸ್ಥಿತಿ. ಆದ್ದರಿಂದ ನನಗೆ ಅನಿಸುತ್ತದೆ. ತಾವು ದಯಮಾಡಿ ಈ ನಿಯಮಾವಳಿಗಳ ಪುಸ್ತಕವನ್ನು ಪ್ರಾರಂಭಿಸಿ ಇದರ ಬಗ್ಗೆ ಏನಾದರೂ ಕಾನೂನು ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ವಿಚಾರ ಮಾಡಬೇಕೆಂದು ಬಹಳ ನೋವಿನಿಂದ ಹೇಳುತ್ತೇನೆ. ಏಕೆಂದರೆ ನನಗೆ ಅವಕಾಶ ಇಲ್ಲ. ಇಲ್ಲಿ ನಾನು ಜೀರೋ ಅವರ್ ಮೆಂಬರ್ ಆಗಿಬಿಟ್ಟಿದ್ದೇನೆ. ಜೀರೋ ಅವರ್‌ನಲ್ಲಿ ಬರುವುದು ಮಾನ್ಯ ಸಭಾಧ್ಯಕ್ಷರ ಕೃಪೆಯಿಂದ ಕೆಲವು ಮಹತ್ವದ ವಿಚಾರಗಳನ್ನು ಎತ್ತುವುದು. ಇದು

ನನ್ನ ಕೆಲಸವಾಗಿದೆ. I have become the blue eyed boy of the Hon. Speaker ......ಸಭಾಧ್ಯಕ್ಷರ ಕೃಪೆಯಿಂದ ನಾನು ಮಾತನಾಡಿ ಹೋಗುತ್ತಿದ್ದೇನೆ. ನನ್ನ ಕ್ಷೇತ್ರದ ಜನತೆಗೆ ಅನ್ಯಾಯ ಮಾಡುತ್ತಿದ್ದೇನೆ ಎಂದು ನನಗೆ ಅನಿಸುತ್ತದೆ. ತಮ್ಮ ಗಮನಕ್ಕೆ ಈ ವಿಷಯವನ್ನು ತರಬೇಕೆಂದು ಈ ಸಬ್ಮಿಷನ್ ಮಾಡುತ್ತಿದ್ದೇನೆ. ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ ತಮಗೆ ಕೈಮುಗಿದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಸಭಾಧ್ಯಕ್ಷರೇ, ಸಾಕಷ್ಟು ವ್ಯಾಪಕವಾದ ಚರ್ಚೆ ಮತ್ತು ಅದು ಒಂದು ರೀತಿ ಬಹಳ ಪರಿಣಾಮಕಾರಿಯಾದ ಚರ್ಚೆ ಆಗಿದೆ. ಮಾನ್ಯ ಸಿಂಧ್ಯರವರೂ ಕೂಡ ಮಾತನಾಡಿದ್ದರೆ ಬಹಳ ಒಳ್ಳೆಯ ಸಲಹೆ ಕೂಡ ಇನ್ನೂ ಹೆಚ್ಚು ಬರುತ್ತಿತ್ತು. ಇನ್ನು ಮುಂದೆ ಬರತಕ್ಕ ಬೇಡಿಕೆಗಳ ದಿವಸದಲ್ಲಿ ಸಿಂಧ್ಯಾರವರ ಸಲಹೆಗಳನ್ನು ನಿರೀಕ್ಷಣೆ ಮಾಡುತ್ತಿದ್ದೇನೆ. ಈ ವರ್ಷ ನಾವು 31ನೇ ತಾರೀಖಿನೊಳಗಡೆ ವೋಟ್ ಆನ್ ಅಕೌಂಟ್ ತೆಗೆದುಕೊಂಡರೆ ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆಯನ್ನೂ ಕೂಡ ಮುಗಿಸಬೇಕು ಎಂಬ ಒಂದು ಪರಿಪಾಠ ಬೇರೆ ಇಟ್ಟುಕೊಂಡಿದ್ದೇವೆ.

ಆದರೆ ಉದ್ದೇಶ ಏನು ಎಂದರೆ ಅನೇಕ ಬಾರಿ ನಾವು ವೋಟ್ ಆನ್ ಅಕೌಂಟ್ ತೆಗೆದುಕೊಳ್ಳುತ್ತೇವೆ. ಕೆಲವು ಸಾರಿ ಮೂರು ತಿಂಗಳು ತೆಗೆದುಕೊಳ್ಳುತ್ತೇವೆ ಮತ್ತು ಕೆಲವು ಸಾರಿ ಆರು ತಿಂಗಳುಗಳ ಕಾಲ ಕೂಡ ತೆಗೆದುಕೊಂಡಿದ್ದು ಇದೆ. ಇದರಲ್ಲಿ ಸಾಧಕ ಬಾಧಕಗಳು ಎರಡೂ ಇವೆ. ಒಂದು ಸಾಧಕ ಅಂದರೆ ಇದರಿಂದ ಪ್ರಯೋಜನ ಏನು ಆಗುತ್ತದೆಂದು ಹೇಳಿದರೆ ಸನ್ಮಾನ್ಯ ಸದಸ್ಯರು ಸ್ವಲ್ಪ ಇದರಲ್ಲಿ ಭಾಗವಹಿಸಲಿಕ್ಕೆ ಇನ್ನೂ ಹೆಚ್ಚು ಅವಕಾಶ ಸಿಗಬೇಕು ಈ ಒಂದು ಸದುದ್ದೇಶ ಒಂದು ಕಡೆ ಇದೆ. ಆದರೆ ಇದರಿಂದ ರಾಜ್ಯದ ಪ್ರಗತಿ ಮತ್ತು ನಿಜವಾದಂತಹ ಒಂದು ಫಿಸಿಕಲ್ ಡಿಸಿಪ್ಲಿನ್ ಏನು ಎಂದು ಹೇಳಿದರೆ ಆರ್ಥಿಕವಾದ ಒಂದು ಸಂಯಮ, ಶಿಸ್ತು ನಿಯಮ ಏನು ಇದೆ; ಇದಕ್ಕೆ ದೊಡ್ಡ ಆಘಾತವಾಗುತ್ತದೆ. ಇದು ನನ್ನ ನಂಬಿಕೆ. ವೋಟ್ ಆನ್ ಅಕೌಂಟ್ ತೆಗೆದುಕೊಂಡು ಬೇಡಿಕೆಗಳನ್ನು ಮಾಡಿದ ಕೂಡಲೇ ನಿಜವಾಗಿ ಆಯಾಯ ವರ್ಷದ ಅಭಿವೃದ್ಧಿ ಕೆಲಸ ಯಾವಾಗ ಪ್ರಾರಂಭ ಆಗುತ್ತದೆ? ಪ್ರಾರಂಭ ಏಪ್ರಿಲ್ ಒಂದನೇ ತಾರೀಖು ಆಗಬೇಕು, ಆದರೆ ವ್ಯವಸ್ಥಿತವಾಗಿ ನಾವು ಇವತ್ತು ಆಯವ್ಯಯದಲ್ಲಿ ಯೋಜಿಸಿದಂತಹ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಒಂದನೇ ತಾರೀಖು ಏಪ್ರಿಲ್‌ನಲ್ಲಿ ಆಗುವುದಿಲ್ಲ. ಯಾವಾಗಲೋ ಅಂದರೆ ಅಕ್ಟೋಬರ್‌ನಲ್ಲಿ ಅಥವಾ ನವೆಂಬರ್‌ನಲ್ಲಿ ಪ್ರಾರಂಭವಾಗುತ್ತದೆ. 5-6 'ತಿಂಗಳುಗಳ ಕಾಲ ನಮ್ಮ ಕಾರ್ಯಕ್ರಮದ ಅನುಷ್ಠಾನದಲ್ಲಿ ಯೋಜಿತ ಫಲವನ್ನು ಪಡೆಯುವುದಕ್ಕೆ ಸರ್ಕಾರ ಅಸಮರ್ಥ ಆಗುತ್ತದೆ. ಶಾಸಕರಿಗೆ ಕೂಡ ಆಯಾಯ ಸ್ಥಳದಲ್ಲಿ ತಾವು ನೆನೆಸಿದಂತಹ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. I would rather call it an anarchical situation in financial sector. ಇದರಿಂದ ಅರಾಜಕತೆ ಆಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಸೆಪ್ಟೆಂಬರ್‌ವರೆಗೆ ಅವಕಾಶ ಸಿಗುತ್ತದೆ. Then the whole plan will be distorted; lot of distortion will come in.

ಯಾವಾಗ ಬೇಡಿಕೆಗಳು ಬರುತ್ತವೆ? ಬಜೆಟ್ ಯಾವಾಗಲೋ ಮಂಜೂರು ಆಗುತ್ತದೆ. ಆ ಕಡೆಯವರು ಇರಬಹುದು, ಈ ಕಡೆಯವರು ಇರಬಹುದು, ಏನು ಆಗುತ್ತದೆ ಎಂದರೆ ನಮಗೆ ಹೊಸ ಆಲೋಚನೆಗಳು ಬರುತ್ತವೆ. ಆಲೋಚನೆಗಳು ಇಲ್ಲಿಗೇ ನಿಲ್ಲುವುದಿಲ್ಲ. 31ನೇ ಮಾರ್ಚ್ ತಾರೀಖಿಗೆ ಉಳಿಯುವುದಿಲ್ಲ. ಕೆಲವು ಸಾರಿ ನಮ್ಮ ಬಜೆಟ್‌ನಲ್ಲಿ ಬಂದಂತಹ ಆಲೋಚನೆಗಳೆಲ್ಲಾ ಹಾರಿ ಹೋಗಿ ದೇಶಪಾಂಡೆಯವರೇ, ಹೊಸ ಆಲೋಚನೆಗಳು ಬಂದು; that will not be a plan at all. I have been observing, this has happened. With my limited experience as

Finance Minister and holding various portfolios I found that this is the bane of our budget proposition. This is the bane of our State.

ತಾತ್ಕಾಲಿಕವಾಗಿರುವ ಇಂಥಾದ್ದೆಲ್ಲಾ ನನ್ನ ದೃಷ್ಟಿಯಲ್ಲಿ ವಿಕೃತ ಕೃತ್ಯ. ಇದರಿಂದ ಸಮಾಜದ, ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ದುರ್ಬಲ ವರ್ಗದವರನ್ನು ನಾವು ಒಂದು ಸುಭದ್ರವಾದ ಬುನಾದಿಯ ಮೇಲೆ ನೆಲೆಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. Everything will be adhoc, everything will be tentative or everything will be provisional. ಇಡೀ ಆರ್ಥಿಕ ಬುನಾದಿ ಇದರಿಂದ ಕ್ರಮೇಣವಾಗಿ ಶಿಥಿಲಗೊಂಡು ಅದರ ಪರಿಣಾಮ ತಕ್ಷಣ ನಮಗೆ ಕಾಣುವುದಿಲ್ಲ. ಆದರೆ, ಈ ವರ್ಷ ಕಳೆದಂತೆ ಇಡೀ ಕರ್ನಾಟಕ ರಾಜ್ಯದ ಒಂದು ಆರ್ಥಿಕ ಸತ್ವ ಅದರಿಂದ ಸರ್ವನಾಶವಾಗುತ್ತದೆ. This, I have been observing. Karnataka as an economic vibrant/entity will ultimately be invisible.

ಏಕೆಂದರೆ ಈ ಒಂದು ಆರ್ಥಿಕ ರಥ ಮುಂದೆ ಹೋಗಬೇಕಾದರೆ ಅದರ ಹತೋಟಿ ರಥಿಕನ ಕೈಯಲ್ಲಿರಬೇಕು. ಅದು ಹಣಕಾಸು ಮಂತ್ರಿ ಕೈಯಲ್ಲಿರಬಹುದು, ಮುಖ್ಯಮಂತ್ರಿಗಳ ಕೈಯಲ್ಲಿರಬಹುದು. ಇದು ಯಾರದೋ ಕೈಗೆ ಹೋದರೆ ಈ ರಾಜ್ಯ ಮುಂದೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ನಾವೇನಾದರೂ ಇವೊತ್ತು ಇದರ ಬಗ್ಗೆ ಸೈದ್ಧಾಂತಿಕವಾಗಿ ಒಮ್ಮೆ ಚರ್ಚೆ ಮಾಡಬಹುದು. ಏಕೆಂದರೆ, ಈ ಬಡ್ಜೆಟ್ಟು, exercise, rituals, ಆಗಿ demands discussions ಇದೆಲ್ಲಾ ಒಂದು ಕಡೆ. ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಕಾಲದಲ್ಲಾದರೂ, this is my desire –once we must discuss why agriculturally, industrially and scientifically, we are slipping out.

ಇದಕ್ಕೆ ಮೂಲ ಕಾರಣವೇನು? ಇದರ ಆತ್ಮಾವಲೋಕನವನ್ನು ನಾವು ಈ ಸದನದಲ್ಲಿ ಮಾಡಬೇಕು. ನಾವು ಬೇರೆ ಕಡೆಗಳಲ್ಲಿ ಸೆಮಿನಾರ್, ಸಿಂಪೋಸಿಯಂ ಮಾಡತಕ್ಕಂಥಾದ್ದು ಉಂಟು. ಆದರೆ ಅದು ಅಲ್ಲಿಗೇ ನಿಂತು ಹೋಗುತ್ತದೆ. ಅದು ಒಂದು ರೀತಿಯಲ್ಲಿ ಪರಿಣಾಮಕಾರಿಯಾಗಬಹುದು. ಆದರೆ, ಇಡೀ ಸದನದಲ್ಲಿ ನಾವು ಇವೊತ್ತು ಕರ್ನಾಟಕ ರಾಜ್ಯದ ಜನತೆ ಜವಾಬ್ದಾರಿಯುತವಾದಂಥ ಒಂದು ಸೈದ್ಧಾಂತಿಕವಾದಂಥ ಮತ್ತು ಕರ್ನಾಟಕವನ್ನು ಕಟ್ಟತಕ್ಕಂಥ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ನಮ್ಮ ವ್ಯಕ್ತಿತ್ವದ ಮೌಲ್ಯಮಟ್ಟವನ್ನು ಕೆಲವು ಸಲ ಕರ್ನಾಟಕ ರಾಜ್ಯದ ವ್ಯಕ್ತಿತ್ವ, ಮುಖ್ಯಮಂತ್ರಿಗಳ ವ್ಯಕ್ತಿತ್ವ, ಮಂತ್ರಿಗಳ ವ್ಯಕ್ತಿತ್ವವನ್ನು ಸೇರಿಸಿ ನಾವು ತೊಂದರೆಯುಂಟು ಮಾಡಿದ್ದೇವೆ. ನಮ್ಮ ಕರ್ನಾಟಕ ರಾಜ್ಯಕ್ಕೆ ಹಾಗೂ ಈ ರಾಜ್ಯದ ಜನರಿಗೆ ಇವೊತ್ತು ನನ್ನ ಹಾಗೂ ನಮ್ಮೆಲ್ಲರ ಕೇಂದ್ರ ಬಿಂದು ಏನಿರಬೇಕು ಅಂದರೆ ಕರ್ನಾಟಕ ರಾಜ್ಯದ ಜನತೆ, ಕರ್ನಾಟಕ ರಾಜ್ಯ ದೇಶದಲ್ಲಿ ಈ ಪರ್ಸನಾಲಿಟಿ ಏನಿದೆ, ಇದು ಇವೊತ್ತು ಪ್ರೊಜೆಕ್ಟ್ ಆಗಬೇಕು. ದೇಶದಲ್ಲಿ ಮಾತ್ರವಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಇದನ್ನು ನಾವು ಪ್ರೊಜೆಕ್ಟ್ ಮಾಡಬೇಕಾಗುತ್ತದೆ. ಇದರಿಂದ ಮುಂದೆ ಬರತಕ್ಕಂಥ ಫಲ ಏನಿದೆ ಅದು ಶಾಶ್ವತವಾಗಿರುತ್ತದೆ. ಇಲ್ಲದಿದ್ದರೆ ನಾವು ಮುಖ್ಯಮಂತ್ರಿಯಾಗಿ ಘೋಷಣೆ ಮಾಡತಕ್ಕಂಥಾದ್ದು ಅಥವಾ ನಾನೇನು ಕಾರ್ಯಕ್ರಮಗಳನ್ನು ಘೋಷಣೆ ಮಾಡುವಂಥಾದ್ದು ನನ್ನ ಪ್ರತಿಷ್ಠೆಯನ್ನು ನಾನು ಕರ್ನಾಟಕ ರಾಜ್ಯದಲ್ಲಿ, ಮೆಹಲಿಯಲ್ಲಿ ಮತ್ತೊಂದು ಕಡೆ ಹೆಚ್ಚಿಸಿಕೊಳ್ಳತಕ್ಕದ್ದು ಆದರೆ ಏನಾಗುತ್ತದೆ? ಈವೊತ್ತು ತಾವೆಲ್ಲಾ ನೋಡಿದ್ದೀರಿ. ವಾಟಾಳ್ ನಾಗರಾಜ್‌ರವರೇ, ಅದು ಎಲ್ಲಿಯವರೆಗೆ ನಿಲ್ಲುತ್ತದೆ? ನಾನು ಅಧಿಕಾರದಿಂದ ನಿರ್ಗಮಿಸಿದ ಕೂಡಲೇ ಅದು ತನ್ನಷ್ಟಕ್ಕೆ ತನ್ನ ದಾರಿ ಹಿಡಿಯುತ್ತದೆ, ಕಾರ್ಕಳದ ದಾರಿ ಅದು ಹಿಡಿಯುತ್ತದೆ ಅಥವಾ ನಮ್ಮಗಳ ಊರಿನ ದಾರಿ ಹಿಡಿಯುತ್ತದೆ. ಆದರೆ, ನಮ್ಮ ಕರ್ನಾಟಕ ರಾಜ್ಯದ ದಾರಿ, ಹೆದ್ದಾರಿ

ಏನಿರಬೇಕು, ಅದು ಇವೊತ್ತು ಕರ್ನಾಟಕ ರಾಜ್ಯದ ಜನರನ್ನು ಮುಂದೆ ಕೊಂಡೊಯ್ಯುವುದಕ್ಕೆ ಯೋಜಿತವಾದಂಥ ಒಂದು ಗುರಿ ಕಡೆಗೆ ನಮ್ಮನ್ನು ತಲುಪಿಸಬೇಕು. ಇಂತಹ ಪ್ರಾಮಾಣಿಕವಾದಂಥ ಅನಿಸಿಕೆಗಳು ನನ್ನಂಥವರಿಗೆ ಅಥವಾ ಇಲ್ಲಿ ಪೀಠದಲ್ಲಿ ಕುಳಿತಿದ್ದವರಿಗೆ ಬರಬಹುದು. ಅಧಿಕಾರಕ್ಕೆ ನಾವು ಬರಬಹುದು, ನೀವು ಬರಬಹುದು, ಅದು ಪ್ರಮುಖವಲ್ಲ. ಆದರೆ, ಕರ್ನಾಟಕ ರಾಜ್ಯ ನಿರಂತರವಾಗಿ ನಡೆಯುತ್ತಿರಬೇಕು. We should march on in a vibrant. ಈವೊತ್ತು ನಾವು ಇದರ ಬಗ್ಗೆ ಪ್ರಾಮುಖ್ಯವಾಗಿ ಹೆಚ್ಚು ಗಮನ ಕೊಡಬೇಕಾಗಿದೆ. ನನಗನ್ನಿಸುತ್ತದೆ: ನಾವು ಹೇಗೂ ವರ್ಷದಲ್ಲಿ ನೂರು ದಿವಸಗಳ ಕಾಲ ಅಧಿವೇಶನ ಸೇರಬೇಕೆಂದು ನಿರ್ಣಯ ಮಾಡಿದ್ದೇವೆ. ಏತನ್ಮಧ್ಯೆ, ಮತ್ತೊಮ್ಮೆ ಸರಿಯಾಗಿ ಇದರ ಬಗ್ಗೆ ಕೆಲವು ಸೈದ್ಧಾಂತಿಕವಾದಂಥ ವಿಚಾರಗಳನ್ನು ನಾವು ಮುಂದಿಟ್ಟುಕೊಂಡು ಕರ್ನಾಟಕ ರಾಜ್ಯದ ಜನರನ್ನು ಕಟ್ಟತಕ್ಕಂಥ ದಿಸೆಯಲ್ಲಿ ಈ ಸದನದಲ್ಲಿರತಕ್ಕಂಥ ಜನಪ್ರತಿನಿಧಿಗಳಾದ ನಾವುಗಳು ಇವೊತ್ತು ವಿಶೇಷವಾದಂಥ ಒಂದು ಚಿಂತನೆಯ ದಾರಿಯಲ್ಲಿದ್ದೇವೆ. ಆ ಒಂದು ದಿಕ್ಕಿಗೆ ಕೊಂಡೊಯ್ಯತಕ್ಕಂಥ ಪರಿಸ್ಥಿತಿಯನ್ನು ನಾವು ಇವೊತ್ತು ನಿರ್ಮಾಣ ಮಾಡಬೇಕಾಗಿದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ಈ ಸಾಮಾನ್ಯ ಚರ್ಚೆಯಲ್ಲಿ ಬಹಳ ಜನ ಸದಸ್ಯರು ಭಾಗವಹಿಸಿದ್ದಾರೆ. ತಾವು ಏನು, ಈ ರಾಜ್ಯದ ಜನರ ಜೀವನದ ವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಸೈದ್ಧಾಂತಿಕವಾಗಿ ಒಂದು ಸ್ಪಷ್ಟವಾದ ದಾರಿಯನ್ನು ಹುಡುಕಿಕೊಳ್ಳಬೇಕು ಎಂದು ಹೇಳಿದ್ದೀರಿ. By making this statement are you admitting that you have not yet made such an exercise in ideology? You are admitting. I do realise that such an excercise is necessary. But, when we try to participate in such an exercise, nobody, none of you will be here.

ಇದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಸಭಾನಾಯಕರಾಗಿ ತಾವು ಮಾಡುತ್ತೀರಾ? ನಿರ್ದಿಷ್ಟವಾದ ಕಾಲವನ್ನು ನಿಗದಿ ಮಾಡಬೇಕು, ಅದರ ಬಗ್ಗೆ ಸೈದ್ಧಾಂತಿಕವಾಗಿ ಚರ್ಚೆ ಮಾಡಬೇಕು. ಅದನ್ನು ಮಾಡದಿದ್ದರೆ ಈ ವರ್ಷದಿಂದ ಆಚೆಗೆ ನಾವೆಲ್ಲರೂ ಈ ದೇಶದ ಜನರಿಗೆ ದ್ರೋಹ ಬಗೆದಂಥ ರಾಜಕಾರಣಿಗಳೆಂದು ಇತಿಹಾಸದ ಪುಟಗಳಲ್ಲಿ ಬರೆಸಿಕೊಳ್ಳಬೇಕಾಗುತ್ತದೆ. ನಾವು ಈಗ ಬಹಳ ಮುಖ್ಯವಾದ ತಿರುವಿನಲ್ಲಿದ್ದೇವೆ, ಇದರ ಬಗ್ಗೆ ನಮಗೆ ಪ್ರಜ್ಞೆಯೇ ಇಲ್ಲ, ಇದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ; ಈ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಇರತಕ್ಕ ಸರ್ಕಾರದಲ್ಲಿ ಇದು ಇದೆ.

Are you aware that we are going to become perennial slaves of the developing countries? Are you aware of it. It is not necessary if you just write a paragraph on Dunkel draft and then forget about it. ಡಂಕಲ್ ಪ್ರಪೋಸಲ್ ಬಗ್ಗೆ ನಾನೂ ಮಾತನಾಡಿದ್ದೇನೆ; ಬಹಳ ಜನರೂ ಕೂಡ ಮಾತನಾಡಿದ್ದಾರೆ, ಸುಮ್ಮನೆ ನಾನು ಅದನ್ನು ವಿರೋಧ ಮಾಡುತ್ತೇನೆಂದು ಹಲವಾರು ಸದಸ್ಯರು ಹೇಳಿದ್ದಾರೆ. ಈ ಸಮಸ್ಯೆ ಏನು ಇದೆ ಇದರಿಂದ ನಾವು ತಪ್ಪಿಸಿಕೊಂಡು ಹೋದರೆ ಅದರಿಂದ ಏನೂ ಪ್ರಯೋಜನವಿಲ್ಲ.

Tell me now whether you are prepared to get the Dunkel Draft translated into Kannada and ask your Prime Minister to translate it into Hindi and then circulate it among M.Ps and then have a threadbare discussion on it and then discuss your Budget whcih you have presented in this house, otherwise, your exercise will be totally a futile one.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಪ್ರೊ. ನಂಜುಂಡ ಸ್ವಾಮಿಯವರು

ಯಾವಾಗಲೂ ಅವರದೇ ಆದ ಒಂದು ವೈಶಿಷ್ಟಪೂರ್ಣವಾದಂಥ ವಾದವನ್ನು ಸಭೆಯ ಮುಂದಿಡುತ್ತಾರೆ. ವಾದದ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ, ಆದರೆ ಅದರ ಜೊತೆಯಲ್ಲಿ ಇದನ್ನು ಚಿಂತನೆ ಮಾಡೋಣವೆಂದು ನಾನು ಹೇಳಿದ್ದೇನೆ. ನನ್ನ ಬಜೆಟನ್ನು ಓದಿ ಒಟ್ಟು ಅಭಿಪ್ರಾಯವನ್ನು ತಿಳಿದುಕೊಂಡು ತಾವೇ ಯಾವ ಅಭಿಪ್ರಾಯ ಹೊಂದುತ್ತೀರೋ ಅದಕ್ಕೆ ನನ್ನ ಚರ್ಚೆ ಇಲ್ಲ. ಆದರೆ ಈ ಒಂದು ವಿಚಾರವನ್ನು ಈ ಸದನದಲ್ಲಿ ಚರ್ಚೆ ಮಾಡಬೇಕೆಂದು ತಾವೂ ಸೂಚನೆ ಕೊಡಬಹುದು. ನಾನೂ ಸಹ ಈ ಸೂಚನೆಯನ್ನು ಕೊಡುತ್ತಿದ್ದೇನೆ, ಈ ಚರ್ಚೆ ನಾವು ಮಾಡೋಣ.

ಶ್ರೀ ಪಿ. ಕೆ. ಅನಂತಕೃಷ್ಣ:- ಚರ್ಚೆ ಮಾಡಬೇಕೆಂದು ನಾವೂ ಹೇಳಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ನೀವು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಮಾನ್ಯ ನಂಜುಂಡ ಸ್ವಾಮಿಯವರು ಹೇಳಿದಂಥ ವಿಚಾರಗಳ ಬಗ್ಗೆ ನಾನು ಮುಂದೆ ಉತ್ತರವನ್ನು ಕೊಡುತ್ತೇನೆ. ಇದರಲ್ಲಿ ಮುಖ್ಯವಾಗಿ ಯಾವ ಸೈದ್ಧಾಂತಿಕವಾದಂಥ ಒಂದು ಹಿನ್ನೆಲೆಯನ್ನು ಹೇಳಲಿಕ್ಕೆ ಹೋದೆ.

Prof. M. D. Nanjunda Swamy:- I don't normallly interfere with you unless it is very important. Kindly yield to me. It is my request.

Sri M. Veerappa Moily:- I have just started with a preamble.

ಅಧ್ಯಕ್ಷರು:- ಅವರು ಉತ್ತರ ಹೇಳಿದ ನಂತರ ನಿಮಗೆ ಅವಕಾಶ ಮಾಡಿಕೊಡುತ್ತೇನೆ.

Prof. M. D. Nanjundaswamy:- Sir, I am trying to tell you how the whole excercise of yours or of any other State Legislature in this country will be a futile one unless you wake up to the situation.

ಮಾನ್ಯ ಸಭಾಧ್ಯಕ್ಷರೇ,..ನಾನು ಸುಮ್ಮನೆ ಡಂಕಲ್ ಪ್ರಸ್ತಾವನೆಯ ಬಗ್ಗೆ ಮಾತನಾಡುತ್ತಿಲ್ಲ. ಅಲ್ಲಿ ನೆಗೋಶಿಯೇಷನ್ಸ್ ಏನು ಆಗುತ್ತಿದೆ, ಅದರಲ್ಲಿ ನಾವು ಸಂವಿಧಾನದಲ್ಲಿ ಏನು ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ ಅದರ ಪ್ರಕಾರ ನಮ್ಮ ವಾಣಿಜ್ಯ ಮಂತ್ರಾಲಯದ ಅಧಿಕಾರಿಗಳು ಹೋಗಿ ರುಜು ಹಾಕಬೇಕು. ಈ ರುಜುವನ್ನು ಹಾಕುವುದರಿಂದ ಏನು ಪರಿಣಾಮವಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು ? I am going to send you this copy also. You can have a look at it. According to article 253 of the Constitution, ಯೂನಿಯನ್ ಎಕ್ಸಿಕ್ಯೂಟಿವ್ ರುಜುವನ್ನು ಹಾಕಿದ ಕೂಡಲೇ Parliament gets the powers to legislate on all the commitments made by the Union Executive and the Union legislature need not ratify it. The Union Executive need not go to the Union Legislature to get ratification. It takes away all the powers of the State.

ಇದರಿಂದ ಏನು ಪರಿಣಾಮ ಆಗಿದೆ, ಈಗ ನಡೆಯುತ್ತಿರುವ ಗ್ಯಾಟ್ ಮಾತುಕತೆಯಿಂದ ಏನಾಗಿದೆ ಅಂದರೆ it takes away all the powers of the State. ಸ್ಟೇಟ್ ಲಿಸ್ಟ್‌ನಲ್ಲಿರುವ ಸುಮಾರು 10–20 ವಿಷಯಗಳ ಬಗ್ಗೆ, ಕನ್ಕರೆಂಟ್ ಲಿಸ್ಟನಲ್ಲಿರುವ ಸುಮಾರು 15 ವಿಷಯಗಳ ಬಗ್ಗೆ it takes away all the powers. Dunkel Draft is going to amend the Indian Constitution. It is going to destroy the federal structure itself.

ಶ್ರೀ ಎಂ. ವೀರಪ್ಪ ಮೊಯಿಲಿ:- ಇದರ ಅನಂತರ ಬೇರೆ ರೀತಿಯಲ್ಲಿ ಚರ್ಚೆ ಮಾಡೋಣ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ:- ನಾನು ಜಾಸ್ತಿ ಮಾತನಾಡುವುದಿಲ್ಲ. ಮಾನ್ಯ ಅಧ್ಯಕ್ಷರೆ,

ಇದನ್ನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ. ದಯವಿಟ್ಟು ಇದನ್ನು ಓದಿ ನೋಡಿ. You will go down in the pages of history as people who are treacherous to the Indian people after getting their mandate.

ಜನಗಳಿಂದಲೇ ಆಯ್ಕೆಯಾಗಿ ರಾಷ್ಟ್ರದ್ರೋಹವನ್ನು ಮಾಡಿದವರು ಎಂದು ಅನ್ನಿಸಿಕೊಳ್ಳುತ್ತೀರಿ. ಆದ್ದರಿಂದ ನಾನು ಮಧ್ಯೆ ಪ್ರವೇಶ ಮಾಡಿದೆನೇ ಹೊರತು ಇನ್ನು ಯಾವುದಕ್ಕೂ ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ಈಗ 93–94ರ ಆಯವ್ಯಯದಲ್ಲಿ 4 ಅಂಶಗಳನ್ನು ಇದರಲ್ಲಿ ಅಳವಡಿಸಿದ್ದೇವೆ. ಒಟ್ಟು ಆಯವ್ಯಯ ಕೊರತೆಯನ್ನು ತಹಬಂದಿಯಲ್ಲಿಡತಕ್ಕದ್ದು. ಅದರಲ್ಲೂ ರಾಜಸ್ವ ಕೊರತೆ ಇಲ್ಲದಂತೆ ನೋಡಿಕೊಳ್ಳತಕ್ಕದ್ದು. ಏಕೆಂದರೆ ರಾಜಸ್ವ ಕೊರತೆ ಇದ್ದರೆ ಯಾವುದೇ ಬಂಡವಾಳ ಹೂಡಿಕೆ ಅಥವಾ ಯಾವುದೇ ಯೋಜನೆಯನ್ನೂ ನಾವು ಜಾರಿಗೆ ತರುವುದಕ್ಕೆ ಬರುವುದಿಲ್ಲ. ಎರಡನೆಯದಾಗಿ ಹೊಸ ತೆರಿಗೆಯ ಭಾರವನ್ನು ಅತ್ಯಂತ ಕಡಿಮೆ ಮಾಡತಕ್ಕದ್ದು ಹಾಗೂ ಕರ ವಸೂಲಾತಿಗೆ ಹೆಚ್ಚು ಆದ್ಯತೆ ನೀಡತಕ್ಕದ್ದು. ಮೂರನೆಯದಾಗಿ ಅಭಿವೃದ್ಧಿಗೆ ಹೆಚ್ಚು ಒತ್ತು, ನಾಲ್ಕನೆಯದಾಗಿ ರಾಷ್ಟ್ರೀಯ ಆರ್ಥಿಕ ನೀತಿಯನ್ನು ಆದಷ್ಟೂ ಅಳವಡಿಸಿಕೊಳ್ಳತಕ್ಕದ್ದು. ಈ ಮೂಲಭೂತ ಅಂಶಗಳನ್ನೊಳಗೊಂಡು ಈ ಆಯವ್ಯಯವನ್ನು ತಯಾರಿಸಿದ್ದೇವೆ. ಮುಖ್ಯವಾಗಿ ಒಟ್ಟು ಖರ್ಚಿನಲ್ಲಿ ಅಭಿವೃದ್ಧಿಯ ಅಂಶ ಎಷ್ಟಿದೆ ಎಂಬುದು ಬಹಳ ಮುಖ್ಯ. The share of developmental expenditure in the total expenditure outlay.

81–82ರಲ್ಲಿ ನಾನು ಅರ್ಥಮಂತ್ರಿಯಾಗಿದ್ದೆ. ಆಗ 72 ಪರ್ಸೆಂಟ್ ಇತ್ತು. ಅನಂತರದ ಕೆಲವು ವರ್ಷಗಳ ಅಂಕಿ ಅಂಶಗಳನ್ನು ನಾನು ಕೊಡುತ್ತೇನೆ. 89–90ರಲ್ಲಿ 69 ಪರ್ಸೆಂಟ್, 90–91ರಲ್ಲಿ 71 ಪರ್ಸೆಂಟ್, 91–92ರಲ್ಲಿ 71 ಪರ್ಸೆಂಟ್, 92–93ರಲ್ಲಿ 71 ಪರ್ಸೆಂಟ್ ಮತ್ತು 93–94ಕ್ಕೆ ತಾವು ಏನು ಬಜೆಟ್ ತಯಾರಿಸಿದ್ದೇವೆ ಇದರಲ್ಲಿ 74 ಪರ್ಸೆಂಟ್. ಇದು ಡೆವಲಪ್‌ಮೆಂಟ್ ಔಟ್‌ಲೇ. ಏಕೆಂದರೆ ಅಭಿವೃದ್ಧಿಯ ಬಗ್ಗೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕು. It is the highest in all these 13–14 years.

13–14 ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಖರ್ಚಿಗೆ ಏನು ಹಣವನ್ನೊದಗಿಸಿದ್ದೇವೆ ಅದು ಅತಿ ಹೆಚ್ಚು ಎಂದರೆ 74 ಪರ್ಸೆಂಟ್ ಪರ್ ಕ್ಯಾಪಿಟಾ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಎಂಬುದು ಬಹಳ ಮುಖ್ಯ. ಇದನ್ನು ಕೆಲವು ವರ್ಷಗಳಿಗೆ ಹೋಲಿಸಿದರೆ, 90–91ರಲ್ಲಿ 789, 91–92ರಲ್ಲಿ 977, 92–93ರಲ್ಲಿ 1114 ಮತ್ತು 93–94ರಲ್ಲಿ 1358. ಇದನ್ನು ವಿಶೇಷವಾಗಿ ನಾವು ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ. ನಾನ್‌ಪ್ಲಾನ್‌ನಲ್ಲೂ ಕೂಡ ಡೆವಲಪ್‌ಮೆಂಟ್ ಕಾಂಪೊನೆಂಟ್‌ನ್ನು ವಿಶೇಷವಾಗಿ ನಾವು ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ. Share of Plan Expenditure in the total outlay, ಏತಕ್ಕೆಂದರೆ ಡೆವಲಪ್‌ಮೆಂಟ್, ನಾನ್‌ಡೆವಲಪ್‌ಮೆಂಟ್ ಇದೆ. ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ, ನಾನ್‌ಪ್ಲಾನ್‌ನಲ್ಲೂ ಕೂಡ ಡೆವಲಪ್‌ಮೆಂಟ್ ಕಾಂಪೊನೆಂಟ್ ಇದೆ. The share of plan expenditure in the total expenditure percentage wise. ನಾನು ಅರ್ಥ ಸಚಿವನಾಗಿದ್ದಾಗ 1980–81ರಲ್ಲಿ 33 ಪರ್ಸೆಂಟ್ ಆಮೇಲೆ ಇದು 1989–90ರಲ್ಲಿ 33 ಪರ್ಸೆಂಟ್, 1990–91ರಲ್ಲಿ 28 ಪರ್ಸೆಂಟ್, 1991–92ರಲ್ಲಿ 31 ಪರ್ಸೆಂಟ್, 1992–93ರಲ್ಲಿ 33 ಪರ್ಸೆಂಟ್, 1993–94ರಲ್ಲಿ 36 ಪರ್ಸೆಂಟ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲೂ ಕೂಡ. ಅದೇ ರೀತಿಯಲ್ಲಿ share of rural sector in the total Plan Expenditure. ಇದು ಕೂಡ ಅಷ್ಟೇ, ಈಗ 65 ಪರ್ಸೆಂಟ್ 1993–94ರಲ್ಲಿ, ಆಮೇಲೆ 1992-93ರಲ್ಲಿ 64 ಪರ್ಸೆಂಟ್, 1991-92ರಲ್ಲಿ 62 ಪರ್ಸೆಂಟ್, 1990-91ರಲ್ಲಿ 60 ಪರ್ಸೆಂಟ್ ಇರಿಗೇಷನ್ ಸೆಕ್ಟರ್‌ನಲ್ಲೂ ಕೂಡ

the share of major Plan Sectors for e.g. Sector like Irrigation to the total Plan Outlay. 1981-82ರಲ್ಲಿ 20 ಪರ್ಸೆಂಟ್ ನಾವು ಕೊಟ್ಟಿದ್ದೇವೆ. ಆಮೇಲೆ 1990-91ರಲ್ಲಿ 15 ಪರ್ಸೆಂಟ್, 1991-92ರಲ್ಲಿ 15 ಪರ್ಸೆಂಟ್, 1992-93ರಲ್ಲಿ 16 ಪರ್ಸೆಂಟ್, 1993-94ರಲ್ಲಿ 20 ಪರ್ಸೆಂಟ್. ಈಗ ನಾನು ಸ್ವಲ್ಪ ಉದಾಹರಣೆಯಾಗಿ ಹೇಳುತ್ತೇನೆ, ಅದೇ ರೀತಿಯಲ್ಲಿ ಬೇರೆ ಬೇರೆ ಸೆಕ್ಟರ್‌ನಲ್ಲಿ ಇವತ್ತು ಅಭಿವೃದ್ಧಿಯಾಗಬೇಕು, ಬಂಡವಾಳ ಹೂಡಿಕೆ ನಡೆಯಬೇಕು, ಪರ್‌ಕ್ಯಾಪಿಟಾ ಏನು ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರನ್ನು ಜಾಸ್ತಿ ಮಾಡಬೇಕು. ಇದನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಈ ಒಂದು ಆಯವ್ಯಯವನ್ನು ಈ ಸದನಕ್ಕೆ ನಾವು ಕೊಟ್ಟಿದ್ದೇವೆ. ಈಗ ರಾಜಸ್ವ ಉಳಿತಾಯ ಅದು 396 ಕೋಟಿ ಎಂದು ಈಗಾಗಲೇ ಹೇಳಿದ್ದೇವೆ. ಇನ್ನು ನಾವು ಯೋಜನೇತರ ವೆಚ್ಚವನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಯಾವುದೇ ಒಂದು ರಾಜ್ಯದ ಅಭಿವೃದ್ಧಿ ಆಗಬೇಕಾದರೆ ಯೋಜನೇತರ ವೆಚ್ಚವನ್ನು ಸಂಪೂರ್ಣವಾಗಿ, ಸ್ಪಷ್ಟವಾಗಿ ಹತೋಟಿಯಲ್ಲಿ ಇಟ್ಟುಕೊಳ್ಳಲಿಕ್ಕೆ ಸಂಪೂರ್ಣವಾದಂಥ ಒಂದು ಪ್ರಯತ್ನ ಈ ಆಯವ್ಯಯದಲ್ಲಿ ಕಾಣಿಸಿದ್ದೇವೆ. ಅದು ಏನೆಂದರೆ ಯೋಜನೆಯ ಮೊಬಲಗು ಶೇಕಡ 40 ಆದರೆ, ಈ ವರ್ಷ 1993-94ರಲ್ಲಿ ಯೋಜನೆಯ ಮೊಬಲಗಿನ ಗ್ರೋತ್ ರೇಟ್ ಅದು 40 ಪರ್ಸೆಂಟ್. ಯೋಜನೇತರದ್ದು 12 ಪರ್ಸೆಂಟ್ ಮಾತ್ರ. ಇದು ಕೆಲವು ಸಲ ಲಾಪ್ ಸೈಡೆಡ್ ಆದರೆ ಎಷ್ಟೇ ನೀವು ಹಣವನ್ನು ಕೊಡಿ ಯೋಜನೇತರ ವೆಚ್ಚ ಜಾಸ್ತಿಯಾದ ಕೂಡಲೇ it will be a lopsided development, forty percent development increase growth rate.

ಆದರೆ ನಾನ್ ಡೆವಲಪ್‌ಮೆಂಟ್ 12 ಪರ್ಸೆಂಟ್. ಈಗ ಸಂಬಳ ಸಾರಿಗೆ ವೆಚ್ಚದ ಬಗ್ಗೆ ಕೂಡ ಸಾಕಷ್ಟು ಚರ್ಚೆ ಈ ಸದನದಲ್ಲಿ ಆಗಿದೆ. ಅನೇಕ ಮಾನ್ಯ ಸದಸ್ಯರು ಮುಖ್ಯವಾಗಿ ನಮ್ಮ ವೈ. ಕೆ. ರಾಮಯ್ಯನವರು ಮತ್ತು ವಿರೋಧಪಕ್ಷದ ನಾಯಕರು, ಹಾಗೂ ಏಕಾಂತಯ್ಯನವರು ಸ್ಪಷ್ಟವಾಗಿ ಹೇಳಿದ್ದಾರೆ. ಅಂದರೆ ಇದನ್ನು ಒಂದು ಹತೋಟಿಗೆ ತರಬೇಕೆಂದು ಹೇಳಿ. ನಾವು ಅದರ ಬಗ್ಗೆ ವಿಶೇಷ ಆಸಕ್ತಿಯನ್ನು ಹೊಂದಿ ಸಂಬಳ ಸಾರಿಗೆ ಮೇಲಿನ ವೆಚ್ಚವನ್ನು ಶೇಕಡಾ 25ಕ್ಕೆ ಸೀಮಿತಗೊಳಿಸತಕ್ಕಂಥ ಒಂದು ಸೂಚನೆಯನ್ನು ಕೊಟ್ಟಿದ್ದೇವೆ. ಆ ಸೂಚನೆಯನ್ನು ಕೊಟ್ಟಿದ್ದು ಮಾತ್ರವಲ್ಲ. ಈ ಆಯವ್ಯಯದಲ್ಲಿ ಇದನ್ನು ಹೇಗೆ ನಾವು ಹತೋಟಿಯಲ್ಲಿ ಇಡಲಿಕ್ಕೆ ಸಾಧ್ಯವಿದೆ ಎಂಬುದರ ಬಗ್ಗೆ ಯೋಚನೆ ಮಾಡಿ ಕ್ರಮ ಕೈಗೊಂಡಿದ್ದೇವೆ. ಈ ಗ್ರೋತ್ ರೇಟಿನ ವಿಚಾರ ಮಾಡಿದರೆ ಅದು ಒಂದು ಪ್ರಾಮಾಣಿಕವಾದಂಥ ಒಂದು ಪ್ರಯತ್ನದ ಅರಿವು ಕೂಡ ತಾವು ಖಂಡಿತವಾಗಿಯೂ ಕೂಡ ಕಾಣಬಹುದು. ನಾವು ಮತ್ತೊಂದು ವಿಶೇಷವಾದಂಥ ಒಂದು ಸಂದೇಶ ಈ ಆಯವ್ಯಯದ ಮುಖಾಂತರ ನಾವು ಏನು ಕೊಟ್ಟಿದ್ದು ಎಂದರೆ ಈ ಯೋಜನೆಯನ್ನು ನಾವು ತಿರುಚಬಾರದು. ಒಮ್ಮೆ ಈ ಯೋಜನೆಯನ್ನು ನಮ್ಮ ಸದನ ಮಂಜೂರಾತಿ ಕೊಟ್ಟ ಮೇಲೆ ಅದನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ಮಾಡದೇ ಇದ್ದರೆ ಆ ಗುರಿ ತಲುಪಲಿಕ್ಕೆ ಆಗುವುದಿಲ್ಲ.

ಇದರ ಬಗ್ಗೆ ನಾನು ವಿಶೇಷವಾದ ಗಮನವನ್ನು ಈ ಆಯವ್ಯಯವನ್ನು ನಮೂದಿಸುವಾಗ ಕೊಟ್ಟಿದ್ದೇನೆ. ಅದುದರಿಂದ ಯಾವುದೇ ಕಾಮಗಾರಿಗಳು, ದೊಡ್ಡ ದೊಡ್ಡ ಕಾಮಗಾರಿಗಳು, ಹೊಸ ಹೊಸ ಕಾರ್ಯಕ್ರಮಗಳ ಬಗ್ಗೆ ಆಯವ್ಯಯದ ಮೊದಲೇ ಆಲೋಚಿಸಬೇಕಾಗುತ್ತದೆ. ಮಧ್ಯದಲ್ಲಿ ಆಲೋಚಿಸುವಾಗ ಸಾಕಷ್ಟು ಡಿಸ್ಟ್ರಾಕ್ಷನ್ ಆಗುತ್ತದೆ. ನೂರಾರು ಕೋಟಿ ರೂಪಾಯಿಗಳು ಈ ಒಟ್ಟು ಯೋಜನೆಯ ಖರ್ಚು ಎಂದು ಕಾಣಬಹುದು. ಆದರೆ ಆ ಯೋಜನೆ ಎಲ್ಲಿ, ಯಾವ ಯೋಜನೆ ಎಂದು ಗೋಚರವೋ ಅಗೋಚರವೋ ಆಗಿ ಅನೇಕ ಪ್ರತಿಕ್ರಿಯೆಗಳು ಅದರಿಂದ ಬಂದು ನಮಗೆ ವಿಶೇಷವಾಗಿ ತೊಂದರೆ ಆಗಲಿಕ್ಕೆ ಸಾಧ್ಯವಿದೆ. ಇದರಿಂದ ಸಾಕಷ್ಟು ಈ ಯೋಜನೆಯ ಖರ್ಚುಗಳು ಹೆಚ್ಚು ಕಡಿಮೆಯಾಗುತ್ತವೆ. ಈಗ ಉದಾಹರಣೆಗೆ ದೊಡ್ಡ ನೀರಾವರಿ. ಒಂದು ಮಾತು ಸ್ಪಷ್ಟವಾಗಿ

ಹೇಳಲಿಕ್ಕೆ ಬಯಸುತ್ತೇನೆ. ಈ ವಿಚಾರಗಳನ್ನು ಎಲ್ಲಾ ಹೇಳುವಾಗ, 1989ರಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಿದೆ. ನಮ್ಮ ಸರ್ಕಾರ ಬೇರೆ, ಹಿಂದೆ ಬಂಗಾರಪ್ಪನವರು ಇದ್ದ ಸರ್ಕಾರ ಬೇರೆ ಅಥವಾ ವೀರೇಂದ್ರ ಪಾಟೀಲರು ಇದ್ದ ಸರ್ಕಾರ ಬೇರೆ ಅಲ್ಲ. We are all one. It is a team going for a relay race.

ಶ್ರೀ ಆರ್. ವಿ. ದೇಶಪಾಂಡೆ:- ಮನಸಾರೆ ಹೇಳುತ್ತಿದ್ದೀರಾ ಅಥವಾ ಸಮಾಧಾನ ಮಾಡಲಿಕ್ಕೆ ಹೇಳುತ್ತಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:- ನಾವು ಒಂದು ರಿಲೇ ರೇಸ್‌ನಲ್ಲಿದ್ದೇವೆಂದು ಮನಸಾರೆ ಹೇಳುತ್ತಿದ್ದೇನೆ.

ಶ್ರೀ ವಾಟಾಳ ನಾಗರಾಜ್:- ಎದೆ ಮುಟ್ಟಿ ಹೇಳುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ:- ಬಂಗಾರಪ್ಪನವರು ಬಂದು ಕುಳಿತಿದ್ದಾರೆಂದು ಹೇಳುತ್ತಿದ್ದೀರಾ ?

ಶ್ರೀ ಎ. ಕೆ. ಅನಂತ ಕೃಷ್ಣ:- ಎದೆಗಾರಿಕೆಯಿಂದ ಹೇಳುತ್ತಿದ್ದೇವೆ.

ಡಾ।। ಜೀವರಾಜ ಆಳ್ವ:- ರಿಲೇ ರೇಸ್ ಏನು ಆಗುತ್ತದೆ ಎಂದು ಹೇಳುತ್ತಿದ್ದಾರೆ, ನೋಡೋಣ ಮುಂದೆ ಏನಾಗುತ್ತದೆಂದು.

Sri C. Byre Gowda:- Relay race usually it will be 100 x 4 ಅಂದರೆ 3 ಆಗಿದೆ, 3 ಜನ ಓಡಿದ್ದಾರೆ; 4 by 100 means, 4ನೆಯವರು ಯಾರು ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:- ಮೇಜರ್ ಸರ್ಜರಿ ಅಗತ್ಯ ಇದೆ ಎಂದು ಹೇಳಿದರಲ್ಲಾ, ಅದು ಯಾವ ಸರ್ಕಾರ ? ಕಳೆದ ಶತಮಾನದಲ್ಲಿ ಇಂಥ ಭ್ರಷ್ಟಾಚಾರದ ಸರ್ಕಾರವನ್ನು ನೋಡಿರಲಿಲ್ಲವೆಂದು ತಾವು ಹೇಳಿದಿರಲ್ಲಾ ಅದು ಯಾವ ಸರ್ಕಾರ ?

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ರಿಲೇ ರೇಸ್‌ನಲ್ಲಿ ಭಾಗವಹಿಸಲೇ ಇಲ್ಲ. ಅದಕ್ಕೇ ಈ ತಾಪತ್ರಯ ಬಂದಿದೆ.

ಶ್ರೀ ವಾಟಾಳ್ ನಾಗರಾಜ್:- ತಾವು ನಿಜ ಹೇಳುತ್ತಿದ್ದೀರೆಂದು ತಿಳಿದುಕೊಂಡಿದ್ದೆ, ಏತಕ್ಕೆ ಸುಳ್ಳು ಹೇಳುವುದಕ್ಕೆ ಹೊರಟಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ರಿಲೇ ರೇಸಿಗೆ ಬರಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಖಂಡಿತ ಇಲ್ಲ.

ಡಾ।। ಜೀವರಾಜ ಆಳ್ವ:- ಮಾನ್ಯ ಮುಖ್ಯಮಂತ್ರಿಗಳು ಮರೆತಿದ್ದಾರೆಂದು ಕಾಣುತ್ತದೆ. Three legged race ಏನು ಆಯಿತು, Who are the partners? ಬಂಗಾರಪ್ಪನವರು, ವೀರಪ್ಪ ಮೊಯಿಲಿಯವರು That was the greatest failure.

ಶ್ರೀ ಕೆ. ಎಸ್. ಈಶ್ವರಪ್ಪ:- ಮುಖ್ಯಮಂತ್ರಿಯವರೇ, ರಿಲೇ ರೇಸ್‌ನಲ್ಲಿ ಒಬ್ಬರಿಗೊಬ್ಬರು ಸಹಕಾರ ಕೊಟ್ಟು, ಕೈಕೊಟ್ಟು ಮುಂದೆ ಹೋಗುವುದು. ಈ ರಿಲೇ ರೇಸ್‌ನಲ್ಲಿ ಒಬ್ಬರಿಗೊಬ್ಬರು ಕಾಲು ಕೊಟ್ಟು ಬೀಳಿಸುವಂಥ ಪರಿಸ್ಥಿತಿ ಆಗುತ್ತಿದೆಯಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ:- ನಾವು ಎಲ್ಲಾ ಪರಸ್ಪರ ಕೈಕೊಟ್ಟೇ ಮೇಲೆ ಬಂದದ್ದು.

ಶ್ರೀ ಆರ್. ವಿ. ದೇಶಪಾಂಡೆ:- ಕೈ ಕೊಟ್ಟಿದ್ದಾರೆಂದರೆ ....

ಶ್ರೀ ವಾಟಾಳ್ ನಾಗರಾಜ್:- ಕೈಕೊಡುವುದು ಅಂದರೆ ಯಾವ ರೀತಿ ಕೈ ಕೊಟ್ಟಿದ್ದೀರಿ ಅಂತ ?

ಶ್ರೀ ಎ. ಕೆ. ಅನಂತ ಕೃಷ್ಣ:- ಭುಜಕ್ಕೆ ಭುಜ ಕೊಟ್ಟು ಕೈಹಿಡಿದುಕೊಂಡು ....

ಶ್ರೀ ಬಿ. ಎಸ್. ಯಡಿಯೂರಪ್ಪ:- ಮೊನ್ನೆ ಒಂದು ಸ್ವಾರಸ್ಯಕರವಾದ ಕತೆ ಹೇಳಿದ್ದೀರಿ. ಪಡಿಗಳು ಬುಟ್ಟಿಯಿಂದ ಹಾರಲೇ ಇಲ್ಲ, ಕಾಲು ಎಳೆಯುತ್ತವೆ ಎಂದು. ಅದು ಕಾಂಗ್ರೆಸ್‌ಗೆ ಅನ್ವಯವಾಗುವಂಥದ್ದು. ಆ ಪ್ರಸಂಗ ನಿಮ್ಮ ಸರ್ಕಾರಕ್ಕೆ ಅನ್ವಯಿಸುತ್ತದೆ. ಅದನ್ನು ಹೋಲಿಕೆ ಮಾಡಿ ನೀವು ಕೊಟ್ಟಿದ್ದೀರೆಂದು ನಾವು ತಿಳಿದುಕೊಂಡಿದ್ದೇವೆ. ಇಲ್ಲವೆಂದರೆ ವ್ಯತ್ಯಾಸ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಒಟ್ಟು ನಮ್ಮ ಭಾರತದ ಮತ್ತು ಕರ್ನಾಟಕ ರಾಜ್ಯದ ಮನೋವಿಕಲ್ಪತೆಯ ಬಗ್ಗೆ ಒಟ್ಟಿನಲ್ಲಿ ಹೇಳಿದೆ. ಪಕ್ಷದ ಬಗ್ಗೆ ಹೇಳಲಿಲ್ಲ ಆ ದಿವಸ. ಒಟ್ಟು ಮನೋವಿಕಲ್ಪತೆ ಇದೆ. We are in a relay race. ಏತಕ್ಕೆಂದರೆ ನಾನು 3ನೇ ಮನುಷ್ಯ ಇದ್ದೇನೆ. ಈ ರಿಲೇ ರೇಸ್‌ನಲ್ಲಿ. ಆದರೆ ವಿಕ್ಟರಿ ಪೋಸ್ಟಿಗೆ ಬರುವುದು ನಾವೇ. ನೀವು ಬರುವುದಿಲ್ಲ. ನೀವು ಗಾಬರಿಯಾಗಬೇಡಿ. ನಾವು ಹೆಚ್ಚು ಓಡಬಹುದು, ಸ್ವಲ್ಪ ಕಡಿಮೆ ಆಗಬಹುದು. ಕೆಲವು ಸಾರಿ ಎಡವಬಹುದು. ಆದರೆ victory is ours.

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ನಿಮ್ಮದು ಆಗಲೇ ಹೊಂದಾಣಿಕೆ ಆಗಿದೆಯೇ ? ನಾವು ಸಂತೋಷಪಡುತ್ತೇವೆ, ಆ ಪ್ರಶ್ನೆ ಬೇರೆ. ನಿಮ್ಮಲ್ಲಿ ಒಳಗೇ ಏನಾದರೂ ಹೊಂದಾಣಿಕೆ ಆಯಿತೇ ?

ಶ್ರೀ ಕಾಗೋಡು ತಿಮ್ಮಪ್ಪ:- ನಿಮಗೆ ಹಿಂದೆ ಇಲ್ಲ, ಮುಂದೆ ಇಲ್ಲ ....

ಶ್ರೀ ವಾಟಾಳ್ ನಾಗರಾಜ್:- ನನಗೆ ಹಿಂದೆ ಇಲ್ಲ ಮುಂದೆ ಇಲ್ಲವೆಂದು ಹೇಳುತ್ತಾರೆ. ನಾನು ಒಬ್ಬನೇ ಸಾಕು ಅಲ್ಲವೇ ಇಷ್ಟು ಜನಕ್ಕೂ.

ಶ್ರೀ ಎಂ. ವೀರಪ್ಪ ಮೊಯಿಲಿ:- ಒಂದು ಕಡೆ ನಾವು ನಿಮ್ಮನ್ನು ಎಳೆದುಕೊಂಡು ಹೋಗುತ್ತೇವೆ. ಕೆಲವು ಬಾರಿ ಏನೂ ತೊಂದರೆ ಇಲ್ಲ. ವೀರೇಂದ್ರ ಪಾಟೀಲರ ಮಿನಿಸ್ಟ್ರಿಯಲ್ಲಿ ನಾವಿದ್ದೆವು, ಬಂಗಾರಪ್ಪನವರ ಮಿನಿಸ್ಟ್ರಿಯಲ್ಲಿ ಇದ್ದೆವು. We are all partners. Even if there is any lapse, I own it. Even if there is anything, any lapses or any credit or lapses, we both are responsible. ನಾನು ಸದನದ ಹೊರಗೂ ಹೇಳಿದ್ದೇನೆ, ಇವತ್ತೂ ಹೇಳುತ್ತಿದ್ದೇನೆ.

ನಾವು ಪಾಲುದಾರರು. ನಾವು ಈವತ್ತು ಹೊಸ ಸಂಸಾರ ಕಟ್ಟಿಕೊಂಡಿಲ್ಲ, ಹಳೇ ಸಂಸಾರವೇ ನಮ್ಮದು. ಆದ್ದರಿಂದ ನಾವು ಇದನ್ನು ನೋಡಿಕೊಳ್ಳುತ್ತೇವೆ. ಎಲ್ಲಿಯಾದರೂ any deficiency or soemthing else, ನಾವು ಪ್ರಾಮಾಣಿಕವಾಗಿ ತಾಪತ್ರಯವನ್ನು ಹಂಚಿಕೊಳ್ಳುತ್ತೇವೆ. ಅದನ್ನು ಅಪ್ರಿಷಿಯೇಟ್ ಮಾಡಬೇಕಾಗುತ್ತದೆ. ಏಕೆ ಹೇಳುತ್ತಿದ್ದೇನೆಂದರೆ, ಯಾವಾಗಲೂ ಕೂಡ ಇಲ್ಲಿ ಯಾರೇ ಎಡವುವ ಪ್ರಶ್ನೆ ಅಲ್ಲ. ಕೆಲವು ಪರಿಸ್ಥಿತಿ ಆಗುತ್ತದೆ. ನಾವು ಮುಂದೆ ಸ್ವಲ್ಪ ಸರಿಪಡಿಸಿಕೊಂಡು ಆಗಾಗ ಮುಂದೆ ಹೋಗಬೇಕಾಗುತ್ತದೆ. There may be negative or positive aspects in any given administration. ನಾವು ಇಲ್ಲಿ ಇದ್ದುಕೊಂಡು ಇವತ್ತು ಬಹಳ ಪರಿಪೂರ್ಣವಾಗಿ ನಾನು ಆಡಳಿತ ಮಾಡುತ್ತೇನೆ, ಎಂದು ನಾನು ಪ್ರಾಮಾಣಿಕವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಡೆಗೆ ನಾವು ದೃಷ್ಟಿ ಮಾಡಬೇಕು. ಆ ಕಡೆ ನಾವು ಪ್ರಯತ್ನ ಮಾಡಬೇಕು. ಆ ಪ್ರಯತ್ನವನ್ನು ಮಾಡಿಕೊಡಬೇಕೆ ಹೊರತು ಸಾಧನೆಗೆ ಮಾರ್ಕ್ಸ್ ಯಾವ ಪೊಲಿಟೀಷಿಯನ್‌ಗೂ ಕೊಡುವುದಕ್ಕೆ

ಆಗುವುದಿಲ್ಲ. ಪ್ರಯತ್ನದಲ್ಲಿ ಹೆಚ್ಚು ಕಡಿಮೆ, ಅಥವಾ ಸದ್ಭಾವನೆಗಳಲ್ಲಿ ಹೆಚ್ಚು ಕಡಿಮೆ. ಹೊರತು ನಾವು ಎಲ್ಲರೂ ಗುರಿ ಕೂಡ ಮುಟ್ಟುತ್ತೇವೆಂದು ಅಲ್ಲ. It is a percentage.

1989ರಿಂದ ಇಲ್ಲಿಯವರೆಗೆ ಅಥವಾ 94ರವರೆಗೆ ನೀವು ನಮ್ಮನ್ನು ಬಿಡಿಬಿಡಿಯಾಗಿ ಚರ್ಚೆ ಮಾಡುವುದಿಲ್ಲ. You will point out the Congress Government. Tomorrow I may be the Chief Minister or not. ಅದು ಮುಖ್ಯ ಅಲ್ಲ. ಪಕ್ಷದ ಘನತೆ, ಪಕ್ಷದ ಗಾಂಭೀರ್ಯ, ಪಕ್ಷ ಹಿಂದೆ ಜನಗಳಿಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸುವ ದೃಷ್ಟಿಯಲ್ಲಿ ನಾವು ಇವತ್ತು ಮುಂದೆ ಹೋಗುತ್ತೇವೆ ಎನ್ನುವ ಮಾತನ್ನು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ there is no pick and choose policy.

ಏನೋ ಅವರು ಹಿಂದಿನ ಮಂತ್ರಿಮಂಡಲದವರು ಸರಿ ಮಾಡಿಲ್ಲ. ಸರಿ ಮಾಡದೇ ಇದ್ದರೆ ನಾನೂ ಜವಾಬ್ದಾರಿ. ಸರಿ ಮಾಡಿದ್ದರೆ ನಾನೂ ಜವಾಬ್ದಾರಿ. ಎರಡಕ್ಕೂ ನಾನು ರೆಸ್ಪಾನ್ಸಿಬಲ್ ಆಗಿದ್ದೇನೆ.

ಇದಕ್ಕೆ ಇಂತಹವರೇ ಭಾಗೀದಾರರು ಎಂದು ನಾನು ಪಾಯಿಂಟ್ ಔಟ್ ಮಾಡುವುದಿಲ್ಲ. I am not going to point out that. I am prepared to own the responsibility. I cannot give excuse also. ಮುಂದೆ ನಡೆಯುವುದಕ್ಕೆ ನನಗೆ ಇಂತಹ ಹ್ಯಾಂಡಿಕ್ಯಾಪ್ ಇತ್ತು; ಇಂತಹ ತೊಂದರೆ ಇತ್ತು; ಇಂತಹವರು ತಪ್ಪು ಮಾಡಿದರು ಎಂದು ಹೇಳಿದರೆ ಬಹುಶಃ ನಾನು ಜವಾಬ್ದಾರಿಯುತ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಅರ್ಹತೆ ಇಲ್ಲ. I am not going to do that. ಆದರೆ ಇಡೀ ಸದನದಲ್ಲಿ ನಮ್ಮ ಪಕ್ಷವನ್ನಾಗಲೀ, ತಮ್ಮನ್ನಾಗಲೀ ಇಲ್ಲಿ ವಿಶ್ವಾಸದಿಂದ ನನ್ನ ಜೊತೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಇವತ್ತು ನಮ್ಮ ಪಕ್ಷದ ಒಂದು ಕೀರ್ತಿಯನ್ನು ಉಳಿಸಬೇಕು, ಬೆಳೆಸಬೇಕು. ಇದಕ್ಕಿಂತಲೂ ಮುಖ್ಯವಾಗಿ ನಮ್ಮ ಪಕ್ಷ ಇಡೀ ಕರ್ನಾಟಕದ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕಾಗುತ್ತದೆ. ಆ ಜವಾಬ್ದಾರಿಯನ್ನು ನಾವು ಹೊತ್ತುಕೊಂಡು ಹೋಗುವುದಕ್ಕೆ ಬದ್ಧರಿದ್ದೇವೆ. Ultimately ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿ ದೃಷ್ಟಿಯಲ್ಲಿ ಸಮಾಜದ ದುರ್ಬಲ ವರ್ಗದವರಿಗೆ ಸಂಪೂರ್ಣ ಏಳಿಗೆ ದೃಷ್ಟಿಯಲ್ಲಿ we are all one, as a team we work. When you compete with another State and when you compete with any other nation, all of us, including Deshpande, we are all one team in a relay race.

ಇಲ್ಲಾ ನಾವು ಅದನ್ನು ನಾವು ಹಿಂದೆ ಎಳೆಯುತ್ತೇವೆ ಎಂದು ಹೇಳಿದರೆ, ಅಲ್ಟಿಮೇಟ್ಲಿ ಯಾರು ಫೇಲ್ ಆಗುತ್ತಾರೆ ? The whole Karnataka will fail or the whole Party will fail.

ಕಾಲು ಎಳೆಯುತಕ್ಕ ಪ್ರಯತ್ನ ನಮ್ಮಲ್ಲಿ ಆದರೆ ಆಮೇಲೆ ಕೊನೆಗೆ ವಿಫಲತೆಯ ಸಂಪೂರ್ಣ ಹೊಣೆ ಪಕ್ಷ ಹೊರಬೇಕಾಗುತ್ತದೆ. ಕರ್ನಾಟಕ ರಾಜ್ಯದ ಸಂಪೂರ್ಣ ವಿಫಲತೆಯ ಹೊಣೆಯನ್ನು ಇಡೀ ರಾಜ್ಯ ಹೊರಬೇಕಾಗುತ್ತದೆ. ಇದು ಬಿಜೆಪಿ, ಕಾಂಗ್ರೆಸ್, ಜನತಾದಳ, ಎಲ್ಲಾ ಪಕ್ಷಗಳಿಗೂ ಅನ್ವಯವಾಗುತ್ತದೆ. ಇದು ಮರೆತು ಹೋದಾಗ ಬಹುಶಃ ವಿವೇಚನಾರಹಿತವಾದ ಸ್ವಾರ್ಥಪರ ಒಂದು ನಮ್ಮ ಸಾಮ್ರಾಜ್ಯವನ್ನೇ ನಿರ್ಮಾಣ ಮಾಡತಕ್ಕ ಒಂದು ವ್ಯವಸ್ಥೆಗೆ ನಾವು ಗುರಿ ಆಗುತ್ತೇವೆ. ಆಗ ಇತಿಹಾಸ ನಮ್ಮನ್ನು ಕ್ಷಮಿಸುವುದಿಲ್ಲ.

ಇದು ಬಹಳ ಮುಖ್ಯ. ಈವತ್ತು ನಾವು ಸಾಧನೆಯ ಪಟ್ಟಿಯನ್ನು ನಾವು ನಮ್ಮ ಆತ್ಮಾವಲೋಕನ ಮಾಡಬೇಕು. ನಾನು ನಮ್ಮ ಪಕ್ಷದ ಸಾಧನೆಯ, ಆತ್ಮಾವಲೋಕನ ಮಾಡುತ್ತೇನೆ. ಅದೇ ರೀತಿಯಲ್ಲಿ ಪ್ರಾಮಾಣಿಕವಾಗಿ ಯಾವ ರೀತಿಯಲ್ಲಿ ಮುಂದೆ ಹೋಗುತ್ತೇವೆ ಎನ್ನುವ ಒಂದು ಸ್ಪಷ್ಟವಾದ

ಪರಿಣಾಮಕಾರಿಯಾದ ಭರವಸೆಯನ್ನು ಕೂಡ ರಾಜ್ಯದ ಜನತೆಗೆ ಕೊಟ್ಟಾಗ ರಾಜ್ಯದ ಜನತೆ ನಂಬುವಂತೆ ಇದ್ದರೆ, ಇದ್ದರೂ ಅವರಲ್ಲಿ ವಿಶ್ವಾಸವನ್ನು ಹುಟ್ಟಿಸಿದರೆ ಅದರಿಂದ ನಮ್ಮ ಪಕ್ಷಕ್ಕೆ ಲಾಭವಾಗುತ್ತದೆ. ಇಡೀ ರಾಜ್ಯಕ್ಕೆ ಲಾಭವಾಗುತ್ತದೆ ನಮಗೂ ಲಾಭವಾಗುತ್ತದೆ. ನಾವೆಲ್ಲಾ ಇವರಲ್ಲಿ ಪಾಲುದಾರರಾಗುತ್ತೇವೆ. ದೊಡ್ಡ ನೀರಾವರಿಗೆ 243 ಕೋಟಿ ರೂಪಾಯಿ 1990-91ರಲ್ಲಿ ಇದ್ದರೆ, ಅದರ ಗುರಿ ಏನು ಮಾಡಿದ್ದಾರೆಂದರೆ 31 ಸಾವಿರ ಹೆಕ್ಟೇರ್ ಆದರೆ ಸಾಧನೆ 22 ಸಾವಿರ ಹೆಕ್ಟೇರ್ ಆಗಿದೆ. There is a short fall. 1991-92ರಲ್ಲಿ 310 ಕೋಟಿ ರೂಪಾಯಿ ಖರ್ಚು ಮಾಡುವುದು ಇದ್ದರೆ ಅದರ ಗುರಿ 40 ಸಾವಿರ ಹೆಕ್ಟೇರ್. ಆದರೆ ಸಾಧನೆ 34 ಸಾವಿರ ಹೆಕ್ಟೇರ್ ಆಗಿದೆ. ಅದೇ ರೀತಿ ಸಣ್ಣ ನೀರಾವರಿಯಲ್ಲೂ ಕೂಡ 32 ಕೋಟಿ ರೂಪಾಯಿಗಳನ್ನು 1990-91ರಲ್ಲಿ ಖರ್ಚು ಮಾಡಿದ್ದರೆ ಅದರ ಗುರಿ 9 ಸಾವಿರ ಆಗಿದೆ. ಸಾಧನೆ 3 ಸಾವಿರ ಮಾತ್ರ ಆಗಿದೆ. 1991-92ರಲ್ಲಿ ಸಣ್ಣ ನೀರಾವರಿಗೆ 30 ಕೋಟಿ ಖರ್ಚು ಮಾಡಿದ್ದರೆ ಗುರಿ 11 ಸಾವಿರ ಎಂದು ಇಟ್ಟುಕೊಂಡರೆ ಸಾಧನೆ 4,800 ಹೆಕ್ಟೇರ್ ಆಗಿದೆ. ಅದೇ ರೀತಿ ಫೀಲ್ಡ್ ಚಾನೆಲ್ ಮತ್ತು ಲ್ಯಾಂಡ್ ಲೆವೆಲ್‌ಗೆ 18 ಕೋಟಿ ರೂಪಾಯಿ ಇಟ್ಟಿದೆ. ಗುರಿ 37,500 ಇದ್ದರೆ 25,100 ಆಗಿದೆ. 45,600 ಹೆಕ್ಟೇರ್ ಲ್ಯಾಂಡ್ ಲೆವೆಲಿಂಗ್ ಗುರಿಯಿದ್ದರೆ ಸಾಧನೆ 25 ಸಾವಿರ ಹೆಕ್ಟೇರ್. ಮತ್ತೆ ಲ್ಯಾಂಡ್ ಲೆವೆಲಿಂಗ್‌ಗೆ 42 ಸಾವಿರ ಹೆಕ್ಟೇರ್ ಇದ್ದರೆ ಸಾಧನೆ 27 ಸಾವಿರ ಹೆಕ್ಟೇರ್ ಆಗಿದೆ. ವಿದ್ಯುತ್ ಸಾಮರ್ಥ್ಯವನ್ನು ಹೆಚ್ಚಿಸುವುದು 1990-91ರಲ್ಲಿ 182 ಕೋಟಿ ಇಟ್ಟಿದ್ದರೆ ಸಾಧನೆ ಮಾಡಲಿಕ್ಕೆ ನಾವು ಖರ್ಚು ಮಾಡಿದ್ದು 1991-92ರಲ್ಲಿ 221 ಕೋಟಿ. ಅದರಲ್ಲಿ ಗುರಿ 3078 ಇದ್ದರೆ ನಾವು ಸಾಧನೆ ಮಾಡಿದ್ದು 3016. ಇದು ನಮ್ಮ ಸಾಧನೆಗಳ ಪಟ್ಟಿ. ಈ ವರ್ಷ ನಾವು ಹೊಸ ಒಂದು ಆಯಾಮವನ್ನು ನೀರಾವರಿಗೆ ಕೊಟ್ಟಿದ್ದೇವೆ. ನೀರಾವರಿಗೆ ಹೆಚ್ಚು ಹಣವನ್ನು ಕೊಟ್ಟಿದ್ದೇವೆಂಬುದು ತಮಗೆ ಗೊತ್ತಿದೆ. ಕೃಷ್ಣಾ ಕಾವೇರಿಗೆ ಕೊಟ್ಟಿದ್ದೇವೆ. ನಾನು ಡೀಟೈಲ್ಸ್‌ಗೆ ಬರುತ್ತೇನೆ. ಈ ಬಾರಿ ಒಂದು ವಿಶೇಷವಾದ ಸಾಧನೆಯನ್ನು ಹೊಸ ಆಯಾಮವನ್ನು ಕೊಡಲಿಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಅದು ಏನೆಂದರೆ ನಾವು ಅನೇಕ ಬಾರಿ ಡ್ಯಾಮ್ ಕಟ್ಟುತ್ತೇವೆ. ದೊಡ್ಡ ದೊಡ್ಡ ಕೆನಾಲ್‌ಗಳನ್ನು ಮಾಡುತ್ತೇವೆ. ಕೆಲವು ದಶಕಗಳು ಹಿಡಿಯುತ್ತವೆ. ಡ್ಯಾಮ್‌ನಲ್ಲಿ ನೀರು ಶೇಖರಣೆಯಾಗಿ, ಕೆನಾಲ್ ಆದ ಕೂಡಲೇ ಪೊಟೆನ್ಷಿಯಾಲಿಟಿ ಕ್ರಿಯೇಟ್ ಆಗುತ್ತದೆ. ಡ್ಯಾಮ್ ಕಟ್ಟಿದ್ದರೂ ಪೊಟೆನ್ಷಿಯಾಲಿಟಿ ಕ್ರಿಯೇಟ್ ಆಗುತ್ತದೆ. Creation of potentialಗೂ utilisationಗೂ ಬಹಳ ಅಂತರ ಇರುತ್ತದೆ. ಕೆಲವು ಸಾರಿ ಮೂರನೆಯ ಒಂದು ಅಂಶ ಆಗಿದ್ದರೂ ಕೂಡ ನೀರು ಹೊಲಗಳಿಗೆ ಹೋಗಿರುವುದಿಲ್ಲ. ಇನ್‌ವೆಸ್ಟ್‌ಮೆಂಟ್ ವಿನಾಗುತ್ತದೆ, ನಾವು ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತೇವೆ. ಈ ವರ್ಷ ವಿಶೇಷವಾಗಿ ಒಂದು ಒತ್ತು ಏನು ಕೊಡುತ್ತಿದ್ದೇವೆಂದರೆ, ಪೊಟೆನ್ಷಿಯಲ್ ಕ್ರಿಯೇಟ್ ಮಾಡಿದ ಮೇಲೆ ಒಂದು ವರ್ಷಕ್ಕಿಂತ ಹೆಚ್ಚು ಯುಟಿಲೈಸೇಷನ್‌ಗೆ ಅವಧಿ ಇರಬಾರದು, ಕಮಾಂಡ್ ಏರಿಯಾಕ್ಕೆ ನಾವು ಹಣವನ್ನು ಆ ರೀತಿಯ ದಾಮಾಶದಲ್ಲಿ ಕೊಡುತ್ತೇವೆ. Today the potential is created and not even one-third is utilised. Therefore, the cost-benefit ratio of investment in the irrigation will go very high

ಇವನ್ನು ಇವತ್ತು ನಾವು ಸರಿಪಡಿಸಿಕೊಳ್ಳಬೇಕು. ಪೊಟೆನ್ಷಿಯಲ್ ಕ್ರಿಯೇಟ್ ಆದ ಕೂಡಲೇ ಯುಟಿಲೈಸೇಷನ್ ಮಾಡತಕ್ಕ ರೀತಿಯಲ್ಲಿ ನಾವು ವಿಶೇಷವಾಗಿ ಕೆಲವು ಕಾರ್ಯಕ್ರಮಗಳನ್ನು ಇವರಲ್ಲಿ ಅಳವಡಿಸಿದ್ದೇವೆ. ಇನ್ನು ಕೆಲವು ಕಾರ್ಯಕ್ರಮದ ವಿಶೇಷತೆಯ ಬಗ್ಗೆ ಹೇಳಬೇಕಾಗಿದೆ. ಎರಡು ವರ್ಷಗಳಲ್ಲಿ ಪ್ರಾರಂಭವಾದಂಥ ಕಾರ್ಯಕ್ರಮ ಅಥವಾ ಮೂರು ವರ್ಷಗಳಲ್ಲಿ ಏನು ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿದ್ದೇವೆ. 1989ರಲ್ಲಿ, ಈ ಕಾರ್ಯಕ್ರಮಗಳಲ್ಲಿ ಯಾವುದನ್ನೂ ನಾವು ಕೈ ಬಿಟ್ಟಿಲ್ಲ. Because it is our programme. ಇದು ಹೊಸ ಸರ್ಕಾರ ಅಲ್ಲ. ಆದ್ದರಿಂದ ಈ ಕಾರ್ಯಕ್ರಮಗಳಲ್ಲಿ, ಆಶ್ರಯ ತೆಗೆದುಕೊಳ್ಳಿ, ಅಕ್ಷಯ ತೆಗೆದುಕೊಳ್ಳಿ ಆರಾಧನಾ ತೆಗೆದುಕೊಳ್ಳಿ,

ವಿಶ್ವ, ಶುಶ್ರೂಷಾ ಕೂಡ. ಈ ಯಾವ ಕಾರ್ಯಕ್ರಮವನ್ನೂ ಕೂಡ ನಾವು ಕೈಬಿಟ್ಟಿಲ್ಲ. ಆದರೆ ಈ ಕಾರ್ಯಕ್ರಮಗಳು ಸಂಪೂರ್ಣವಾಗಿ ಜನರಿಗೆ ತಲುಪಬೇಕಾಗುತ್ತದೆ. ಏಕೆಂದರೆ ಕೆಲವು ಸಾರಿ ಪ್ರಾಯೋಗಿಕವಾಗಿ ಕಾರ್ಯಕ್ರಮಗಳನ್ನು ನಾವು ಮಾಡುತ್ತೇವೆ. ಒಂದು ಪ್ರಯೋಗ ನಡೆಯುತ್ತದೆ. ಪ್ರಯೋಗಶೀಲತೆಯಲ್ಲಿ ದೊಡ್ಡ ತಪ್ಪಿಲ್ಲ. I do not find fault with the experiment; ours is a vibrant society, we have to make experiment.

ನಾವು ಮುನ್ನುಗ್ಗಿ ಕೆಲಸ ಮಾಡಬೇಕಾಗುತ್ತದೆ. ಆದರೆ ಮುನ್ನುಗ್ಗುವಾಗ ಮುಗ್ಗರಿಸಿಕೊಂಡು ಹೋಗಬಾರದು. ಮುನ್ನುಗ್ಗುವಾಗ ಜನತೆಗೆ ಅದರಿಂದ ಪ್ರಯೋಜನ ಬರಬೇಕು. ಜನತೆಗೆ ಈ ಕಾರ್ಯಕ್ರಮಗಳು ಮುಟ್ಟಬೇಕಾಗುತ್ತದೆ. ಏನಾದರೂ ವ್ಯಾವಹಾರಿಕವಾದಂಥ ಬದಲಾವಣೆ ಮಾಡಬೇಕಾದರೆ, ವ್ಯಾವಹಾರಿಕವಾದಂಥ ಕಾರ್ಯಕ್ರಮ ಮಾಡಬೇಕಾದರೆ, ನೇರವಾಗಿ ಕಾರ್ಯಕ್ರಮದ ಉದ್ದೇಶಿತ ಫಲ ಸಿಗಬೇಕಾದರೆ, ಗುರಿಮುಟ್ಟುತಕ್ಕಂಥ ದೃಷ್ಟಿಯಲ್ಲಿ ಏನಾದರೂ ಅಡೆತಡೆಗಳು ಇದ್ದರೆ ಅದನ್ನು ನಿಗ್ರಹಿಸಿಕೊಂಡು ಸರಿಪಡಿಸಿಕೊಂಡು ಆಡಳಿತಾತ್ಮಕವಾಗಿ, ವ್ಯಾವಹಾರಾತ್ಮಕವಾಗಿ, ಸೈದ್ಧಾಂತಿಕವಾಗಿ ನಮ್ಮ ಕಾರ್ಯಕ್ರಮವನ್ನು ಪುನರ್ ರಚನೆಗೊಳಿಸಿದ ಕೂಡಲೇ, ಹಿಂದಿನ ಕಾರ್ಯಕ್ರಮಗಳನ್ನು ಬಿಟ್ಟಿದ್ದೇವೆ ಎಂದು ಅರ್ಥ ಮಾಡಿಕೊಂಡರೆ ಬಹುಶಃ ಹಿಂದೆ ಮಾಡಿದಂಥ ತಪ್ಪನ್ನು ಇವತ್ತು ಮಾಡಿ ಕಣ್ಣಿದ್ದೂ ಕುರುಡರಾಗಿ ನಾವು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಕಣ್ಣಿದ್ದೂ ಕುರುಡರಾಗಿ ಹೋದರೆ ಯಾರಿಗೂ ಲಾಭ ಇಲ್ಲ. ಈ ಕಾರ್ಯಕ್ರಮ ಯಾರಿಗೆ ತಲಪಬೇಕೋ ಅವರಿಗೂ ಕೂಡ ಲಾಭ ಇಲ್ಲ. ಇಂತಹ ಮಾರ್ಪಾಡಿನಲ್ಲಿ ಇಂತಹ ತೊಂದರೆ ಇದೆ. ಈ ಕಾರ್ಯಕ್ರಮಗಳನ್ನು ವ್ಯಾವಹಾರಿಕವಾಗಿ, ಆಡಳಿತಾತ್ಮಕವಾಗಿ ಅನುಷ್ಠಾನ ಮಾಡುವುದಕ್ಕೆ ಇಲ್ಲ ಎಂದು ಹೇಳಿ ತಾವು ರಚನಾತ್ಮಕವಾದಂಥ ಟೀಕೆ ಮಾಡಿದರೆ ಅದಕ್ಕೆ ಸ್ವೀಕಾರ ಈವತ್ತಲ್ಲ. ಇನ್ನು ಮುಂದೆ ಕೂಡ ಮಾಡುತ್ತೇನೆ. ಇಲ್ಲ, ನಾನು ಮಾಡಿದ್ದೇ ಸರಿ ಎಂದು ಹೇಳಿ, ಕಾರ್ಯಕ್ರಮಗಳನ್ನು ರೂಪಿಸಿದ್ದೇ ಸರಿ, ಅದು ಅನುಷ್ಠಾನಕ್ಕೆ ತಂದ ಕ್ರಮವೇ ಸರಿ ಎಂದು ತಾವು ಇವತ್ತು ಕನ್ವಿನ್ಸ್ ಮಾಡಿದರೆ ನನಗೆ ಅಲ್ಲ, ಜನರಿಗೆ, ಇವತ್ತು ಕನ್ವಿನ್ಸ್ ಮಾಡಿದರ I am prepared to go by the same line. I have an open mind. ನಮ್ಮದು ಮುಕ್ತ ಮನಸ್ಸಿದೆ.

ಉದಾಹರಣೆಗೆ ವಿಶ್ವ ಕಾರ್ಯಕ್ರಮ. ಏಕೆಂದರೆ ಇಲ್ಲಿ ಒಂದು ಅಭಿಪ್ರಾಯ ಬಂದಿದೆ. 475 ಕೋಟಿ ರೂಪಾಯಿಗಳನ್ನು ಇವಕ್ಕೆ ಯೋಜಿಸಲಾಗಿದೆ. ಇವತ್ತು ಅನುಷ್ಠಾನ ಯಾವ ರೀತಿ ಆಗಿದೆ, ಆಗಿಲ್ಲ ಇಲ್ಲದಿದ್ದರೆ ನಾನು ಬಹುಶಃ ಹೇಳುತ್ತಾ ಇರಲಿಲ್ಲ. I am more interested in work than speaking. ತಾವು ಹೆಚ್ಚು ಮಾತನಾಡಿದ ಕೂಡಲೇ ಆ ಮಟ್ಟಿಗೆ ನಮ್ಮ ಕರ್ತೃತ್ವ ಶಕ್ತಿ ಸ್ವಲ್ಪ ಕಡಿಮೆಯಾಗುತ್ತದೆ. ಕರ್ತೃತ್ವ ಶಕ್ತಿಯಿಂದ ಇವತ್ತು ಮುಂದೆ ಹೋಗಬೇಕಾಗುತ್ತದೆ. ವಿಶ್ವ ಯೋಜನೆ ತಮಗೆ ಗೊತ್ತಿದೆ. ಇದು ಒಳ್ಳೆಯ ಆಲೋಚನೆ, ಒಳ್ಳೆಯ ಕಾರ್ಯಕ್ರಮ. ನಾನು ಸಣ್ಣ ಕೈಗಾರಿಕಾ ಮಂತ್ರಿಯಾಗಿದ್ದಾಗ ಕೂಡ, ನಾವು ಈ ರೀತಿಯ ಹಲವಾರು ಕಾರ್ಯಕ್ರಮಗಳನ್ನು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಹೇಳಿಕೊಳ್ಳುವುದಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಮಾನ್ಯ ವಿಶ್ವೇಶ್ವರಯ್ಯನವರ ಕಾಲದಿಂದಲೂ ಕೂಡ ನಮ್ಮಲ್ಲಿ ಕರಕುಶಲಕರ್ಮಿಗಳು ಇದ್ದಾರೆ, ಗ್ರಾಮಾಂತರ ಪ್ರದೇಶಗಳಲ್ಲಿ ಒಳ್ಳೆಯ ಕೆಲಸ ಮಾಡುವವರು ಇದ್ದಾರೆ. ಅವರ ಚಾಕಚಕ್ಯತೆಯನ್ನು ಗುರುತಿಸಿ ಅವರನ್ನು ಉತ್ಪಾದನೆಯ ಮೂಲ ಹೆದ್ದಾರಿಗೆ ತರತಕ್ಕಂಥ ಕಾರ್ಯಕ್ರಮಗಳು, ಅದು ಮೆಚ್ಚತಕ್ಕಂಥ ಕಾರ್ಯಕ್ರಮಗಳು. ಈ ಕಾರ್ಯಕ್ರಮಗಳನ್ನು ನಾವು ವಿಶೇಷ ಶ್ರದ್ಧೆಯಿಂದ ಮುಂದುವರೆಸಿಕೊಂಡು ಹೋಗಬೇಕಾದಂಥ ಒಂದು ಅವಶ್ಯಕತೆ ಇದೆ. ತಮಗೆ ಹೇಳಬೇಕಾದರೆ ಈ ಕಾರ್ಯಕ್ರಮ ಅಕ್ಟೋಬರ್ 91ರಲ್ಲಿ ಜಾರಿಗೆ ಬಂತು. ಈ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದೇನೆಂದರೆ 1991-92ರಲ್ಲಿ ಮತ್ತು 1992-93ರಲ್ಲಿ ಒಟ್ಟು

ಫಲಾನುಭವಿಗಳನ್ನು ಗುರುತಿಸಿದ್ದೇವೆ. ಎಷ್ಟು ಎಂದರೆ, 91-92ಕ್ಕೆ 25 ಸಾವಿರ ಮತ್ತು 92-93ಕ್ಕೆ 1 ಲಕ್ಷ 44 ಸಾವಿರ. ಈ 13 ತಿಂಗಳಲ್ಲಿ ಅಕ್ಟೋಬರ್ 91ರಿಂದ ಅಕ್ಟೋಬರ್ 92ವರೆಗೆ ಎಷ್ಟು ಫಲಾನುಭವಿಗಳು ಕವರ್ ಆದರು ಎಂದರೆ 41,180, ಈ ಒಟ್ಟು ಸಂಖ್ಯೆಯಲ್ಲಿ ನವೆಂಬರ್ 92ರಿಂದ ಜನವರಿ 93ರವರೆಗೆ, ಮೂರು ತಿಂಗಳಲ್ಲಿ after we took over, this new ministry came, the coverage is 34,395.

ಒಟ್ಟು 75,575 ಟಾರ್ಗೆಟ್ ಕೊಟ್ಟಿದ್ದುದು, ಈ ವಿಶ್ವ ಕಾರ್ಯಕ್ರಮದ ಫೆಬ್ರವರಿ ಮತ್ತು ಮಾರ್ಚ್ ಅಂಕಿ ಅಂಶ ಇನ್ನೂ ಕೊಟ್ಟಿಲ್ಲ.

Sri R. V. Deshpande:-- My only request to you is please re-check your figures. ನನ್ನ ಕ್ಷೇತ್ರದಲ್ಲಿ ವಿಶ್ವಯೋಜನೆಯಲ್ಲಿ ಜಾಕ್ ಯೂನಿಟ್ ಒಂದು ಪ್ರಾರಂಭವಾಗಿದೆ. ಈ ಅಂಕಿ ಅಂಶಗಳು ನನಗೆ ಗೊತ್ತು. ನಾನು ಇಂಡಸ್ಟ್ರೀ ಮಂತ್ರಿಯಾಗಿದ್ದಾಗ, ಯಾವ ಪ್ರಕಾರ ಅಂಕಿಅಂಶಗಳು ಬರುತ್ತಿದ್ದವು ಎಂಬುದು ಗೊತ್ತು. I want to know whether you have made the list of these people or you have covered them under employment.

ಶ್ರೀ ಬಸವರಾಜ ರಾಯರೆಡ್ಡಿ:-- ನಮ್ಮಲ್ಲಿ ಈ ವಿಶ್ವ ಕಾರ್ಯಕ್ರಮವೇ ಪ್ರಾರಂಭವಾಗಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ:-- ನಿಮ್ಮ ಅಂಕಿಅಂಶಗಳು ಹೇಗಿದೆ ಎಂದರೆ, ಆಕಾಶದಲ್ಲಿರುವಂಥ ನಕ್ಷತ್ರಗಳು ಇದ್ದ ಹಾಗೆ ಇವೆ; ಏಕೆಂದರೆ ಎಣಿಸುವುದಕ್ಕಾಗುವುದಿಲ್ಲ, ಏನೂ ಇಲ್ಲ, ಆ ತರಹ ನೀವು ಹೇಳುತ್ತಿದ್ದೀರಿ. ಇಲ್ಲಿಗೆ 40 ಕಿಲೋಮೀಟರ್ ದೂರದಲ್ಲಿ ನನ್ನ ಕ್ಷೇತ್ರ ಇದೆ. ಅವತ್ತು ನಾವು ಯೋಚನೆ ಮಾಡಿದೆವು. ಏನೋ ಇಷ್ಟು ದೊಡ್ಡ ಯೋಜನೆ ತಂದಿದ್ದೀರಿ ಎಂದು ನಾವೆಲ್ಲರೂ ಹೋಗಿ ಉದ್ಘಾಟನೆ ಮಾಡಿದೆವು. ಅಕ್ಟೋಬರ್ 1991ರಲ್ಲಿ ಉದ್ಘಾಟನೆ ಮಾಡಿದೆವು, ಮತ್ತೆ ಅಕ್ಟೋಬರ್ 1992ಕ್ಕೆ ಹೋದಾಗ, 15 ಜನಕ್ಕೆ ಪವರ್ ಲೂಮ್ಸ್‌ಗೆ ದುಡ್ಡು ಕೊಟ್ಟಿದ್ದೀರಿ. ಇದು ಏತರ ಸ್ಕೀಮು, ಇದನ್ನು ಏಕೆ ಹೇಳುತ್ತಿದ್ದೀರಿ. ಸುಮ್ಮನೆ? ಎಲ್ಲಾ ಬರೀ ಪುಸ್ತಕದ ಬದನೆಕಾಯಿ, ಅಷ್ಟೇ ಈ ಫಿಗರ್ಸ್‌ಗಳು. ನನ್ನ ಕ್ಷೇತ್ರ ಇಲ್ಲಿಗೆ 40 ಕಿಲೋಮೀಟರ್ ದೂರದಲ್ಲಿದೆ; ಹೆಚ್ಚು ದೂರದಲ್ಲೇನೂ ಇಲ್ಲ. ನಿಮ್ಮ ಅಧಿಕಾರಿಗಳನ್ನು ಕಳುಹಿಸಿ, ನೋಡಿಕೊಂಡು ಬರಲಿ. ಇದನ್ನು ಬಿಟ್ಟುಬಿಡುವುದು ಮೇಲು, ಬೇರೆ ಏನಾದರೂ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:-- ತಾವು ಹೇಳುತ್ತಿರುವ ಅಂಕಿಅಂಶಗಳು ಸುಳ್ಳು;

ಶ್ರೀ ಎಂ. ವೀರಪ್ಪ ಮೊಯಿಲಿ:-- ನೀವು ಆಮೇಲೆ ಸ್ಪಷ್ಟೀಕರಣ ಕೇಳಿ. ನಮ್ಮಲ್ಲಿ ಏನು ಮಾಹಿತಿ ಇದೆ, ಅದನ್ನು ತಮಗೆ ಕೊಡುತ್ತಿದ್ದೇನೆ. I am sorry, ಸುಳ್ಳು, ಸತ್ಯ ಏನೆಂದು ತಮಗೆ ಗೊತ್ತಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ವಿಶ್ವ ಕಾರ್ಯಕ್ರಮವನ್ನು ಮೊಯಿಲಿಯವರು ಕೈಬಿಟ್ಟರು ನೋಡಲಿಲ್ಲ ಎಂದು ಹೇಳುತ್ತಾರೆ. within a span of three months ....

ಶ್ರೀ ಬಿ. ಎಸ್. ಯಡಿಯೂರಪ್ಪ:-- ಈ ಯೋಜನೆಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದನ್ನೂ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:-- ನನ್ನ ಹತ್ತಿರ ಹಣದ ವಿಚಾರವೂ ಇದೆ, ಆ ವಿಷಯವನ್ನೂ ಹೇಳುತ್ತೇನೆ. 34,395 beneficieries have been covered within a period of three months. Another two months performance is there.

ಏಕೆ ಹೇಳುತ್ತಿದ್ದೇನೆಂದರೆ, ವಿಶ್ವ ಕಾರ್ಯಕ್ರಮ ಕೈಬಿಟ್ಟರು ಎಂಬುದು ಆಗಬಾರದು. 13 ತಿಂಗಳಲ್ಲಿ

41, 180 ಫಲಾನುಭವಿಗಳಾದರೆ, 3 ತಿಂಗಳಲ್ಲಿ 34,395 ಕವರ್ ಮಾಡಿದ್ದೇವೆ. ಇದನ್ನು ನಾವು ಕೈಬಿಟ್ಟಿವು ಎನ್ನತಕ್ಕಂಥ ಪ್ರಶ್ನೆ ಅಲ್ಲ. ಇವನ್ನು ಮತ್ತೂ ವ್ಯಾವಹಾರಿಕವಾಗಿ ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಲ್ಲಿ ಅನಾವಶ್ಯಕವಾಗಿ ದುಡ್ಡು ಪೋಲಾಗುವುದನ್ನು ನಾವು ನಿಲ್ಲಿಸಿದ್ದೇವೆ. ಹಣ ರಿಲೀಸ್ ಮಾಡಿರುವಂಥದ್ದು, 13 ತಿಂಗಳಲ್ಲಿ ಅಂದರೆ ಅಕ್ಟೋಬರ್ 1992ರವರೆಗೆ 24 ಕೋಟಿ 30 ಲಕ್ಷ ಹಣವನ್ನು ರಿಲೀಸ್ ಮಾಡಿದೆ. ಫೆಬ್ರವರಿ ತಿಂಗಳವರೆಗೆ 7 ಕೋಟಿ 50 ಲಕ್ಷ ಬಿಡುಗಡೆ ಮಾಡಿದ್ದೇವೆ. ಅಂದರೆ, ಈ ವಿಶ್ವದಲ್ಲಿ ಒಟ್ಟು ಖರ್ಚಾಗಿರುವುದು. ತಾತ್ಕಾಲಿಕ ಲೆಕ್ಕದ ಪ್ರಕಾರ, 31 ಕೋಟಿ 80 ಲಕ್ಷ. 24 ಕೋಟಿ 30 ಲಕ್ಷ 13 ತಿಂಗಳಲ್ಲಿ ಬಿಡುಗಡೆಯಾಗಿದೆ. ಇದರಲ್ಲಿ ಖರ್ಚಾಗಿರುವುದು 14 ಕೋಟಿ 17 ಲಕ್ಷ. ಅಕ್ಟೋಬರ್ 1992ರವರೆಗೂ ಅಂದರೆ ಈ ಮೂರು ತಿಂಗಳಲ್ಲಿ ಖರ್ಚಾಗಿರುವುದು 2 ಕೋಟಿ 75 ಲಕ್ಷ ಅಂದರೆ, ಒಟ್ಟು 16 ಕೋಟಿ 92 ಲಕ್ಷ ಈ ವಿಶ್ವ ಕಾರ್ಯಕ್ರಮಕ್ಕೆ ಖರ್ಚಾಗಿದೆ. ಇನ್ನು ಹಣಕಾಸಿನ ಸಂಸ್ಥೆಗಳ ಬಗ್ಗೆ ವಿತರಣೆಯಾಗಿರುವುದನ್ನು ಮಾತ್ರ ಹೇಳುತ್ತೇನೆ. ಇಲ್ಲಿ ಸ್ಯಾಂಕ್ಷನ್ ಆಗಿರುವುದು ಮುಖ್ಯವಲ್ಲ. 13 ತಿಂಗಳಲ್ಲಿ ಅದು 4 ಕೋಟಿ 66 ಲಕ್ಷ ವಿತರಣೆ 13 ತಿಂಗಳಲ್ಲಿ ಅಕ್ಟೋಬರ್ 1992ರವರೆಗೆ. ಈ ಮೂರು ತಿಂಗಳಲ್ಲಿ ವಿತರಣೆ 6 ಕೋಟಿ 8 ಲಕ್ಷ. ಇಷ್ಟು ಬ್ಯಾಂಕಿನಿಂದ ಬಿಡುಗಡೆಯಾಗಿದೆ. ದಯಮಾಡಿ, ತಮ್ಮ ಹತ್ತಿರ ಮಾಹಿತಿ ಇಲ್ಲದಿದ್ದರೆ ಕೇಳಿ. But don't comment. These are all the figures which I have and this is subject to audit. If figures are not correct. You can haul me up by privilege motion. As a Finance Minister on behalf of the Government, when I give a statement, we give it with all responsibility. Please do not try to comment.

You can make fun of it. I don't mind. But speaking about figures. Vishwa is not a programme which should be mocked about. ನಮ್ಮ ಕರ್ನಾಟಕ ರಾಜ್ಯದ ಕರಕುಶಲ ಕಾರ್ಮಿಕರ ಬಗ್ಗೆ ಇರತಕ್ಕಂತ ಅತ್ಯುತ್ತಮವಾದ ಕಾರ್ಯಕ್ರಮ. Don't forget about it. ಎಲ್ಲಾದರೂ ತಪ್ಪಿದ್ದರೆ, ಎಡವಿದ್ದರೆ, ಅದನ್ನು ಸರಿಪಡಿಸಿಕೊಂಡು ಮುಂದೆ ಹೋಗತಕ್ಕ ಒಂದು ಸದ್ಭಾವನೆಯಿಂದ ಹೋಗಬೇಕೇ ಹೊರತು, ನಾವು ಅದನ್ನು ಕಂಡೆಮ್ ಮಾಡುವುದಕ್ಕೆ ಹೋಗಬಾರದು. ಯಾರೋ ಪ್ರಾರಂಭ ಮಾಡಿದರು, ಯಾರೋ ಮುಂದುವರಿಸಿದರು ಎಂದು ಅಲ್ಲ. No. I am not going to do that. Please. We have prevailed upon the Bank. I was also conscious. ನಾಳೆ ನನಗೆ ಅಪವಾದ ಬರಬಾರದು, ಮೊಯಿಲಿಯವರು ಬಂದರು, ವಿಶ್ವ ಕಾರ್ಯಕ್ರಮ ಶಿಥಿಲವಾಯಿತು ಎಂದು ಹೇಳಬಾರದು. Yes, I was a little more conscious about it. We have taken more care about it.

ಶ್ರೀ ಆರ್. ಎಲ್. ಜಾಲಪ್ಪ:– ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಖರ್ಚಾಗಿದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಇದಕ್ಕೆ ಸಂಬಂಧಪಟ್ಟ ಬೇಡಿಕೆಗಳ ಚರ್ಚೆ ಬರುತ್ತವೆ, ಆಗ ಇದರ ಪಟ್ಟಿ ಕೊಡೋಣ.

ಶ್ರೀ ಹೆಚ್. ಏಕಾಂತಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳಾಗಿ ಏನು ಅಂಕಿಅಂಶ ಕೊಡುತ್ತಿದ್ದಾರೆ, ಅದಕ್ಕೆ ತದ್ವಿರುದ್ಧವಾದ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. 1992-93ರಲ್ಲಿ ವಿಶ್ವ ಯೋಜನೆಯಲ್ಲಿ ಇಟ್ಟಂಥ ಹಣ 75 ಕೋಟಿ. ಇದುವರೆಗೆ ಖರ್ಚು ಮಾಡಿರುವ ಹಣ 5-3-93ರಲ್ಲಿ ಉತ್ತರ ಕೊಟ್ಟಾಗ ಹೇಳಿದ್ದಾರೆ ಕೇವಲ 12 ಕೋಟಿ ಎಂದು; ಮತ್ತು ವಿಶ್ವ ಯೋಜನೆಯಲ್ಲಿ ಸೃಷ್ಟಿಯಾದ ಉದ್ಯೋಗ ಎಂದರೆ, ಕೇವಲ 27 ಸಾವಿರ ಮಾತ್ರ ಎಂಬ ಮಾತನ್ನು

ಹೇಳಿದ್ದಾರೆ. ನಾನು ಅವರಿಂದ ಈಗಲೇ ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಈ ಉತ್ತರ ಸರಿಯೇ, ನಿಮ್ಮ ಸರ್ಕಾರದ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರ ಸರಿಯೇ ಅಥವಾ ತಾವು ಕೊಟ್ಟಿರತಕ್ಕ ಉತ್ತರ ಸರಿಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಈ ಉತ್ತರ ಸರಿ ಇದೆ. After proper verification ....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಸ್ಪಷ್ಟೀಕರಣ ಕೇಳಿ ಹೇಳುತ್ತೇನೆ. This kind of interference. I am sorry I am not yielding. ತಾವು ವಿಮರ್ಶೆ ಮಾಡಿ, ವಿಶ್ಲೇಷಣೆ ಮಾಡಿ ಆಮೇಲೆ ಕೇಳಿ. ಒಟ್ಟು ವಿತರಣೆಯಾಗಿರುವುದು ಬ್ಯಾಂಕುಗಳ ಮುಖಾಂತರ 10 ಕೋಟಿ 74 ಲಕ್ಷ ಮತ್ತು ಒಟ್ಟು ಸರ್ಕಾರದ ಹಣ ಖರ್ಚಾಗಿರುವುದು 16 ಕೋಟಿ 92 ಲಕ್ಷ ಅಂದರೆ ಸುಮಾರು 27 ಕೋಟಿ ರೂಪಾಯಿಗಳು ಖರ್ಚಾಗಿದೆ. ನಾವು 475 ಕೋಟಿ ಒದಗಿಸಿದ್ದೇವೆ. ಈ ವಿಶ್ವದಲ್ಲಿ ನಾವು ಇಷ್ಟು ಖರ್ಚು ಮಾಡಿದ್ದೇವೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಏಕೆಂದರೆ ಇಲ್ಲಿ ಈ ಪ್ರಸ್ತಾಪ ಬಂತು, ಇಲ್ಲಿ ಸತ್ಯಾಂಶವನ್ನು ಇಡಬೇಕಾದಂಥ ಅವಶ್ಯಕತೆ ಬಂದುದರಿಂದ ನಾನು ಹೇಳಿದ್ದೇನೆ. Even on production–wise. 13 ತಿಂಗಳಲ್ಲಿ, ಅಕ್ಟೋಬರ್ 1992ರವರೆಗೆ 15 ಕೋಟಿ 87 ಲಕ್ಷ ರೂ. ಪ್ರೊಡಕ್ಷನ್ ಆದರೆ, ಮೂರು ತಿಂಗಳಲ್ಲಿ 18.90 ಕೋಟಿ, ಅಂದರೆ, 3 ಕೋಟಿ ರೂಪಾಯಿಗಳ ಹೆಚ್ಚಿನ ಉತ್ಪಾದನೆಯನ್ನು ಬರೀ ಈ ಮೂರು ತಿಂಗಳಲ್ಲಿ ಮಾಡಿದ್ದೇವೆ. ಇದೇ ಪ್ರಕಾರ, ವರ್ಕ್‌ಷೆಡ್ 665 ವರ್ಕ್‌ಷೆಡ್ 13 ತಿಂಗಳಲ್ಲಿ, ಅಕ್ಟೋಬರ್ 1992ರವರೆಗೆ ಆದರೆ, ಜನವರಿವರೆಗೆ ಆದರೆ ಈ ಮೂರು ತಿಂಗಳಲ್ಲಿ 145 ವರ್ಕ್‌ಷೆಡ್‌ಗಳನ್ನು ಕಟ್ಟಿಸತಕ್ಕ ಪ್ರಯತ್ನ ಮಾಡಿದ್ದೇವೆ. ಆದ್ದರಿಂದ ಈ ವಿಶ್ವ ಕಾರ್ಯಕ್ರಮ ನಿಂತಿಲ್ಲ, ಇದನ್ನು ಇನ್ನೂ ಕೂಡ ವಿಶೇಷವಾಗಿ, ಔದ್ಯೋಗಿಕ ಕ್ಷೇತ್ರದಲ್ಲಿ ಒಂದು ಹೊಸ ಯುಗವನ್ನು ಸೃಷ್ಟಿ ಮಾಡುವುದಕ್ಕೆ ಏನು ಕಾರ್ಯಕ್ರಮ ವಿಶೇಷವಾಗಿ ಮಾಡಬೇಕೋ ಅದನ್ನು ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ; ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಆದರೆ, ಇವತ್ತು 475 ಕೋಟಿ ಏನು ಕೊಟ್ಟಿದ್ದೇವೆ, ಇದು ಪೂರ್ಣವಾಗಿ ಖರ್ಚಾಗಿಲ್ಲ. ವಾಸ್ತವಾಂಶವನ್ನು ಈ ಸದನದ ಸದಸ್ಯರಿಗೆ ಕೊಟ್ಟು, ವಿಶ್ವಾಸ ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತೇನೆ. ನಾವು ಯಾವುದೇ ಹೊಸ ಕಾರ್ಯಕ್ರಮ ಪ್ರಾರಂಭ ಮಾಡಿದಾಗ, ಇಂತಹ ಎಲ್ಲಾ ಕಾರ್ಯಕ್ರಮಗಳೂ ಪ್ರಾರಂಭದಲ್ಲಿ ನಿಧಾನವಾಗುತ್ತವೆ. ಅದು ವೇಗ ಅಷ್ಟು ಪಿಕ್‌ಅಪ್ ಮಾಡದೇ ಇರಬಹುದು. ಅದನ್ನು ಮುಂದುವರಿಸಿಕೊಂಡು ಹೋಗುವಾಗ, ನಾನಾ ರೀತಿಯ ಕಷ್ಟಸಾಧ್ಯತೆಗಳು ಇರುವುದು ಸಹಜ, ಅದನ್ನು ನಾನು ಹೇಳುತ್ತಾ ಇಲ್ಲ. ಆದ್ದರಿಂದ, ಈ ವಿಶ್ವ ಕಾರ್ಯಕ್ರಮದ ಬಗ್ಗೆ ಸರಿಯಾದಂಥ ಮಾಹಿತಿಯನ್ನು ಈ ಸದನದ ಸನ್ಮಾನ್ಯ ಸದಸ್ಯರಿಗೆ ಕೊಡಬೇಕೆಂಬ ವಿಶ್ವಾಸದಿಂದ ಈ ಕೆಲವು ವಿವರಗಳನ್ನು ಕೊಟ್ಟಿದ್ದೇನೆ. ಇನ್ನು ರಾಜೀವ್ ಗಾಂಧಿಯವರ ಶ್ರಮ ಕಲ್ಯಾಣ ನಿಧಿ, ಇದರ ಮಸೂದೆಯು ಈಗಾಗಲೇ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಇದೆ, ಸನ್ಮಾನ್ಯ ಖರ್ಗೆಯವರ ಅಧ್ಯಕ್ಷತೆಯಲ್ಲಿ ಜಂಟಿ ಸಲಹಾ ಸಮಿತಿ ಆಗಿದೆ. 5 ಕೋಟಿ ರೂಪಾಯಿ, that has not taken off. For this programme not even a paise ಖರ್ಚಾಗಿಲ್ಲ. ಇನ್ನು ಅಕ್ಷಯ ಯೋಜನೆ ವಿಚಾರವಾಗಿಯೂ ಕೂಡ ಇಲ್ಲಿ ಚರ್ಚೆ ನಡೆದಿದೆ.

11.05 ಎ.ಎಂ.

1991-92ರಲ್ಲಿ ಹಣ ಇದಕ್ಕೆ ಪ್ರೊವೈಡ್ ಆಯಿತು. ಇದನ್ನು ನಾವು ಸಂಪೂರ್ಣವಾಗಿ ಪರಿಶೀಲನೆ ಮಾಡಿದಾಗ ಮಾರ್ಚ್ 1992ರ ಮೊದಲು, ಆಗ ನಾನೇ ಶಿಕ್ಷಣ ಸಚಿವನಾಗಿದ್ದೆನು. 20 ಕೋಟಿ ರೂಪಾಯಿಗಳನ್ನು ಆಗ ಒದಗಿಸಲಾಗಿತ್ತು. ಅದನ್ನು ಇಫೆಕ್ಟೀವ್ ಆಗಿ, ಜೂನ್ 1992ರಿಂದ ಜಾರಿಗೆ

ಕೊಡಬೇಕೆಂದು ನಿರ್ಣಯವಾಗಿ, 20 ಕೋಟಿಯಲ್ಲಿ 18 ಕೋಟಿ ರೂಪಾಯಿಗಳ ಬಿಡುಗಡೆಯಾಗಿತ್ತು. ಒಟ್ಟು 1992-93ರಲ್ಲಿ 80 ಕೋಟಿ ರೂಪಾಯಿಗಳನ್ನು ಕೊಡಲಾಗಿತ್ತು. ಇದು 1992-93ರಲ್ಲಿ ರಿಸೋರ್ಸ್ ಬ್ಯಾಕ್‌ಅಪ್ ಇಲ್ಲದ ಕಾರಣ 1992-93ರ ಬಜೆಟ್‌ನಲ್ಲಿ ಒಂದು ಪೈಸೆ ಕೂಡ ಅಕ್ಷಯ ಯೋಜನೆಗೆ ಬಿಡುಗಡೆಯಾಗಿಲ್ಲ. I must be fair to the facts. 1992-93ರಲ್ಲಿ 80 ಕೋಟಿ ರೂಪಾಯಿಗಳನ್ನು ಬಜೆಟ್ ಪ್ರೊವಿಷನ್ ಇಟ್ಟಿದ್ದರು. ಆದರೆ 1992-93ರ ಕರೆಂಟ್ ಇಯರ್‌ನಲ್ಲಿ ಬಿಡುಗಡೆಯಾಗಿಲ್ಲ. Provision is one thing but ಹಣದ ಬಿಡುಗಡೆಯು ಮುಖ್ಯ. There is a commitment. ಜೂನ್ 1992ರಿಂದ ಮಾರ್ಚ್ 31ನೇ ತಾರೀಖಿನವರೆಗೆ ಏನು ಕಮಿಟ್‌ಮೆಂಟ್ ಇದೆ, that commitment will be met by our Government. That commitment stands. ಇದರಲ್ಲಿ ಹಿಂದೆ ಹೋಗತಕ್ಕಂಥಾದ್ದು ಇಲ್ಲ. ಏಕೆಂದರೆ ಹೆತ್ತವರಿಗೆ ಮತ್ತು ಮಕ್ಕಳಿಗೆ ನಾವು ಆಶ್ವಾಸನೆಯನ್ನು ಕೊಟ್ಟಿದ್ದೇವೆ. It is the commitment of my Government. It is our Party Government. The payment may be phased out.

ಶ್ರೀ ಎಸ್. ಬಂಗಾರಪ್ಪ:– 1991-92 ಫೈನಾನ್ಷಿಯಲ್ ಇಯರ್‌ನಲ್ಲಿ, ಈ ಕಾರ್ಯಕ್ರಮವನ್ನು ಜಾರಿಗೆ ಕೊಡಬೇಕೆಂಬ ತೀರ್ಮಾನವನ್ನು ಮಾಡಿದ್ದೇವೆ. But it could not take off. Then the money provided for 91-92 was carried over for 92-93 also as an additional money to what we had provided during 92-93. I hope you will agree with this. ಆಮೇಲೆ ಏನು ಮಾಡಿದ್ದೇವೆ ಅಂದರೆ we have released, during 92-93, ನನಗೆ ಗೊತ್ತಿರುವ ಹಾಗೆ 45 ಕೋಟಿ ರೂಪಾಯಿಗಳು ಬಿಡುಗಡೆಯಾಗಿರತಕ್ಕಂಥಾದ್ದು. If there is some mistake about the figures, I stand corrected. ಅಕ್ಟೋಬರ್ 2, 1992 ಮಹಾತ್ಮಾ ಗಾಂಧಿ ಜಯಂತಿಯ ದಿವಸ ನಾವು ಮೂರು ತಿಂಗಳಿಗಾಗಿ 45 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅನಂತರ ಸೆಪ್ಟಂಬರ್‌ನಿಂದ ತಹಲ್‌ವರೆಗೆ ಐದು ಪೈಸೆಯನ್ನೂ ಕೊಟ್ಟಿಲ್ಲ. ನಾನು ಇರುವವರೆಗೆ ಜೂನ್, ಜುಲೈ, ಆಗಸ್ಟ್‌ಗೆ ಕೊಟ್ಟಾದ ಮೇಲೆ ಎರಡು ತಿಂಗಳು ಮಾತ್ರ ಬಾಕಿ ಇತ್ತು. ನವೆಂಬರ್ 20ನೇ ತಾರೀಖಿಗೆ ನಿಮಗೆ ನಾನು ಅಧಿಕಾರ ಬಿಟ್ಟು ಕೊಟ್ಟಿದ್ದೇನೆ. ಆ ಹಣವನ್ನು ಬಿಡುಗಡೆ ಮಾಡತಕ್ಕಂಥಾದ್ದರ ಒಳಗಾಗಿ ಅಧಿಕಾರವನ್ನು ಬಿಟ್ಟು ಕೊಡಬೇಕಾಯಿತು. ನೀವು ಸೆಪ್ಟಂಬರ್ ತಿಂಗಳಿಂದ ಹಣವನ್ನು ಬಿಡುಗಡೆ ಮಾಡಿಲ್ಲ. ನೀವು ಹಣವನ್ನು ಇಟ್ಟು ಕೊಡುತ್ತೇವೆ ಎಂದು ಹೇಳಿದರೆ ಡ್ರಾಪ್ ಔಟ್ ತಪ್ಪಿಸಲು ಸಾಧ್ಯವಾಗುತ್ತದೆ. ಡ್ರಾಪ್ ಔಟ್ ಸಿಕ್ಕಾಪಟ್ಟೆ ಕಡಿಮೆಯಾಗಿದೆ. ಹೆಣ್ಣು ಮಕ್ಕಳ ಕೈಗೆ, ತಾಯಿ ಇಲ್ಲದಿದ್ದರೆ ಹತ್ತಿರದ ಸಂಬಂಧದವರಿಗೆ ಹಣ ಕೊಡಬೇಕೆಂದು ಕೂಡ ಕಾನೂನು ಮಾಡಿದ್ದೆವು. ನೀವು ಹಣ ಬಿಡುಗಡೆ ಮಾಡದೇ ಇರುವುದರಿಂದ ಈಗ ಪುನಃ ಡ್ರಾಪ್ ಔಟ್ ಶುರುವಾಗಿದೆ ಎಂಬ ವರದಿಯೂ ಕೂಡ ನನಗೆ ಬಂದಿದೆ. You please get all these things verified. ನೀವು ಹಣವನ್ನು ಪ್ರೊವೈಡ್ ಮಾಡಿದ್ದರೆ 1991-92, 1992-93 ಕ್ಕೆ ಎಷ್ಟು, ಆ ಕ್ಯಾರಿ ಓವರ್ ಆಗಿರತಕ್ಕದ್ದು ಎಷ್ಟು ಹಣ ಹಾಗೂ ಟೋಟಲ್ ಎಷ್ಟಿದೆ ಎಂಬುದು ತಿಳಿಸಿರಿ. ನನಗೆ ಗೊತ್ತಿದ್ದ ಹಾಗೆ ಕಳೆದ ವರ್ಷದ್ದೂ ಸೇರಿದರೆ, 98.50 ಕೋಟಿ ರೂ.ಗಳು ಆಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಬಂಗಾರಪ್ಪನವರು ಜೂನ್, ಜುಲೈ, ಆಗಸ್ಟ್‌ನ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರು. ತಾವುಗಳು 80 ಕೋಟಿಗಳಲ್ಲಿ ಒಂದು ದುಡ್ಡನ್ನು ಕೂಡ ರಿಲೀಸ್ ಮಾಡಿಲ್ಲ ಎಂದು ಹೇಳಿದ್ದೀರಿ. ಅವರು ಕೂಡ ಮುಖ್ಯಮಂತ್ರಿಗಳಾಗಿದ್ದವರು. ತಾವುಗಳು ಇಲ್ಲ ಎಂದು ಹೇಳುತ್ತೀರಿ; ಅವರು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ, ಇದನ್ನು ಮುಖ್ಯವಾಗಿ ಎನ್‌ಲೈಟ್‌ಅನ್ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ:– ನಿಮ್ಮ ಕ್ಷೇತ್ರದಲ್ಲಿ ಹಣ ಬಂದಿಲ್ಲವೇ?

ಶ್ರೀ ಆರ್. ವಿ. ದೇಶಪಾಂಡೆ:– ನನ್ನ ಕ್ಷೇತ್ರದಲ್ಲಿ ಈ ವರ್ಷವೂ ದುಡ್ಡು ಕೊಟ್ಟಿಲ್ಲ. Let me be very frank ಏಕೆಂದರೆ ಈ ಕಾರ್ಯಕ್ರಮವು ಪ್ರಾಕ್ಟಿಕಲ್ ಇಲ್ಲ. ಬ್ಯಾಂಕ್‌ನವರು ನಿಮಗೆ ಕೋ-ಆಪರೇಟ್ ಮಾಡಿಲ್ಲ. ಬ್ಯಾಂಕ್‌ನವರು ಅಕೌಂಟ್ ಮಾಡಲು ಕೊಟ್ಟಿಲ್ಲ. ಪೆಟರ್‌ಮೆಂಟ್ ಕಮಿಟಿ ಮೂಲಕ ನೀವೇನು ಕೊಟ್ಟಿದ್ದೀರಿ ಅದರಿಂದ ಫಂಡ್ಸ್ ಮಿಸ್‌ಯೂಸ್ ಆಗುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಎರಡು ವರ್ಷಗಳಲ್ಲಿ ಜೂನ್, ಜುಲೈ ಮತ್ತು ಆಗಸ್ಟ್ ಈ ಮೂರು ತಿಂಗಳಲ್ಲಿ ಮಾತ್ರ ಹಣ ಪಾವತಿಯಾಗಿರುವುದು. ಅವಕ್ಕೋಸ್ಕರ ಈ ಮಾರ್ಚ್ ಒಳಗೆ ಕೊಡುತ್ತೀರಿ ಎಂದು ಹೇಳಿದ್ದೀರಿ, ಸಂತೋಷವಾಗಿದೆ. ನಾವು ನಿಮಗೆ ಕೊಡಿ ಎಂದು ಹೇಳಿಲ್ಲ, ಬೇಡ ಎಂದು ಹೇಳುವುದಿಲ್ಲ. ಇದನ್ನು ಮುಂದುವರಿಸುತ್ತೀರೋ ಇಲ್ಲವೋ ಎಂಬುದನ್ನು ಸ್ಪಷ್ಟ ಮಾಡಿದರೆ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ಈಗ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಯವರ ಸದಭಿಪ್ರಾಯ ಬಗ್ಗೆ ನಮ್ಮ ವಾದ ವಿವಾದವಿಲ್ಲ. ಆದರೆ ವಾಸ್ತವಾಂಶವನ್ನು ನಾವು ಈ ಸದನದ ಮುಂದೆ ಇಡಬೇಕಾಗುತ್ತದೆ. ತಾವು ವಿಚಾರವನ್ನು ಎತ್ತಿದ ಕಾರಣ ನಾನು ಹೇಳಬೇಕಾಗಿದೆ. ಇಲ್ಲವಾದಲ್ಲಿ ನಾನು ಪ್ರಸ್ತಾಪ ಮಾಡುತ್ತಿರಲಿಲ್ಲ. ಇದನ್ನು ಎಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಒಳ್ಳೆ ಉದ್ದೇಶದಿಂದ ರಿಟೆನ್‌ಷನ್ ರೇಟ್ ಜಾಸ್ತಿ ಮಾಡಬೇಕೆಂದು ಪ್ರಾರಂಭ ಮಾಡಿದ್ದೇವೆ. ನಮ್ಮ ಉದ್ದೇಶ ಕೂಡ ಇದನ್ನು ವಿಶೇಷವಾದ ಕಾರ್ಯಕ್ರಮವನ್ನಾಗಿ ಮಾಡಬೇಕೆಂದು ಇದೆ. Some times we are misled by bureaucracy. This is one solitary case where the Hon'ble Ex–Chief Minister has been misled by the bureaucracy. ಅವರು 45 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿರಬಹುದು. It is not so. Unfortunately, No. I have verified again and again the fact. I don't find fault with the Hon'ble Ex–Chief Minister. The question is, you have been misled by them. Again and again I wanted to verify, ಇಲ್ಲಿ ಸ್ಟೇಟ್‌ಮೆಂಟ್ ಕೊಡುವ ಮೊದಲು I am very positive and I am very categorical, not even a single pie has been released out of the budget of 92–93.

ತಾವುಗಳು 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿರಬಹುದು. ಆದರೆ ಅದನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಬಿಡುಗಡೆ ಮಾಡಿಲ್ಲ. ಈಗ ನಮಗೆ 30 ಕೋಟಿ ರೂಪಾಯಿಗಳು ಈ ವರ್ಷಕ್ಕೆ ಬೇಕು. 20 ಕೋಟಿಗಳನ್ನು ಮಾರ್ಚ್ ಕೊನೆಗೆ ಏನು ಬಿಡುಗಡೆ ಮಾಡಿದ್ದೇವೆ ಅದರಲ್ಲಿ ಆರೂವರೆ ಕೋಟಿಗಳು ಇನ್ನೂ ಬಿಡುಗಡೆಯಾಗಿಲ್ಲ. It is still there in the P.D. Account.

ಅದು ಆರೂವರೆ ಕೋಟಿ, ಮತ್ತೊಂದು 30 ಕೋಟಿ. ನಾವು ಈ ವರ್ಷ ಬಿಡುಗಡೆ ಮಾಡಿದರೆ commitment for 31st March, ಈ ತಿಂಗಳ ಅಂತ್ಯಕ್ಕೆ ಅದು ಆಗುತ್ತದೆ. We are making efforts to release this amount by 31st March. ಇದನ್ನು ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ:– ನಾನು ಕೇಳತಕ್ಕಂಥಾದ್ದು ಈ ವರ್ಷ ಜೂನ್, ಜುಲೈ, ಆಗಸ್ಟ್ ತಿಂಗಳಿಗೆ ಹಣವನ್ನು ನಾವು ಪಂಚಿಕ ಮಾಡಿದ್ದೇವೆ ತಾನೇ? ಅಕ್ಟೋಬರ್ 2ನೇ ತಾರೀಖು ಗಾಂಧಿ ಜಯಂತಿ ದಿವಸ ನಾವು ಕೊಟ್ಟಿದ್ದೇವೆ. ಆ ಹಣ ಎಷ್ಟು ಬಿಡುಗಡೆಯಾಗಿದೆ? ಆ ಹಣವು 1991–92ಕ್ಕೆ ಕ್ಯಾರಿ

ಓವರ್ ಆಗಿರತಕ್ಕಂಥ ಹಣವೇ ? ಅಥವಾ 1992-93 ನೆಯ ಹಣವೇ ? ಎಷ್ಟಾಗಿದೆ ಎಂಬುದನ್ನು ಹೇಳಬಹುದಲ್ಲವೇ ? That is why I said ಫಿಗರ್ ಏನಾದರೂ ವ್ಯತ್ಯಾಸ ಇದ್ದರೆ I stand corrected. ಮೊದಲೇ ನಾನು ಹೇಳಿದ್ದೇನೆ ಯಾವ ವರ್ಷದ ಹಣ ಮತ್ತು ಎಷ್ಟು ಎಂಬುದನ್ನು ಹೇಳಿದರೆ ಸಾಕು. ಉಳಿದಿರುವ ಹಣ ಕೊಡುತ್ತೇವೆ ಎಂದರೆ ಬಹಳ ಸಂತೋಷ.

ಶ್ರೀ ಎಂ. ವೀರಪ್ಪ ಮೊಯಿಲಿ:- ಯಾವುದೇ ಹಣವು ಬಿಡುಗಡೆಯಾಗಿದ್ದರೆ ಅದು ಪಿಡಿ ಅಕೌಂಟ್‌ನಲ್ಲಿ ಇಡಬೇಕಾಗುತ್ತದೆ. Money which was released for the P.D. Account, the last time is before 31st March, 1992.

ಕರೆಂಟ್ ಫೈನಾನ್ಷಿಯಲ್ ವರ್ಷದಲ್ಲಿ ಯಾವ ಒಂದು ಪೈಸೆ ಎಕ್ಸಟ್ರಾ which is meant for 92 is released to the P.D. Account. ಪೇಪರ್‌ನಲ್ಲಿರಬಹುದು. I don't know but even in paper, we have not seen any sanction anywhere. ಆದರೆ ಪಿಡಿ ಅಕೌಂಟ್‌ಗೆ ಬಿಡುಗಡೆಯಾದುದು 20 ಕೋಟಿಗಳು ಮಾತ್ರ. ಅದರಲ್ಲಿ 1991-92ಕ್ಕೆ ಸಂಬಂಧಪಟ್ಟಿದ್ದುದು 6.30 ಕೋಟಿ ಇನ್ನೂ ಪಿಡಿ ಅಕೌಂಟ್‌ನಲ್ಲಿದೆ ಇನ್ನೊಂದು 30 ಕೋಟಿ ರೂಪಾಯಿಯನ್ನು ನಾವು ಬಿಡುಗಡೆ ಮಾಡಿದರೆ balance required up to 31st March is only 23.7 crores including that 6.3 crores.

ಆ 23 ಕೋಟಿಯಲ್ಲಿ ನಾವು 13 ಕೋಟಿಯನ್ನು ಮಾರ್ಚ್ ಎಂಡ್ ಒಳಗೆ ಬಿಡುಗಡೆ ಮಾಡುತ್ತೇವೆ. ಇನ್ನು ಉಳಿದಂತಹ 10 ಕೋಟಿಯನ್ನು ಏಪ್ರಿಲ್‌ನಲ್ಲಿ ಬಿಡುಗಡೆ ಮಾಡುತ್ತೇವೆ. So this is the commitment we are going to meet. This is the actual fact.

ಶ್ರೀ ಎಸ್. ಬಂಗಾರಪ್ಪ:- ಬ್ಯುರೊಕ್ರಸಿಯಿಂದ ಮಿಸ್ ಲೀಡ್ ಆಗಿರಬಹುದೆಂದು ನನಗೆ ಹೇಳಿದಿರಿ. ನೀವು ಕೂಡ ಮತ್ತೆ ಅದೇ ಕೆಲಸವನ್ನು ಮಾಡಿಕೊಂಡು ಬಿಡುತ್ತೀರಿ ? ಅವಕ್ಕಾಗಿ ಬ್ಯುರೊಕ್ರಸಿಯಿಂದ ನೀವು ಕೂಡ ಮಿಸ್‌ಲೀಡ್ ಆಗಬಾರದು. ಬಹಳ ಎಚ್ಚರಿಕೆಯನ್ನು ವಹಿಸಿ ತಾವು ಹೇಳುವುದು ಒಳ್ಳೆಯದು. ನನ್ನ ಪ್ರಶ್ನೆಗೆ ಉತ್ತರ ಇಷ್ಟು ಬೇಕು. ಹಣ ಈ ವರ್ಷ ಪೇಮೆಂಟ್ ಆಗಿದುದ್ದು ಎಷ್ಟು ? ನೀವು ಈ ವರ್ಷ ಜೂನ್, ಜುಲೈ, ಆಗಸ್ಟ್ ಏನು ಕೊಟ್ಟಿದ್ದೀರಿ, ಅದು ಯಾವ ವರ್ಷದ್ದೆಂದು ಹೇಳಿಬಿಟ್ಟರೆ ಸಾಕು. 1991-92, ಅಥವಾ 1992-93ರದ್ದೋ, ಟೋಟಲ್ ಎಷ್ಟು ಅಷ್ಟನ್ನು ಹೇಳಿದರೆ ನನಗೆ ಸಾಕು.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ಈಗ ಬಜೆಟ್ ಮೇಲೆ ಉತ್ತರವನ್ನು ಕೊಡುತ್ತಿದ್ದಾರೆ. ಅವರು ಹೇಳಿದ್ದನ್ನು ಮೊದಲು ತಾವು ಸಮಾಧಾನವಾಗಿ ಕೇಳಿ. ಅಂಕಿಅಂಶಗಳನ್ನು ತಾವು ಬರೆದುಕೊಳ್ಳಿ. ಅವರು ಭಾಷಣವನ್ನು ಮುಗಿಸಿದ ನಂತರ ನಾನು ತಮಗೆ ಅವಕಾಶ ಕೊಡುತ್ತೇನೆ. ತಾವು ಏನು ಕೇಳಬೇಕು ಅದನ್ನು ಸವಿಸ್ತಾರವಾಗಿ ಕೇಳಿ, ಮಧ್ಯೆ ಮಧ್ಯೆ ಕೇಳುತ್ತಿದ್ದರೆ ಏನಾಗುತ್ತದೆ ಅಂದರೆ ಉತ್ತರವನ್ನು ನಾವು ಏನು ಆಸಕ್ತಿಯಿಂದ ಕೇಳಬೇಕೋ ಅದು ಕಡಿಮೆಯಾಗುತ್ತದೆ. ಅದಕ್ಕೆ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ತಾವು ಸಮಾಧಾನದಿಂದ ಪ್ರಶ್ನೆ ಮಾಡುವುದಕ್ಕಿಂತ ಅವರು ಹೇಳುವುದನ್ನು ಆಲಿಸಿಕೊಂಡು ನಂತರ ಪ್ರಶ್ನೆ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಇಲ್ಲಿ ಸಮಸ್ಯೆ ಏನೆಂದರೆ ನೀರಾವರಿ ಬಂದಾಗ 1991-92 ...

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:– ನಾನು ತಮ್ಮಲ್ಲಿ ಒಂದೇ ಒಂದು ವಿನಂತಿ ಮಾಡುತ್ತಿರುವುದು..

(ಗೊಂದಲ)

ಅಧ್ಯಕ್ಷರು:– ತಾವೆಲ್ಲಾ ಕುಳಿತುಕೊಳ್ಳಿ. ಮಾನ್ಯ ಯಡಿಯೂರಪ್ಪನವರನ್ನು ಕರೆದಿದ್ದೇನೆ ಅವರು ಮಾತನಾಡಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ:– ನಾನು ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೆ. ನಾವು ಕ್ಲಾರಿಫಿಕೇಷನ್ ಅನ್ನು ತಾವು ಹೇಳಿದಂಥ ಕೇಳುವ ಟೈಂನಲ್ಲಿ ಕೇಳುತ್ತೇವೆ. ಅವರಿಗೆ ಏನು ಸಾಧ್ಯವಿದೆ ಅದನ್ನು ಉತ್ತರ ಕೊಡಲಿ. ಮುಖ್ಯಮಂತ್ರಿಯವರ ಹತ್ತಿರ ನನ್ನ ಸಬ್‌ಮಿಷನ್ ಅಂದರೆ ತಾವು ಬಹಳ ಪ್ರಮುಖವಾಗಿರುವಂತಹ ಸಣ್ಣ ನೀರಾವರಿ, ದೊಡ್ಡ ನೀರಾವರಿ ವಿಷಯ ಬಂದಾಗ 1990-91, 1991-92 ಫಿಗರ್ಸ್ ಕೊಟ್ಟರಿ. 1992-93 ಫಿಗರ್ ಕೊಡಿ ಅಂತ ಕೇಳಿದೆ. ಅದನ್ನು ಕೊಡಲಿಲ್ಲ. ಆದರೆ ಬೇರೆ ವಿಷಯ ಬಂದಾಗ ಅಂದರೆ ಅಕ್ಷಯ ಮುಂತಾದ ಯೋಜನೆಗಳ ಬಗ್ಗೆ 1992-93 ಫಿಗರನ್ನು ಕೊಡುತ್ತಿದ್ದಾರೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಒಂದು ಪ್ರಮುಖವಾದಂತಹ ವಿಷಯ ಬಂದಾಗ ಫಿಗರ್ಸ್ ಕೊಟ್ಟರೆ ನಾವು ಆಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಕೂಲವಾಗುತ್ತದೆ. ಮಧ್ಯದಲ್ಲಿ ನಾವು ಇದನ್ನು ಕೇಳಲೇ ಬೇಕಾಗುತ್ತದೆ. ಇಲ್ಲದಿದ್ದರೆ ಪೂರ್ಣ ಭಾಷಣ ಮುಗಿದಾಗ ನಾವು ಏನನ್ನು ಕೇಳೋಣ. ಅಂಕಿ ಅಂಶವನ್ನು ಕೊಡದೇ ಇದ್ದರೆ ನಾವು ಏನನ್ನು ಕೇಳೋಣ ? ಅದನ್ನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇವೆ.

ಡಾ।। ಜೀವರಾಜ್ ಆಳ್ವ:– ರಿಲೆ ರೇಸ್ ಅಂತ ಹೇಳಿದರು. ಎರಡನೆಯ ಆಟಗಾರ ಮೂರನೆಯ ಆಟಗಾರನಿಗೆ ಬ್ಯಾಟನ್ ಕೊಟ್ಟಾಯಿತು, ಬ್ಯಾಟನ್ ಕೊಟ್ಟ ಮೇಲೆ ಜೊತೆಗೆ ಪ್ಯಾರಲಲ್ ಆಗಿ ಓಡಿಸುತ್ತಿದ್ದಾರೆ, ಅದನ್ನು ತಾವು ನಿಲ್ಲಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾಜಿ ಮುಖ್ಯಮಂತ್ರಿಗಳು ನನಗೆ ಕೆಲವು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ನಾನು ಆ ಎಚ್ಚರಿಕೆಯನ್ನು ಹೆಚ್ಚು ಪಾಲಿಸಬೇಕಾಗುತ್ತದೆ. I don't want to fall into the trap in which you have fallen; I don't want that. Let us atleast be vigilant. Ultimately, all of us should account for what we have done.

ಆದ್ದರಿಂದ ತಾವು ಎಚ್ಚರಿಕೆಯನ್ನು ಕೊಟ್ಟಿದ್ದಕ್ಕಾಗಿ ಬಹಳ ಧನ್ಯವಾದಗಳು. ಇವತ್ತು ನಾನು ಹೇಳುವಂಥದ್ದು it is a fact. ಆದ್ದರಿಂದ ಪೇಮೆಂಟ್ ಮಾಡುವ ಬಗ್ಗೆಯೂ ಕೂಡ ಹೇಳಿದ್ದೇನೆ. 31 ಮಾರ್ಚಿಗೆ 13.7 ಕೋಟಿ ಏನಿದೆ ಅದನ್ನು ಬಿಡುಗಡೆ ಮಾಡುತ್ತೇವೆ. ಇನ್ನೊಂದು 10 ಕೋಟಿ ಉಳಿಯುತ್ತದೆ. ಅದನ್ನು ಏಪ್ರಿಲ್ ಹೊತ್ತಿಗೆ ಡಿಸ್‌ಪರ್ಸ್ ಮಾಡುತ್ತೇವೆ.

ತೆಗೆದುಕೊಂಡಿರಬಹುದು, ಆದರೆ ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ನಾನು ಹೇಳುತ್ತಿಲ್ಲ. ಆದರೆ, ಕೆಲವರಿಗೆ ಹೂವಿನ ಜೋಕಾಲಿ ಸಿಗುತ್ತದೆ, ನಮಗೆ ಮುಳ್ಳಿನ ಜೋಕಾಲಿ ಸಿಕ್ಕಿದೆ, ಅಷ್ಟೇ ವ್ಯತ್ಯಾಸ. When Mr. Rajashekara Murthy handed over a flower bed. ಹೂವಿನ ಪಲ್ಲಕ್ಕಿ ಸಿಕ್ಕಿತ್ತು. ನನಗೆ ಮುಳ್ಳಿನ ಪಲ್ಲಕ್ಕಿ ಸಿಕ್ಕಿತು. ಆದರೂ ಪರವಾಗಿಲ್ಲ, ತಮ್ಮೆಲ್ಲರ ಆಶೀರ್ವಾದದಿಂದ ಈ ಮುಳ್ಳಿನ ಪಲ್ಲಕ್ಕಿಯನ್ನು, ಹೂವಿನ ಪಲ್ಲಕ್ಕಿಯಾಗಿ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಆದರೆ, ಎಲ್ಲಾ ಕಾಲಕ್ಕೂ ನೀವೇ ಇದ್ದಿರಿ.

ಶ್ರೀ ಎಂ. ವೀರಪ್ಪಮೊಯಿಲಿ:- ಅದನ್ನು ನಾನು ಒಪ್ಪುತ್ತೇನೆ, ತಾವು ಮೊದಲು ಇರಲಿಲ್ಲ, ಈಗ ಕೊನೆಯಲ್ಲಿ ಬಂದಿದ್ದೀರಿ. ನಾನು ಎಲ್ಲವನ್ನೂ ಸ್ಪಷ್ಟವಾಗಿ ಹೇಳಿದ್ದೇನೆ. ಇದರಲ್ಲಿ ನಮ್ಮದೂ ಜವಾಬ್ದಾರಿ ಇದೆ. ನಾನು ಜವಾಬ್ದಾರಿ ತಪ್ಪಿಸಿಕೊಳ್ಳುವುದಕ್ಕೆ ಈ ಮಾತನ್ನು ಹೇಳುತ್ತಿಲ್ಲ. ಆದರೆ, ಕೆಲವರಿಗೆ, ಕೆಲವರ ಭಾಗ್ಯ, ಒಂದು ರೀತಿಯ ಚಿನ್ನದ ಸ್ಪೂನ್ born with the silver spoon; ನಾವು ಅಲ್ಯುಮಿನಿಯಂ, ಇದರಲ್ಲಿ ಇಷ್ಟೇ ವ್ಯತ್ಯಾಸ. That is the problem for which I alone should be blamed not anybody else. ನಾನು ಬೇರೆಯವರನ್ನು ಬ್ಲೇಮ್ ಮಾಡುವುದಕ್ಕೆ ತಯಾರಿಲ್ಲ. ನಾನು ಏನು ಹೇಳಿದ್ದೇನೆಂದರೆ, I think the Hon. Members understood what I have said. The target is upto 1992. This is the target given by you only. I have not given the target. The department has projected this figure. Upto October this should be collected. If there is a shortfall of Rs. 500 crores on all accounts, I must collect not only my target for November, December, January, Febraury, March, but I will burdened with another Rs. 500 crores. This is the problem which I have said. This is the additional responsiblity came on me.

ತಮ್ಮ ಆಶೀರ್ವಾದದಿಂದ ಈ ಅಡಿಷನಲ್ ಜವಾಬ್ದಾರಿಯನ್ನು ಹೊರುತ್ತೇನೆ. I am not going to shirk my responsibility. I must do it in the best interest of my Party and the State. I will do it with your blessings. ಇದೇ ಪ್ರಕಾರ ನಮ್ಮ ಕಲೆಕ್ಷನ್ ಕೂಡ, ಡಿಸೆಂಬರ್ 1992ರಲ್ಲಿ 175.35 ಕೋಟಿ ಕಲೆಕ್ಷನ್ ಮಾಡಿದ್ದೇವೆ. ಜನವರಿ 1993ರಲ್ಲಿ 199.45 ಕೋಟಿ, ಫೆಬ್ರವರಿ 1993ರಲ್ಲಿ 194.75 ಕೋಟಿ ಕಲೆಕ್ಟ್ ಮಾಡಿದ್ದೇವೆ. We have done it by plugging the loopholes and enforcing the discipline.

ಈಗ ಟಾರ್ಗೆಟ್ 2468 ಕೋಟಿ. ಇದರಲ್ಲಿ 168 ಕೋಟಿ ರೂಪಾಯಿ ಅಡಿಷನಲ್ ರಿಸೋರ್ಸಸ್ ಮೊಬಿಲೈಸೇಷನ್ ಕೂಡ ಸೇರಿದೆ.

ಆದರೆ ಟಾರ್ಗೆಟ್ 2468 ಕೋಟಿ, ತಮಗೆ ಗೊತ್ತಿದೆ, ಎಂಟ್ರಿಟ್ಯಾಕ್ಸ್‌ನಲ್ಲೂ ಕೂಡ ಸಾಕಷ್ಟು ಬದಲಾವಣೆಯಾಯಿತು. ಅನೇಕ ಐಟಂಗಳು ಹೊರಟು ಹೋದವು, ಅನೇಕ ರಿಯಾಯಿತಿಗಳು ಹೊರಟು ಹೋದವು ಮತ್ತು ಕಡಿಮೆಯಾಗುವುದಕ್ಕೆ ಏನು ಕಾರಣ ಎಂದರೆ, ಸುಮಾರು 90 ಕೋಟಿ ರೂ. ಏನು ಅಡಿಷನಲ್ ರಿಸೋರ್ಸಸ್ ಮೊಬಿಲೈಸೇಷನ್ ಮಾಡಲು ಈ ಬಜೆಟ್‌ಗೆ, ಸದನ ಮಂಜೂರಾತಿ ಕೊಟ್ಟಿದೆ. ಇದರಿಂದ ಒಂದು ನಯಾ ಪೈಸೆ ಕೂಡ ಬರಲಿಲ್ಲ. ಅದು ಬರೀ ಕಾಗದದಲ್ಲಿ ಉಳಿದುಕೊಂಡಿದೆ. Not even a pie we got under the additional resource mobilisation; we have not enforced it. This money was not available to me and the entry tax which was later introduced and again number of items

have been deleted and the expected income did not come. ಎಕ್ಸೈಸ್ ಬಗ್ಗೆ ಪ್ರತ್ಯೇಕವಾಗಿ ಹೇಳುತ್ತೇನೆ. It is an independent subject by itself. ಎಂಟ್ರಿ ಟ್ಯಾಕ್ಸ್ ಬಹಳ ಡಿಲೇಯಾಗಿ ಇಂಪ್ಲಿಮೆಂಟ್ ಆಗಿದೆ. ಇದರಲ್ಲಿ 90 ಕೋಟಿ ಕಡಿಮೆಯಾಗಿದೆ. It should have been implemented on schedule. It was not implemented.

ಇದೇ ಒಂದು ಬಾಬಿನಲ್ಲಿ ಸುಮಾರು 90 ಕೋಟಿ ನಮಗೆ ನಷ್ಟವಾಗಿದೆ, ಈ 90 ಕೋಟಿ ನಮಗೆ ಬರಲಿಲ್ಲ. This is the shortfall under the commercial taxes, motor vehicles, State excise, stamps, etc.: ಇದನ್ನು ತಾವು ಹಿಂದಿನ ವರ್ಷಕ್ಕೆ ಹೋಲಿಸಿದರೆ, 1992–93 was much better. The credit will go to the previous Government when compared to 1992–93. In 1992–93 there is a very very steep fall in the financial management. ಏಕೆಂದರೆ, ಕಮರ್ಷಿಯಲ್ ಟ್ಯಾಕ್ಸಸ್ 1992–93ರಲ್ಲಿ 96.79 ಪರ್ಸೆಂಟೇಜ್ ಇದ್ದದ್ದು, 81.0 ಪರ್ಸೆಂಟೇಜ್‌ಗೆ ಅದು ಬಿದ್ದಿದೆ. For example, entry tax notify ಆದದ್ದೇ 29ನೇ ಜನವರಿ 1993ರಲ್ಲಿ. We should have done it long back. ನಮ್ಮ ಸರ್ಕಾರ ಬಂದ ಮೇಲೆ ನೋಟಿಫೈ ಮಾಡಿದೆ. I don't want to deal with all these subjects.

ಡಾ।। ಜೀವರಾಜ ಆಳ್ವ:– ಮಾನ್ಯ ಬಂಗಾರಪ್ಪನವರ ನೇರವಾದ ಪ್ರಶ್ನೆ ಏನೆಂದರೆ, there is a shortfall between whatever targetted and achieved by the previous regime and now whatever proposed target that you are going to achieve, you are not very convincing. Why that shortfall arises. Whatever he had achieved in his regime and whatever you propose to achieve. ಇದು ಹೈಪಾಥಿಕೇಷನ್ ಆಗುತ್ತದೆ. Financial systemನಲ್ಲಿ hypothecated fall, I am sorry ಇದು ಆಗುವುದಿಲ್ಲ. ಮಾರ್ಚಿಯವರೆಗೆ ಏನಾಗುತ್ತದೆ ಎಂಬುದನ್ನು ನೀವೇ ಲೆಕ್ಕ ಹಾಕಿ ಹೇಳಬೇಕು. ಎಂಟ್ರಿ ಟ್ಯಾಕ್ಸ್, ಆ ಟ್ಯಾಕ್ಸ್, ಈ ಟ್ಯಾಕ್ಸ್‌ಗಳಿಗೆ ರಿಯಾಯಿತಿ ಕೊಟ್ಟಿದ್ದೇವೆಂದು ಹೇಳಬಹುದು. Other arguments don't stand.

ಶ್ರೀ ಹೆಚ್. ಏಕಾಂತಯ್ಯ:– ಜನವರಿಯಲ್ಲಿ ಎಂಟ್ರಿ ಟ್ಯಾಕ್ಸ್ ಬಗ್ಗೆ ನೋಟಿಫಿಕೇಷನ್ ಆಯಿತು ಎಂದು ಹೇಳಿದಿರಿ. ಇದು ಏತಕ್ಕೋಸ್ಕರ ಇಷ್ಟು ದಿವಸ ಡಿಲೇ ಆಯಿತು, 10 ತಿಂಗಳು ಡಿಲೇ ಆಗಿದೆ, ಏತಕ್ಕೋಸ್ಕರ ಇಷ್ಟು ಡಿಲೇ ಆಯಿತು. ಕನಿಷ್ಟ ಪಕ್ಷ ಏಪ್ರಿಲ್‌ನಿಂದ 8–9 ತಿಂಗಳು ತಡವಾಗಿದೆ, ಇದಕ್ಕೆ ತಾವೇನು ಕಾರಣ ಹೇಳುತ್ತೀರಿ ? ಆ ಕಾರಣವನ್ನು ಈ ಸದನಕ್ಕೆ ತಾವು ಹೇಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ:– ಇದಕ್ಕೆ ಕಾರಣ ಹೇಳುವುದಕ್ಕೆ ಹೋಗುವುದಿಲ್ಲ, ಅದು ಅನಾವಶ್ಯಕ. because the traders would not have co–operated. ಅವರು ಬಂದ್ ಮಾಡಿದರು, ಮತ್ತು ಬೇರೆ ಬೇರೆ ಕಾರಣಗಳೂ ಇವೆ.

ಡಾ।। ಜೀವರಾಜ ಆಳ್ವ:– ಬಹಳ ತೊಂದರೆಗಳನ್ನು ಅರ್ಥ ಮಾಡಿಕೊಂಡರೂ ಕೂಡ, very very serious charge. Shortfall of mobilisation; He says I have achieved so much. The credit who should take whether the officer should take or the person who headed the Government. That is different. That is again debatable. But the point, is the shortfall, how does he explain?

ಶ್ರೀ ಬಿ. ಎಸ್. ಯಡಿಯೂರಪ್ಪ:– ಎಂಟ್ರಿ ಟ್ಯಾಕ್ಸ್ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿರುವ

ಪ್ರಕಾರ, 90 ಕೋಟಿ ನಮಗೆ ಬರಬೇಕಾದದ್ದು ಬರಲಿಲ್ಲ. ಇದಕ್ಕೆ ಎಂಟ್ರಿ ಟ್ಯಾಕ್ಸ್ ಎಫೆಕ್ಟಿಗೆ ಕೊಡುವುದು ನಿಧಾನವಾಯಿತು ಎಂದು ಹೇಳಿದ್ದಾರೆ. ಇವತ್ತು, ಇಡೀ ರಾಜ್ಯದ ಬೊಕ್ಕಸಕ್ಕೆ ಬರತಕ್ಕ 90 ಕೋಟಿ ಬರಲಿಲ್ಲವೆಂದು ಹೇಳಿವರೆ, ಈ ಎಂಟ್ರಿ ಟ್ಯಾಕ್ಸ್ ಇಂಟ್ರಡ್ಯೂಸ್ ಮಾಡುವುದು, ಇದಕ್ಕೆ ಸಂಬಂಧಿಸಿದ ಕಾನೂನು ಜಾರಿಗೆ ತರುವುದು ಏಕೆ ತಡವಾಯಿತು ಎನ್ನುವುದನ್ನು ಈ ಸದನಕ್ಕೆ ಹೇಳಬೇಕಾಗುತ್ತದೆ.

Sri M. Veerappa Moily:– I have already explained it., The delay in implementing the entry tax, as a result of which there is loss of 90 crores. Failure to retarget upto October, 92 which comes to about 400 crores and odd. About 500 crores is a shortfall because of mainly these two reasons upto October 92. Mainly becuase of this. About Rs. 500 crores is very clear where the shortfall has been occured, Rs. 90 crores because of delay in implementing the entry tax and failure to reach target upto October, 92 which comes to about 400 crores and odd. Nearly about Rs. 500 crores is clean shortfall. It can be explained. There is no interpretation. It can be explained very clearly.

ಶ್ರೀ ಆರ್. ಎಲ್. ಜಾಲಪ್ಪ:– ಮಾರ್ಚ್ 30ರೊಳಗೆ ಈ ಶಾರ್ಟ್ ಫಾಲ್ ಏನಾದರೂ ಮೇಕ್ ಆಫ್ ಆಗುತ್ತದೆಯೇ ?

Sri M. Veerappa Moily:– What I have said is, some shortfall. I am trying to make up this, ಅದರ ಬಗ್ಗ ಸಾಕಷ್ಟು ವಿವರಗಳನ್ನು ಈಗಾಗಲೇ ನಾನು ಕೊಟ್ಟಿದ್ದೇನೆ. Corresponding period of 91–92 and corresponding period of.....

Sri D.B. Chandra Gowda:_ For the first time the Hon'ble Finance Minister has taken the House into confidence; In terms of collection; and in terms of expenditure. Every year we were asking for performance budget.

ಪ್ರತಿವರ್ಷವೂ ನಾವು ಇದನ್ನೇ ಕೇಳುತ್ತಾ ಇದ್ದೇವೆ. ಪರ್ಫಾರ್ಮೆನ್ಸ್ ಬಜೆಟ್ ಕೊಡಿ ಎಂದು ಕೇಳಿಕೊಂಡು ಬಂದಿದ್ದೇವೆ. Why don't you put it in black and white form and give it in the form of a book, whether you call it a white paper or ....

Sri M. Veerappa Moily:– My speech itself can form a white paper.

Sri. D. B. Chandre Gowda:– Why don't you codify and give it in the form of a book?

Sri M. Veerappa Moily:– With all this shortfall, my determination is we will make up, whatever happen,

ಎಲ್ಲಾ ಶಾರ್ಟ್‌ಫಾಲನ್ನು ಭರ್ತಿ ಮಾಡುತ್ತೇನೆ ಎಂದು ನಾನು ಹೇಳುವುದಕ್ಕಾಗುವುದಿಲ್ಲ. I may not be in a positon to give an assurance on the floor of the House. It may be impracticable. I must tell you with all this; I am going to make up. Out of 490 crores, I am going to make up 350 crores. Rs. 140 crores may be a

shortfall which I can't help. ವ್ಯಾವಹಾರಿಕವಾಗಿ ನಾನು ಇವೊತ್ತು ಇಲ್ಲಿ ಮಾತನಾಡಬೇಕಾದರೆ, ಏನೋ ಹೋಪ್ಸನ್ನು ರೈಸ್ ಮಾಡಿಕೊಂಡು, then I should not slip., With all the shortfall of Rs. 490 cores, about Rs. 350 crores I am going to make up. I want your support. Rs. 140 crores will be the shortfall, I don't think I can make it up. This is the assurance to this House.

ಇನ್ನು ಸ್ಟೇಟ್ ಎಕ್ಸೈಸ್‌ನಲ್ಲಿಯೂ ಕೂಡ ತಾವು ನೋಡಿರಬಹುದು ಈಗಾಗಲೇ we have plugged the leakages. Because recorded consumption of arrack it has gone up to 10 lakh. IML has gone up to 4.25 lakhs, then beer has gone up by 6.50 lakhs.

ಈ ಮೂರು ತಿಂಗಳಲ್ಲಿ ಇಷ್ಟು ಕನ್‌ಸಂಪ್ಷನ್ ಜಾಸ್ತಿಯಾಗಿದೆ. Extra revenue per month increase comes to 4.81 crores. This is my contribution. By per month extra plugging the loopholes we have 4.80 crores per month. This is the extra resources we have earned from this.

Sri C. Byre Gowda:- It is not even a fringe.

Sri M. Veerappa Moily:- That is another matter. Because I have to work within the excise policy of 1992–93. I cannot have a new excise policy. ಕಂಪ್ಯಾರಿಟಿವ್ ಕಲೆಕ್ಷನ್ ಏನಿದೆ ಅದನ್ನು ನಾನು ಒಮ್ಮೆ ಹೌಸ್‌ನಲ್ಲಿ ಕೊಟ್ಟಿದ್ದೇನೆ. ಆದರೂ ಕೂಡ ಅದನ್ನು ರಿಪಿಟಿಷನ್ ಮಾಡುತ್ತೇನೆ. ಈಗ 1991–92ರಲ್ಲಿ ಎಕ್ಸೈಸ್ ರೆವಿನ್ಯೂ ಕಂಪ್ಯಾರಿಟಿವ್ ಕಲೆಕ್ಷನ್: 37 ಕೋಟಿಗಳು ಆದರೆ ನವೆಂಬರ್ 1992–93ರಲ್ಲಿ 39.32 ಕೋಟಿಗಳು. ಡಿಸೆಂಬರ್ 1991ರಲ್ಲಿ 35.36 ಕೋಟಿಗಳು ಇದ್ದರೆ, ಡಿಸೆಂಬರ್ 1992ರಲ್ಲಿ 43.02 ಕೋಟಿಗಳು ಆಗಿವೆ. ಜನವರಿ 1992ರಲ್ಲಿ 40.66 ಕೋಟಿ ಎಕ್ಸೈಸ್ ರೆವಿನ್ಯೂ ಆದರೆ ಜನವರಿ 1993ರಲ್ಲಿ 49.40 ಕೋಟಿಗಳು ಆಗಿವೆ. ಅಂದರೆ ಸುಮಾರು 10 ಕೋಟಿ ಹೆಚ್ಚಿನ ರೆವಿನ್ಯೂ ಟೋಟಲ್ ರೆವಿನ್ಯೂ ಕಲೆಕ್ಟ್ ಮಾಡಲಿಕ್ಕೆ ಆಗುತ್ತದೆ. ಇದು ಟೆಂಟೇಟಿವ್ ಫಿಗರ್ಸ್, ಲೇಟೆಸ್ಟ್ ಫಿಗರ್ಸ್ ಇನ್ನೂ ಸ್ವಲ್ಪ ಹೆಚ್ಚಿಗೆ ಇರಬಹುದು. ಫೆಬ್ರವರಿ 1992ರಲ್ಲಿ 39.13 ಕೋಟಿಗಳು ಆದರೆ ಫೆಬ್ರವರಿ 1993ರಲ್ಲಿ 45 ಕೋಟಿಗಳು ಆಗಿದೆ. ಉದಾಹರಣೆಗೆ, ಐಎಂಎಲ್‌ನಲ್ಲಿ ತಮಗೆ ಹೇಳುವುದಿದ್ದರೆ, ಆ ಬಗ್ಗೆ ತಮಗೆ ಈಗಾಗಲೇ ನಾನು ಹೇಳಿದ್ದೇನೆ. ಡಿಸೆಂಬರ್ 1992 ಐಎಂಎಲ್‌ನಲ್ಲಿ ಕಲೆಕ್ಷನ್ 3.81 ಕೋಟಿಗಳು ಇದ್ದರೆ, ಡಿಸೆಂಬರ್ 1992ರಲ್ಲಿ ಸ್ಮಾಲ್ ಅಡ್ಜಸ್ಟ್‌ಮೆಂಟ್‌ನಲ್ಲಿ 5.48 ಕೋಟಿಗಳು ಬಂದಿದೆ. ಜನವರಿ 1992ರಲ್ಲಿ 4.40 ಕೋಟಿಗಳು ಇದ್ದರೆ, ಜನವರಿ 1993ರಲ್ಲಿ 8.17 ಕೋಟಿಗಳು. ಫೆಬ್ರವರಿ 1992ರಲ್ಲಿ 4.46 ಕೋಟಿಗಳು ಇದ್ದರೆ, ಫೆಬ್ರವರಿ 1993 ರಲ್ಲಿ 8.00 ಕೋಟಿಗಳು ಆಗಿದೆ.

This will be the trend in the days to come and in the years to come in so far as excise revenue is concerned.

ಕನ್‌ಸಂಪ್ಷನ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಅರಾಕ್ ಎಷ್ಟು ಮೇಲೆ ಹೋಗಿದೆ ಎಂಬ ವಿವರಗಳನ್ನು ಆಗಲೇ ಕೊಟ್ಟಿದ್ದೇನೆ. ಅದನ್ನು ಪುನಃ ಹೇಳುವಂಥ ಅವಶ್ಯಕತೆ ಇಲ್ಲ ಎಂದು ಭಾವಿಸಿದ್ದೇನೆ. ಆದ್ದರಿಂದ ಎಕ್ಸೈಸ್ ಬಗ್ಗೆ ನಮ್ಮ ಹೊಸ ನೀತಿ ಏನಿರುತ್ತದೆ ಎಂಬುದನ್ನು ಹೇಳಿದ್ದೇನೆ. ಅವರ ಕಲೆಕ್ಷನ್ಸ್ ಬಗ್ಗೆ ಅಂಕಿ ಅಂಶಗಳನ್ನು ಕೂಡ ಕೊಟ್ಟಾಗಿದೆ.

ಶ್ರೀ ಸಿ. ಬೈರೇಗೌಡ:– ತಾವುಗಳು ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಡಿಸ್ಟಿಲರಿಗಳಿಗೆ ಪರವಾನಗಿ ಕೊಟ್ಟಿದ್ದೀರಿ ?

ಶ್ರೀ ಎಂ. ವೀರಪ್ಪಮೊಯಿಲಿ:– ನಾವು ಕೊಟ್ಟಿಲ್ಲ, ಹಾಗೇನಾದರೂ ತಮ್ಮಲ್ಲಿ ವಿವರಗಳು ಇದ್ದರೆ ಕೊಡಿ.

ಶ್ರೀ ಸಿ. ಬೈರೇಗೌಡ:– ನಿಮ್ಮ ಸರ್ಕಾರದಿಂದ 19–11–1992ರಲ್ಲಿ, ನಿಮ್ಮ ಎಕ್ಸೈಸ್ ಕಮೀಷನರ್‌ಗೆ ನಿರ್ದೇಶನ ಕೊಟ್ಟು ಒಂದು ಡಿಸ್ಟಿಲರಿಯನ್ನು "I, K. S. Ponnappa, IAS., Excise Commissioner in Karnataka, Bangalore. Under the provisions of section 13 and 16 of Karnataka Excise act 1965 hereby licence you, M/s. Netravathi Distiilery, Door no. 30/51, 61, Unity shopping complex, Market, Manglore D.K. District". ಇದು ಯಾವಾಗ ಕೊಟ್ಟಿದ್ದೀರಿ ಎಂಬ ವಿಚಾರವನ್ನು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ:– ಅದರ ವಿವರಗಳನ್ನು ನಾನು ಕೊಡುತ್ತೇನೆ. ಎಕ್ಸೈಸ್ ಬಗ್ಗೆ ನಾವು ಈಗಾಗಲೇ ವಿವರವನ್ನು ಕೊಟ್ಟಿದ್ದೇವೆ, ಕಮರ್ಶಿಯಲ್ ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ನಾವು ಈಗಾಗಲೇ ವಿವರವನ್ನು ಕೊಟ್ಟಿದ್ದೇವೆ. ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ಸಂಪೂರ್ಣವಾದಂತಹ ವಿವರವನ್ನು ಕೊಡಲಾಗಿದೆ. ಈಗ ಪ್ರಮುಖವಾಗಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಾನು ಜನರಲ್ ಆಗಿ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರುಗಳು ಬೇರೆ ಬೇರೆ ರೀತಿಯಲ್ಲಿ ತಾವು ಅನೇಕ ಪ್ರಶ್ನೆಗಳನ್ನು ಎತ್ತಿದ್ದೀರಿ, ಅದಕ್ಕೆ ವಿವರವನ್ನು ಕೊಡಬೇಕಾದರೆ ಕೊಡುತ್ತೇನೆ. ಬಜೆಟ್ ಡಿಮ್ಯಾಂಡ್‌ನಲ್ಲಿ ವಿಶ್ಲೇಷಣೆ ಮಾಡಿ ವಿವರವಾಗಿ ಉತ್ತರ ಕೊಡಬೇಕಾಗಿದೆ. ಆದರೆ ಈ ಡಿಮ್ಯಾಂಡ್, ಸಾಧಾರಣ ಪಾಲಿಸಿ ಮ್ಯಾಟರ್‌ಗಳಲ್ಲಿ ಜನರಲ್ ಆಗಿ ಕೊಡಬೇಕಾದಂಥ ಉತ್ತರಗಳನ್ನು ನಾನು ಈಗಾಗಲೇ ಕೊಟ್ಟಿದ್ದೇನೆ, ತಾವು ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದೀರಿ. ಬಹಳ ಸಮಯದಿಂದ ಟ್ಯಾಕ್ಸೇಷನ್ ಪ್ರಪೋಸಲ್ ಬಗ್ಗೆ ಒಂದು ಮಾತು ಕಮರ್ಶಿಯಲ್ ಟ್ಯಾಕ್ಸ್ ಬಗ್ಗೆ ಇಲ್ಲಿ ಚರ್ಚೆಯಾಗಿದೆ. ಪ್ರಮುಖವಾಗಿ ಅಲ್ಯೂಮಿನಿಯಂಅನ್ನು ಜನಸಾಮಾನ್ಯರು ಉಪಯೋಗ ಮಾಡತಕ್ಕಂಥ ಕಮಾಡಿಟೀಸ್ ಆಗಿರುವುದರಿಂದ ನೀವು ಅದಕ್ಕೆ ಹಾಕಿದ್ದು ತಪ್ಪು ಎಂದು ಸಾರ್ವತ್ರಿಕವಾಗಿ ಬಂದಿದೆ. I am withdrawing that.

ಶ್ರೀ ಬಿ. ಹೆಚ್. ಬನ್ನಿಕೋಡ್:– ನೀರಾವರಿ ಪೈಪ್‌ಗಳ ಮೇಲೆ ಹಾಕಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ:– ಆಟ, ಸೋಜಿ, ಮೈದಾ ಇದನ್ನು ಕೂಡ ಜನಸಾಮಾನ್ಯರು ಉಪಯೋಗ ಮಾಡತಕ್ಕಂಥ ಪದಾರ್ಥವಾದುದರಿಂದ I propose this to be withdrawn.

ಶ್ರೀ ಸಿ. ಬೈರೇಗೌಡ:– ರೈತರು ಉಪಯೋಗಿಸುತ್ತಿರುವಂತಹ ನೀರಾವರಿ ಪೈಪ್.

Sri M. Veerappa Moily:– I will examine that.

Sri C. Byre Gowda:– You are announcing now. Please announce to withdraw the tax on pipes used in agriculture. ಇದು ರೈತರಿಗೆ ಸಂಬಂಧಪಟ್ಟಿರುವಂಥದ್ದು.

ಶ್ರೀ ಎಂ. ವೀರಪ್ಪಮೊಯಿಲಿ:– ನ್ಯೂಸ್ ಪ್ರಿಂಟ್ ಪತ್ರಿಕೆಗಳಿಗೆ ಉಪಯೋಗ ಮಾಡತಕ್ಕಂಥದ್ದಕ್ಕೆ ನಾವೇನು ಎಂಟರಿ ಟ್ಯಾಕ್ಸ್ ಹಾಕಿದ್ದೇವೆ ಅದನ್ನು ಕೂಡ ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಏಕೆಂದರೆ ಸಣ್ಣ ಪತ್ರಿಕೆಗಳ ಬಗ್ಗೆ ಬೇಡಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಕೂಡ ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇವೆ.

ಇನ್ನು ಬಹಳ ಪ್ರಾಮುಖ್ಯವಾದಂತಹ ವಿಚಾರ. ನಾನು ಮೊನ್ನೆ ಬಜೆಟ್‌ನಲ್ಲಿ ಎಕ್ಸೈಸ್ ಬಗ್ಗೆ ಕೆಲವು ನೀತಿಗಳನ್ನು ಪ್ರಕಟ ಮಾಡಿದ್ದೇನೆ.

ಅದು ಈಗಾಗಲೇ ತಮ್ಮ ಅನುಭವದಲ್ಲಿ ಇದೆ. ನಮ್ಮ ಕರ್ನಾಟಕ ರಾಜ್ಯದಲ್ಲಿರುವ ಜನರಲ್ಲಿ ವಿಶೇಷವಾದಂತಹ ಶಂಕೆ ಬರತಕ್ಕಂಥದ್ದು, ಮತ್ತು ವಿಶೇಷವಾಗಿ ಬಹುಶಃ ರಾಮಕೃಷ್ಣ ಹೆಗಡೆಯವರ ಕಾಲದಿಂದಲೂ ಇವತ್ತಿನವರೆಗೂ ಕೂಡ ದೊಡ್ಡ ಸ್ಕ್ಯಾಂಡಲ್ bottling scandal ಎಂದು ಬರತಕ್ಕಂಥದ್ದು ಇದನ್ನು ಕರ್ನಾಟಕ ರಾಜ್ಯದ ಸಾರ್ವಜನಿಕ ಜೀವನವನ್ನೇ ಸಾಕಷ್ಟು ಕಲುಷಿತ ಮಾಡಿದೆ. ಜನ ಬಹಳ ಸಂಶಯದಿಂದ ನೋಡುತ್ತಿದ್ದಾರೆ. ಮತ್ತು ಇದು ಎಷ್ಟು ಸಾಧುವಾಗಿದೆ, ಇದರಿಂದ ನಮ್ಮ ಸರ್ಕಾರದ ಖಜಾನೆಗೆ ಸಾಕಷ್ಟು ಹೊಡೆತ ಬಂದಿದೆ. ಒಂದು ಕಡೆ ಸುಮಾರು 100 ಕೋಟಿ ರೂಪಾಯಿ ಹೊಡೆತ ಬಂದಿದೆ. ಇದು ಅನೇಕ ಬಾರಿ ಅದು ಅಗತ್ಯ ಇಲ್ಲದಂಥ ಬಾಬ್ತಿಗೆ ಹೋದಂತಹ ಪರಿಸ್ಥಿತಿ ಬಂದಿದೆ. ಕಲೆಕ್ಷನ್ ಕೂಡ ನಾವು ನೇರವಾಗಿ ಪ್ರೈವೇಟ್ ಬಾಟ್ಲರ್ಸ್‌ಗೆ ಕೊಡತಕ್ಕಂಥದ್ದು, ಕೆಲವು ಸಾರಿ ಅರ್‍ಯಾಕ್ ಕಂಟ್ರಾಕ್ಟರ್ಸ್‌ಗಳೇ ಡಿಸ್ಟಿಲರಿ ಇಲ್ಲದಿದ್ದರೂ ಕೂಡ ಅರಾಕ್ ಬಾಟಲನ್ನು ಕೊಡತಕ್ಕಂಥ ಪ್ರಸಂಗ ಬಂದು ಒಂದು ರೀತಿಯಲ್ಲಿ ಹೊಡೆತ ಆಗಿದೆ. ಇದರ ಬಗ್ಗೆ ನಾನು ಬಹಳ ಆಲೋಚನೆ ಮಾಡಿದ್ದೇನೆ. ವಿಶೇಷ ರೀತಿಯಲ್ಲಿ ಇಂತಹ ಪರಿಸ್ಥಿತಿಯಾದರೆ ಇದು ಏನು ಅಗತ್ಯ ಇದೆ. ಇದರ ಅಗತ್ಯ ಅನಗತ್ಯತೆಯ ಬಗ್ಗೆ even the functioning of the bottling units they have not been satisfactory. Adequate facilities for the bottling. ಆಗದೇ ಸಾಕಷ್ಟು ಮಾಲ್ ಪ್ರಾಕ್ಟಿಸಸ್ ಆಗುತ್ತಿದೆ. ಈ ದೃಷ್ಟಿಯಲ್ಲಿ ಅದು ಬಂದಿದೆ. ಮತ್ತು ಅವರಿಗೆ enhancement ಕೂಡ ಮೊನ್ನೆ ಇತ್ತೀಚೆಗೆ ಕೊಟ್ಟಿದೆ. ಅದರಿಂದ ಸಾಕಷ್ಟು ಖರ್ಚಾಗಿದೆ. ಆದರೆ ನಮ್ಮ ಅಭಿಪ್ರಾಯದ ಪ್ರಕಾರ ಸಪ್ಲೈ ಆಫ್ ಬಾಟ್ಲಿಂಗ್ ಏನಿದೆ ಇದು ಅನಾವಶ್ಯಕವಾದಂತಹ ಒಂದು ಪದ್ಧತಿ ಇದನ್ನು ನಾವು ನಿಲ್ಲಿಸಬೇಕು. ಒಂದು ನಿರ್ಮಲವಾದಂಥ ವಾತಾವರಣವನ್ನು ನಮ್ಮ ಸಾರ್ವಜನಿಕ ಜೀವನದಲ್ಲಿ ಮುಖ್ಯವಾಗಿ ನಾವು ಗಳಿಸಬೇಕು. ಏಕೆಂದರೆ ಈ ವಾದ ವಿವಾದದ ಸುಳಿಯಿಂದ ನಮ್ಮ ಸಾರ್ವಜನಿಕ ವ್ಯಕ್ತಿಗಳನ್ನು ಹೊರಗೆ ತರಬೇಕೆಂಬ ಒಂದು ಪ್ರಾಮಾಣಿಕವಾದಂತಹ ಸದ್ಭಾವನೆಯಿಂದ ನಾವು ಈ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೇವೆ. The system of granting bottling contract to private distillers will be discontinued. The Government will take over the supply of arrack in sealed containers including sachets through Government agency like MYSUGAR and MSIL. We will take over this.

Sri C. Byre Gowda:– Thank you, Thank you, Thank you.

ಶ್ರೀ ಎಂ. ವೀರಪ್ಪಮೊಯಿಲಿ:– ಈಗ ನೀವು ಹೇಳಿದ್ದು ಸತ್ಯವಾಗುತ್ತದೆ. 750 ಕೋಟಿ ಅಲ್ಲ, ಇನ್ನೂ ಕೂಡ ಜಾಸ್ತಿ ಬರಲಿಕ್ಕೆ ಸಾಧ್ಯತೆ ಇದೆ. ತಾವು ಏನು ಹೇಳಿದ್ದೀರಿ ಅದಕ್ಕೆ ಸ್ವಲ್ಪ ಕಾದು ನೋಡಿ. The new system will result in higher revenue to Government, lower price of arrack to consumers. Quality arrack will be supplied.

ಶ್ರೀ ವಾಟಾಳ್ ನಾಗರಾಜ್:- ಬೈರೇಗೌಡರಿಗೆ ಕುಡಿಯದೆ ಇದ್ದರೂ ಈಗ ಅಮಲು ಏರಿದೆ.

ಶ್ರೀ ಎಂ. ವೀರಪ್ಪಮೊಯಿಲಿ:– The amendment to rules will be carried out immediately from the next Excise year. It will come into force i.e., 1st of July. ಈ ನಿರ್ಣಯವನ್ನು ಜನ ಸ್ವೀಕಾರ ಮಾಡುತ್ತಾರೆ, ತಾವೆಲ್ಲಾ ಸ್ವೀಕಾರ ಮಾಡಿದ್ದೀರಿ. ಅದಕ್ಕಾಗಿ ಬಹಳ ಸಂತೋಷವಾಗುತ್ತದೆ. ಇದಕ್ಕೆ ತಮ್ಮೆಲ್ಲರ ಒಕ್ಕೊರಲಿನ ಬೆಂಬಲ ಬೇಕು.

ಶ್ರೀ ಸಿ. ಬೈರೇಗೌಡ:– ನಾನು ನೇರವಾಗಿ ಹೇಳುತ್ತಿದ್ದೇನೆ. ಇದಕ್ಕಿಂತ ಏನು ಬೇಕು? ನೀವು ಬೆಂಬಲ ಬೇಕೆಂದು ನಮ್ಮನ್ನು ಕೇಳುತ್ತಿದ್ದೀರಿ, ನಾವು ಬೆಂಬಲವನ್ನು ಕೊಡುವುದಕ್ಕೆ ತಯಾರಿದ್ದೇವೆ. ನಿಮ್ಮ ಪಕ್ಕದಲ್ಲಿ ಕುಳಿತಿರುವವರಿಗೆ ಹೇಳಿ. ನಿಮ್ಮ ಮುಖಂಡರೊಬ್ಬರು ನಾವು ಚುನಾವಣೆಗೆ ಬಂದಂತಹ ಸಂದರ್ಭದಲ್ಲಿ ಎಕ್ಸೈಸ್ ಲಾಬಿಯ ಕಡೆಗಣಿಸುವುದಕ್ಕೆ ಆಗುವುದಿಲ್ಲ, ನಾವಲ್ಲ ಹೇಳಿರತಕ್ಕದ್ದು.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಬೈರೇಗೌಡರು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅದನ್ನು ಬಹಳ ಅತಿಪ್ರಸಂಗತನ ಅಂತ ಹೇಳುತ್ತೇನೆ. ನಾವು ಕುಡಿಯಲೇ ಬೇಡಿ ಅಂತ ಹೇಳುವಂತ ಜನ ನಾವು ಇಲ್ಲಿ ಇದ್ದೇವೆ. ನಾವು ಕುಡಿಯೋದಕ್ಕೆ ವಿರೋಧವನ್ನು ಮಾಡುತ್ತೇವೆ. ನೀವೂ ಸಹ ಕುಡಿಯಲೇ ಬೇಡಿ ಅಂತ ನಾವು ಹೇಳುತ್ತೇವೆ. ಆದ್ದರಿಂದ ಇಲ್ಲಿ ಕುಡಿಯುದೇ ಇದ್ದವರು ಬಹಳ ಜನ ಇದ್ದಾರೆ. ಪಾನ ನಿರೋಧವನ್ನು ಜಾರಿ ಮಾಡಿದರೆ ಒಳ್ಳೆಯದು.

ಶ್ರೀ ಎಂ. ಮಹದೇವ್:– ಮಾನ್ಯ ಬೈರೇಗೌಡರಿಗೆ ಕುಡಿಯದೇ ಇದ್ದರೆ ಅವರಿಗೆ ಬುದ್ಧಿನೇ ಓಡುವುದಿಲ್ಲ.

ಶ್ರೀ ಬಿ. ಎಂ. ಇದಿನಬ್ಬ:– ಮದ್ಯಪಾನ ನಿಷೇಧವಾಗಬೇಕೆಂದು ಹೇಳುವವರು ನಾವು.

ಶ್ರೀ ಎಂ. ವೀರಪ್ಪಮೊಯಿಲಿ:– ಬಹಳ ತಾಳ್ಮೆಯಿಂದ ಕೆಲವು ಮಾತುಗಳನ್ನು ಕೇಳಿದ್ದಕ್ಕೆ ನಾವು ತಮ್ಮ ಮೂಲಕ ....

ಶ್ರೀ ವಾಟಾಳ್ ನಾಗರಾಜ್:– ರೈತರ ಬಗ್ಗೆ ರೈತರ ಬಗ್ಗೆ ....

ಶ್ರೀ ಎಂ. ಟಿ. ವೆಂಕಟೇಶ್:– ಪೈಪು .... ಪೈಪ್ ವಿಚಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ರೈತರ ಬಗ್ಗೆ ಒಂದು ಚಕಾರವೂ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ:– ರೈತ ಸಾಲದ ಪರಿಸ್ಥಿತಿಗೆ ಸಿಕ್ಕಿ ಸಾಯುತ್ತಿದ್ದಾನೆ. ಪೈಪ್ ಅಂತೆ ಪೈಪು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ರೈತರ ಬಡ್ಡಿ ಸುಸ್ತಿ ಬಡ್ಡಿ ಎಲ್ಲವನ್ನೂ ವಜಾ ಮಾಡಿದ್ದೇವೆಂದು ಹೇಳಿ. ರೈತರ ಬಗ್ಗೆ ಅನುಕೂಲವಾಗತಕ್ಕದ್ದನ್ನು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ:– ರೈತರ ಬಗ್ಗೆ ನಿಮ್ಮ ಹಕ್ಕನ್ನು ಕಸಿದುಕೊಳ್ಳಬಾರದೆಂದು ನನ್ನ ಇಚ್ಛೆ. ಏಕೆಂದರೆ ಈ ಬಗ್ಗೆ ಚರ್ಚೆ ಬರುತ್ತಿದೆ, ಚರ್ಚೆಗೆ ಬರುವಾಗ ಕುಳಿತುಕೊಂಡು ಚರ್ಚೆ ಮಾಡೋಣ. ಆ ವಿಚಾರ ಬಂದಾಗ ನಾನು ಅದಕ್ಕೆ ಸ್ಪಂದಿಸುತ್ತೇನೆ ಮತ್ತು ವಿಚಾರವನ್ನು ಕೂಡ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ:– ನೀರಾವರಿಗೆ ಉಪಯೋಗಿಸುತ್ತಿರತಕ್ಕಂಥ ಪೈಪ್ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ:– ಆಮೇಲೆ ನೋಡೋಣ.

ಅಧ್ಯಕ್ಷರು:– ಅವರು ಸಂಪೂರ್ಣ ಮಾಡಲಿ, ಆಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ:– ನಾನು ಮೊದಲೇ ಹೇಳಿದ ನಮಗೆಲ್ಲಾ ಉತ್ತರ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾಜಿ ಮುಖ್ಯಮಂತ್ರಿಗಳಿಗೆ ಮಾತ್ರ ಜವಾಬು ಕೊಡುವ ಹಾಗೆ ಕಾಣುತ್ತದೆ. ನಾವು ಬಹಳ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅವನ್ನೆಲ್ಲಾ ತಾವು ಗಿಲಿಟಿನ್ ಹಾಕಿಬಿಟ್ಟರೆ ನಮ್ಮ ಭವಿಷ್ಯ ಏನು ?

ಶ್ರೀ ಎಂ. ವೀರಪ್ಪಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ತೊಗರಿ ಬೆಳೆ ಬಗ್ಗೆ ರೈತರ ಇನ್ನಿತರ ಸಮಸ್ಯೆ ಬಗ್ಗೆ ಚರ್ಚೆ ಆಗುತ್ತದೆ. ಅದಕ್ಕೆ ಉತ್ತರ ಕೊಡುವಾಗ ವಿವರವಾಗಿ ತಿಳಿಸುತ್ತೇನೆ. ಸ್ಟಾಂಪ್ ಡ್ಯೂಟಿ ಬಗ್ಗೆ ನಾವು ಬಡ್ಜೆಟ್‌ನಲ್ಲಿ ಏನು ತಿಳಿಸಿದ್ದೇವೆ ಎಂದರೆ, ಸಾಮಾನ್ಯವಾಗಿ ಷೆಡ್ಯೂಲ್ ಡಿ ಕ್ಯಾಸ್ಟ್‌ನವರಿಗೆ 50 ಸಾವಿರ ರೂಪಾಯಿಯವರೆಗೆ, ಬಾಕಿ ಜನರಲ್ ಕ್ಯಾಟಗರಿಗೆ 25 ಸಾವಿರ ರೂಪಾಯಿಯವರೆಗೆ ಎಕ್ಸಂಪ್ಷನ್ ನಾವು ಘೋಷಣೆ ಮಾಡಿದ್ದೇವೆ. ಈಗ ಎಲ್ಲರಿಗೂ ಕೂಡ 50 ಸಾವಿರ ರೂಪಾಯಿಯವರೆಗೆ ವಿನಾಯಿತಿ ಕೊಡಲು ನಿರ್ಣಯ ಮಾಡಿದ್ದೇವೆ. ಆದ್ದರಿಂದ ಇಷ್ಟು ವಿಚಾರ ಹೇಳಲಿಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೂ ಎಲ್ಲಾ ಸದಸ್ಯರಿಗೂ, ಮತ್ತು ಎಲ್ಲರೂ ಎತ್ತಿದ ಪ್ರತ್ಯೇಕ ಪ್ರತ್ಯೇಕವಾದ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ ಎಂದು ಹೇಳಲಿಕ್ಕೆ ಇಚ್ಛೆಪಡುವುದಿಲ್ಲ, ಏಕೆಂದರೆ ಅದರ ಬಗ್ಗೆ ಪ್ರತ್ಯೇಕ ಡಿಮ್ಯಾಂಡ್ ಬರುತ್ತದೆ. ಆಗ ನಾವು ವಿವರವಾಗಿ ವಿಶ್ಲೇಷಣೆ ಮಾಡಬಹುದು. ತಮಗೆ ಗೊತ್ತಿದೆ ಅಧ್ಯಕ್ಷರೆ, ಜನರಲ್ ಡಿಬೇಟ್‌ನಲ್ಲಿ ನಾವು ಸಾಮಾನ್ಯವಾದಂಥ ರೂಪರೇಷಗಳ ಬಗ್ಗೆ ಹೇಳುತ್ತೇವೆಯೇ ಹೊರತು ಬೇರೆ ಎಲ್ಲಾ ಪ್ರಶ್ನೆಗೆ ಬಹುಶಃ ಉತ್ತರವನ್ನು ಕೊಡುತ್ತಾ ಇದ್ದರೆ ಸಂಜೆಯವರೆಗೆ ಆಗುತ್ತದೆ. ಸನ್ಮಾನ್ಯ ಅನಂತಕೃಷ್ಣರವರೂ ಕೂಡ ಬಹಳ ಪ್ರಾಮುಖ್ಯವಾದ ವಿಚಾರವನ್ನು ಎತ್ತಿದ್ದಾರೆ. ತಾವು ಎತ್ತಿದಂಥ ಪ್ರಶ್ನೆಗೆ ನನ್ನ ಹತ್ತಿರ ಉತ್ತರವೂ ಇದೆ. "There is no mention about socialism in the budget. If the Government goes ahead with the privatisation, it would only make the rich richer." ಎಂದು ತಾವು ಏನು ಹೇಳಿದ್ದೀರಿ, ಇದರ ಬಗ್ಗೆ ನಾವು we will always try to protect the interests of the workers. ಇದು ಏನು ಪ್ರೈವೇಟೈಸೇಷನ್ ಆದರೂ ಕೂಡ ನಾವು ವರ್ಕರ್ಸ್ ಅನ್ನು ಪ್ರೊಟೆಕ್ಟ್ ಮಾಡತಕ್ಕದಾಗಲೀ, ಎಲ್ಲೆಲ್ಲಿ ಪಬ್ಲಿಕ್ ಸೆಕ್ಟರ್‌ಗಳಿವೆ, ಆ ಪಬ್ಲಿಕ್ ಸೆಕ್ಟರ್‌ಗಳನ್ನು ನಾವು ಡಿಸ್ಟೆಬಿಲೈಸ್ ಮಾಡಲಿಕ್ಕೆ ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಅದನ್ನು ಕನ್ಸಾಲಿಡೇಟ್ ಮಾಡಲು ಪ್ರಯತ್ನ ಮಾಡುತ್ತೇವೆ. ಆದರೆ ಅನೇಕ ವರ್ಷಗಳ ಕಾಲ ಏನು ನಷ್ಟವನ್ನು ಅನುಭವಿಸುತ್ತಿರತಕ್ಕಂಥ ಕಾರ್ಖಾನೆಗಳನ್ನು ಉಳಿಸಿಕೊಂಡು ಜನರಿಗೆ ಭಾರವಾಗಿ ಉಪಯೋಗ ಮಾಡಿಕೊಂಡರೂ ಕೂಡ ಅದರಿಂದ ಯಾವ ಸಾರ್ಥಕತೆ ಕೂಡ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ "values among the officers are going down. The Chief Minister and other Ministers should take immediate steps to arrest this trend." ಕೂಡ ಹೇಳಿದ್ದೀರಿ. ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಡಿಸ್ಕಷನ್ ಮಾಡುವಾಗ ಇದರ ಬಗ್ಗೆ ಹೇಳುತ್ತೇನೆ. ತಾವು ಉತ್ತಮವಾದ ಸಜೆಷನ್ ಕೂಡ ಕೊಟ್ಟಿದ್ದೀರಿ. ನಾವು ಆಡಳಿತದಲ್ಲಿ ಹೊಸ ಸಂಸ್ಕೃತಿಯನ್ನು ಮತ್ತು ಆಡಳಿತದಲ್ಲಿ ಪ್ರಾಮಾಣಿಕತೆಯನ್ನು ತರಲು, ಶ್ರೀ ವಾಟಾಳ್ ನಾಗರಾಜ್‌ರವರು ಕೂಡ ಕೆಲವು ಸಜ್ಜನಿಕೆಯನ್ನು ಬೆಳಸಿಕೊಳ್ಳಲಿಕ್ಕೆ ಏನು ವಾತಾವರಣ ಕ್ರಿಯೇಟ್ ಮಾಡಬೇಕೋ ಮುಖ್ಯವಾಗಿ ಡಿ.ಪಿ.ಎ.ಆಕ್ಟ್ ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್ ಚರ್ಚೆ ಮಾಡುವಾಗ ಬರತಕ್ಕಂಥದ್ದು. "Interest of PSUs have been harmed by posting unenthusiastic officers" ಎಂದು ಪ್ರತ್ಯೇಕವಾಗಿ ಸನ್ಮಾನ್ಯ ಅನಂತಕೃಷ್ಣರವರು ಹೇಳಿದ್ದಾರೆ. ತಾವು ಆಯವ್ಯಯವನ್ನು ಪರಿಶೀಲನೆ ಮಾಡಿದರೆ ಇಂಥದ್ದು Executive Cadre to manage Public Sector ನಾವು ಸಿದ್ಧ ಮಾಡಬೇಕೆಂದು ಪ್ರಥಮವಾಗಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದನ್ನು ನಾನು ಆಯವ್ಯಯದಲ್ಲಿ ಸ್ಪಷ್ಟವಾಗಿ ಕಾಣಿಸಿದ್ದೇನೆ. ಏಕೆಂದರೆ ಎಲ್ಲರೂ ಎಲ್ಲಾ ಉದ್ಯೋಗಕ್ಕೆ

ಅರ್ಹರಾಗುವುದಿಲ್ಲ. ಅದೂ ಕೂಡ ಪಬ್ಲಿಕ್ ಸೆಕ್ಟರ್ ನಾವು ಪ್ರೊಫೆಷನಲ್ ಮ್ಯಾನೇಜಮೆಂಟ್ ಕ್ಯಾಡರ್‌ನ್ನು ಇಂಟ್ರಡ್ಯೂಸ್ ಮಾಡಲಿಕ್ಕೆ ಈಗಾಗಲೇ ಬಜೆಟ್ಟಿನಲ್ಲಿ ನಮೂದಿಸಿದ್ದೇವೆ. ಆದ್ದರಿಂದ ಅದು ತ್ವರಿತವಾಗಿ ಬರುತ್ತದೆ. ತಾವು "Major surgery is required in KEB, KPC, KSRTC. Practice of asking fresh bills in old works by PWD should be ......" ಎಂದು ಹೇಳಿದ್ದೀರಿ. ಅದಕ್ಕೆ ಬಹಳ ವಿವರವಾದ ಉತ್ತರವನ್ನು ನಾನು ತಯಾರು ಮಾಡಿದ್ದೇನೆ. ಅದರ ಉತ್ತರ ಪಿ.ಡಬ್ಲ್ಯೂ.ಡಿ ಬಂದಾಗ ಬರುತ್ತದೆ. ಮತ್ತು ಅದರ ಬಗ್ಗೆ ವಿಶೇಷವಾಗಿ ಸರಿಯಾದಂಥ ಕಾರ್ಯಕ್ರಮವನ್ನು ಹೇಳಿದ್ದೀರಿ. "If it is not possible to curtail the salaries of the Government employees within the limit of 25% of the total expenditure of the Govenrment as announced in the Budget speech, such a limit will lead to unemployment problems." ಎಂದು ಹೇಳಿದ್ದೀರಿ. ನಾವು ಈಗಾಗಲೇ ಇದರ ಬಗ್ಗೆ ಉತ್ತರವನ್ನು ಕೊಟ್ಟಿದ್ದೇವೆ. ಅದು ತಮಗೆ ಕೊಟ್ಟಂಥ ಉತ್ತರದಲ್ಲಿ ಈ ವರ್ಷ ನಾವು ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ನ್ನು, ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರನ್ನು 12 ಪರ್ಸೆಂಟ್‌ಗೆ ಆ ಏರಿಕೆಯನ್ನು ಸೀಮಿತಗೊಳಿಸಿದ್ದೇವೆ.

40% increase in the development outlay, 12% i.e., increase in the non development expenditure. ಮಾಡಿದ್ದೇವೆ ಮತ್ತು ಮುಂದೆ ಬರತಕ್ಕಂಥ ವರ್ಷಗಳಲ್ಲಿ plugging, freeze the non development expenditure at 26% ಅಂತ ಏನು ಹೇಳಿದ್ದೇವೆ ಅದನ್ನು ಈ ವರ್ಷ ತೋರಿಸಿಕೊಟ್ಟಿದ್ದೇವೆ. ಆಯವ್ಯಯದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿದ್ದೇವೆ. ಆದ್ದರಿಂದ ನಾನು ಹೆಸರು ಹೇಳದಿದ್ದರೂ ಕೂಡ ನಿಮಗೆ ಸಂಬಂಧಿಸಿದ ಮೂಲ ತಿರುಳು ಏನು ಇದೆ ವಿಶೇಷವಾಗಿ ವಿಚಾರಗಳನ್ನು ಇಲ್ಲಿ ಎತ್ತಿದ್ದೀರಿ, ತಾವು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದೀರಿ. ಅದಕ್ಕೆ ನಾವು ಸಂಪೂರ್ಣವಾಗಿ ಸ್ಪಂದಿಸುತ್ತೇವೆ. ಒಂದು ಹೊಸ ಆಡಳಿತ ಶಕೆಯನ್ನು ಕೊಡಲಿಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಖಂಡಿತ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿ ಇದಕ್ಕೆ ಬೆಂಬಲ ಕೊಟ್ಟಂಥ ತಮಗೆ ಮತ್ತು ಎಲ್ಲಾ ಸನ್ಮಾನ್ಯ ಸದಸ್ಯರುಗಳಿಗೆ, ವಿರೋಧಪಕ್ಷದ ನಾಯಕರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಕೆ. ಅನಂತ ಕೃಷ್ಣ:– ಡಂಕಲ್ ಡ್ರಾಫ್ಟ್ ವಿಷಯದಲ್ಲಿ ಏನಾದರೂ ಹೇಳಿದರೆ ಒಳ್ಳೆಯದು.

(ಗೊಂದಲ)

(8-10 ಜನ ಮಾನ್ಯ ಸದಸ್ಯರು ಒಟ್ಟಾಗಿ ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಪಿ.ಜಿ. ಆರ್. ಸಿಂಧ್ಯ:– ನನಗೆ ಸ್ಪಷ್ಟೀಕರಣ ಕೇಳಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಜೆ. ಸಿ. ಮಾಧುಸ್ವಾಮಿ:– ರೈತರ ಪಂಪುಸೆಟ್ಟುಗಳು ಸುಟ್ಟು ಹೋಗುತ್ತವೆ. ಅದರ ಬಗ್ಗೆ ನಾನು ಸ್ಪಷ್ಟೀಕರಣ ಕೇಳಬೇಕು.

(ಗೊಂದಲ)

ಅಧ್ಯಕ್ಷರು:– ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಎಲ್ಲರೂ ಎದ್ದು ನಿಂತು ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ತಾವು ಎಲ್ಲರೂ ಕಾಯಬೇಕು. ನಾನು ಒಬ್ಬೊಬ್ಬರನ್ನು ಕರೆಯುತ್ತೇನೆ. ಈಗ ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಶ್ರೀ ಆರ್. ವಿ. ದೇಶಪಾಂಡೆ:- ಮೇಜರ್ ಪಾರ್ಟ್ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಶ್ರೀ ಬಂಗಾರಪ್ಪನವರನ್ನು ಪೊಲಿಟಿಕಲಿ ಮೀಟ್ ಮಾಡಲಿಕ್ಕೆ ಹೊರಟಿದ್ದಾರೆ. That is the feeling.

ಏತಕ್ಕೆಂದರೆ ನಾವು ಯಾವುದು ಬೇಸಿಕ್ ಕೊಶ್ಚನ್ಸ್‌ಗಳನ್ನು ರೈಸ್ ಮಾಡಿದ್ದೆವು ಅವುಗಳಿಗೆ ನಿಮ್ಮ ಕಡೆಯಿಂದ ಉತ್ತರ ಬಂದಿಲ್ಲ. ಸ್ಟೇಟ್ ಪ್ಲ್ಯಾನ್ ಡಾಕ್ಯೂಮೆಂಟ್, ನ್ಯಾಶನಲ್ ಪಾಲಿಸಿ, ಮತ್ತು ನಿಮ್ಮ ಮ್ಯಾನಿಫೆಸ್ಟೋ ಬಗ್ಗೆ ಮಾತನಾಡಿದ್ದೇವೆ. It is contrary to each other. ಅಂತ ಹೇಳಿದ್ದೆ. ಕೆಲವು ಉದಾಹರಣೆಗಳನ್ನೂ ಕೊಟ್ಟಿದ್ದೆ. You have not tried to meet it. I don't want now to discuss much about that.

ಮುಖ್ಯವಾಗಿ ನಾನು ಡೆಫಿಸಿಟ್ ಬಗ್ಗೆ ಹೇಳಿದ್ದೆ. Budget deficit for the next year estimated is Rs. 96.16 crores and for 1992-93 it was Rs. 42.80 crores. Your deficit will go up ಎಂದು ನಾನು ಹೇಳಿದ್ದೆ. ಏತಕ್ಕೆಂದರೆ ಈ ವರ್ಷ ನಿಮ್ಮ ಟ್ಯಾಕ್ಸ್ ಕಲೆಕ್ಷನ್ ಟಾರ್ಗೆಟ್ ರೀಚ್ ಆಗಿರುವುದಿಲ್ಲ. ಹಾಗೆಯೇ ಮುಂದಿನ ವರ್ಷ ನೀವು ಟಾರ್ಗೆಟ್ಸ್ ಏನು ಫಿಕ್ಸ್ ಮಾಡಿದ್ದೀರಿ ಅವು ರಿಯಲಿಸ್ಟಿಕ್ ಅಲ್ಲ. ಆದ್ದರಿಂದ the deficit will go up ಅಂತ ಹೇಳಿದ್ದೆ. ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಅದೇ ಪ್ರಕಾರ ಇರಿಗೇಷನ್ ಪೊಟೆನ್ಷಿಯಲ್ ಬಗ್ಗೆ ತಾವು ಹೇಳಿದ್ದೀರಿ. ಈ ವರ್ಷ 1 ಲಕ್ಷ 27 ಸಾವಿರ ಹೆಕ್ಟೇರ್ ನಾವು ಇರಿಗೇಷನ್ ಮಾಡುತ್ತೇವೆ ಎಂದು ಹೇಳಿದ್ದೀರಿ. ನಿಮ್ಮ ಆವರೇಜ್ ಕಳೆದ ಮೂರೂವರೆ ವರ್ಷಗಳಿಂದ ಅಂದರೆ ನಿಮ್ಮ ಅಧಿಕಾರ ಬಂದ ನಂತರ ಒಂದೂವರೆ ಲಕ್ಷ ಹೆಕ್ಟೇರ್ ಹೋಗಿಲ್ಲ. Except that you have said that 'I have provided money'. What is the infrastructure you are developing? ಅದರ ಬಗ್ಗೆ ತಾವು ಏನೂ ಹೇಳಲಿಲ್ಲ. ಇನ್ನು ಕೆ.ಇ.ಬಿ. ಟ್ರಾನ್ಸ್‌ಫಾರ್ಮರ್ ಬಗ್ಗೆ, ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿರುವ ಬಗ್ಗೆ ಹೇಳಿದಿರಿ. Those figures are right. ರೈತರ ಪಂಪುಸೆಟ್ಟುಗಳು ಎಷ್ಟು ಸುಟ್ಟು ಹೋಗಿವೆ ಎಂಬುದು ನಿಮಗೆ ಗೊತ್ತಾಗಲಿಲ್ಲ. ಆದರೆ ಕೆ.ಇ.ಬಿ.ಗೆ ಇನ್‌ಫ್ರಾಸ್ಟ್ರಕ್ಚರ್ ಸ್ಟ್ರೆಂಗ್ತನ್ ಮಾಡಲಿಕ್ಕೆ ಟ್ರಾನ್ಸ್‌ಫಾರ್ಮರ್ಸ್ ಸ್ಟ್ರೆಂಗ್ತನ್ ಮಾಡಲಿಕ್ಕೆ ಈ ವರ್ಷ ಎಷ್ಟು ಹೆಚ್ಚು ಹಣ ಕೊಡುತ್ತಿದ್ದೀರಿ ಎಂಬುದನ್ನು ಹೇಳಬೇಕು. ಒಂದು ಕಡೆ ಪಂಪುಸೆಟ್ಟುಗಳು ಸುಟ್ಟು ಹೋಗುತ್ತಿವೆ. ಮತ್ತೊಂದು ಕಡೆ ಈ ಪಂಪುಸೆಟ್ಟುಗಳ ಬಗ್ಗೆ ಟಾರ್ಗೆಟ್ ಫಿಕ್ಸ್ ಮಾಡುತ್ತೀರಿ. ಈ ಪ್ರಾಬ್ಲಮ್ ಸಾಲ್ವ್ ಆಗಬೇಕು. ಕೆ.ಇ.ಬಿ.ಗೆ ಎಷ್ಟು ಹಣ ಈ ವರ್ಷ ಹೆಚ್ಚು ಕೊಟ್ಟಿದ್ದೀರಿ. ಈ ಟ್ರಾನ್ಸ್‌ಮಿಷನ್ ಇಂಪ್ರೂವ್ ಮಾಡಲಿಕ್ಕೆ, ಟ್ರಾನ್ಸ್‌ಫಾರ್ಮರ್ ಸುಡದಂತೆ ಮಾಡಲು ಹಾಗೂ ಪಂಪು ಸೆಟ್ಟುಗಳು ಸುಡದಂತೆ ಮಾಡಲು ಇನ್‌ಫ್ರಾಸ್ಟ್ರಕ್ಚರ್‌ಗೆ ಎಷ್ಟು ಕೊಡುತ್ತೀರಿ ಎಂಬುದನ್ನು ತಿಳಿಸಬೇಕು.

ಮಾನ್ಯ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾದ ಡಾ. ಮನ್‌ಮೋಹನ್ ಸಿಂಗ್‌ರವರು 2500 ಕೋಟಿ ರೂ. ಎಕ್ಸೈಸ್ ಡ್ಯೂಟಿ ರಿಡಕ್ಷನ್ ಮಾಡಿದರು. ನಿಮ್ಮ ಟಾರ್ಗೆಟ್ಸ್ ಕೇಂದ್ರ ಸರ್ಕಾರದಿಂದ 1350 ಕೋಟಿ, ಇನಕಂ-ಟ್ಯಾಕ್ಸ್ ಮತ್ತು ಎಕ್ಸೈಸ್‌ನಿಂದ, ಬರುತ್ತಿದೆ ಎಂದು ಹೇಳಿದ್ದೀರಿ. ಈ ರಿಡಕ್ಷನ್‌ದಿಂದ ನಿಮಗೆ ಹೆಚ್ಚು ಬರ್ಡನ್ ಆಗುತ್ತದೆ. ಅದರ ಬಗ್ಗೆ ತಾವು ಉತ್ತರ ಕೊಡಲಿಲ್ಲ.

1.05 ಪಿ. ಎಂ.

That also you have not explained. What will be the effect of the reduction given by the Finance Minister in excise duties? What are its implications on the State exchequer?

ತಾವೇನು ಪ್ರೊಜೆಕ್ಷನ್ ತೋರಿಸಿದ್ದೀರಿ, ಅದನ್ನೂ ಹೇಳಿಲ್ಲ. ಈ ಮೈನರ್ ಇರಿಗೇಷನ್ ಬಗ್ಗೆ ಕೇಳಿದ್ದೆ.

ತಾವು ಇರಿಗೇಷನ್‌ಗೆ ಹಣ ಕೊಟ್ಟಿದ್ದೀರಿ, ಸಂತೋಷ. 850 ಕೋಟಿ, ಸಂತೋಷ ಕೊಡಿ. ಇಂಪ್ಲಿಮೆಂಟ್ ಮಾಡಿ, ಹಣ ಬಿಡುಗಡೆ ಮಾಡಿ. ಆದರೆ ಮೈನರ್ ಇರಿಗೇಷನ್‌ಗೆ ತಾವು ಹಣ ಎಷ್ಟು ಹೆಚ್ಚು ಕೊಟ್ಟಿರಿ? ಏನೂ ಕೊಟ್ಟಿಲ್ಲ. ರಾಜ್ಯದ ಬಹಳಷ್ಟು ಜಿಲ್ಲೆಯಲ್ಲಿ ಕೆಲವೊಂದು ಮೈನರ್ ಇರಿಗೇಷನ್ ಇರಬಹುದು, ಕೋಲಾರ ಇರಬಹುದು, ನಾರ್ತ್ ಕೆನರಾ ಇರಬಹುದು, ಕೆಲವು ಪಾರ್ಟ್ ಚಿಕ್ಕಮಗಳೂರು ಇರಬಹುದು, ಧಾರವಾಡ ಜಿಲ್ಲೆ ಪಾರ್ಟ್ ಇರಬಹುದು, ಮೈನರ್ ಇರಿಗೇಷನ್‌ನಿಂದ ಇಮ್ಮಿಡಿಯೇಟ್ ಆಗಿ ರಿಲೀಫ್ ನಮಗೆ ಬರುತ್ತದೆ. ಇದರ ಬಗ್ಗೆ ಹಣವನ್ನು ಹೆಚ್ಚು ಕೊಟ್ಟಿಲ್ಲ. ಅದರ ಬಗ್ಗೆ ಏನು ಹೇಳುತ್ತೀರಿ. ಕೊನೆಯದಾಗಿ ಕೆಲವು ಟ್ಯಾಕ್ಸ್ ಬಿಟ್ಟುಕೊಟ್ಟರೆ ಬಹಳ ಸಂತೋಷ. Wheat products, aluminium;

ನಾವು ಡಿಮ್ಯಾಂಡ್ ಮಾಡಿದೆವು. ಆದರೆ ಮುಖ್ಯಮಂತ್ರಿಗಳೇ, ಇರಿಗೇಷನ್ ಪೈಪ್ಸ್ ಬಗ್ಗೆ ಹೇಳಿದ್ದೆ. ರೈತರು ಉಪಯೋಗ ಮಾಡುವ ಇರಿಗೇಷನ್ ಪಿವಿಸಿ ಪೈಪ್ಸ್ ನಿಮ್ಮ ಬಜೆಟ್‌ನಲ್ಲಿ ರೈತರ ಬಗ್ಗೆ ಏನೇನೂ ಇಲ್ಲ. ಐದು ರೂಪಾಯಿ ಇಲ್ಲ. ಹಾಗಾಗಿ ಇರಿಗೇಷನ್ ಪೈಪ್ಸ್ ಮೇಲೆ ಏನು ಟ್ಯಾಕ್ಸ್ ಹಾಕಿದ್ದೀರಿ, ಅದನ್ನು ವಿತ್‌ಡ್ರಾ ಮಾಡುವುದಕ್ಕೆ ತಮಗೆ ಹೇಳಿದ್ದೆ. ಅದರ ಬಗ್ಗೆ ಏನೂ ನಿರ್ಣಯವನ್ನು ತೆಗೆದುಕೊಂಡಿಲ್ಲ. ಇರಿಗೇಷನ್ ಪೈಪ್ಸ್ ಬಗ್ಗೆ ಏನು ಟ್ಯಾಕ್ಸ್ ಹಾಕಿದ್ದೀರಿ, ಅದನ್ನು ವಿತ್‌ಡ್ರಾ ಮಾಡಬೇಕು ಎಂದು ನಿಮ್ಮಲ್ಲಿ ಒತ್ತಾಯ ಮಾಡುತ್ತೇನೆ. ರೈತರ ಹಿತದೃಷ್ಟಿಯಿಂದ ಅದನ್ನು ವಿತ್‌ಡ್ರಾ ಮಾಡಬೇಕು. ಎರಡನೆಯದು ಮತ್ತೊಂದು ಪಾಯಿಂಟ್ ರೈಸ್ ಮಾಡಿದೆವು. ಅಡಕೆ–ಅದಕ್ಕೆ ಟ್ಯಾಕ್ಸ್ ಹೆಚ್ಚಾಗಿ ಒಂದು ಕ್ವಿಂಟಲ್‌ಗೆ 600–700 ರೂಪಾಯಿ ಟ್ಯಾಕ್ಸ್ ಬರುತ್ತದೆ. ಟ್ಯಾಕ್ಸ್ ಇವೇಷನ್ ಆಗಿ ಎಲ್ಲಾ ಅಡಕೆ ಹೋಗುತ್ತಿದೆ. ಅದರಿಂದ ಕ್ಯಾಂಪ್‌ಕೊ ಅಂಥ ಸಂಸ್ಥೆ ಕೂಡ ಸಫರ್ ಆಗುತ್ತಿದೆ. ಅಡಕೆ ಟ್ಯಾಕ್ಸ್ ಮಾರಾಟದಲ್ಲಿ ಮೂರು ಪರ್ಸೆಂಟ್ ಇದೆ. ಹಾಗಾಗಿ ಅದನ್ನು ಕಡಿಮೆ ಮಾಡಿರಿ; to bring it on par and to see that tax evasion is be avoided.

ಅದರ ಬಗ್ಗೆ ತಾವು ಹೇಳಿಲ್ಲ. ಮತ್ತೊಂದು ವಿಚಾರ ನಾವು ಪ್ರಸ್ತಾಪ ಮಾಡಿದ್ದೆವು.

ತಮಗೆ ಪತ್ರವನ್ನು ಕೂಡ ಬರೆದಿದ್ದೆ. ಫೆನ್ನಿ ಬಗ್ಗೆ ಹೇಳಿಲ್ಲ. 35 ರೂಪಾಯಿ per litre on par with IMFL ಅಂತ ಮಾಡಿದ್ದೀರಿ.

ಅದನ್ನು ನೀವು ಕಡಿಮೆ ಮಾಡಿ ಎಂದು ನಾನು ಹೇಳಿದ್ದೆ, ಏಕೆಂದರೆ ನಮ್ಮ ನಾರ್ತ್ ಕೆನರಾ ಹಾಗೂ ಸೌತ್ ಕೆನರಾದಲ್ಲಿ ಈ ಯೂನಿಟ್ಸ್‌ಗಳು ಇವೆ. ಇದರ ಮೇಲೆ ಬಡ ಜನರು ಡಿಪೆಂಡ್ ಆಗಿದ್ದಾರೆ. ಈ ಬಡ ಜನರು ಸಫರ್ ಆಗುತ್ತಾರೆ. ಗೋವಾದಲ್ಲಿ ಸಾಕಷ್ಟು ಸ್ಮಗಲ್ ಆಗುತ್ತಿದೆ. ಈ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನಾನು ಬಹಳ ನೋವಿನಿಂದ ಈ ಕ್ಲಾರಿಫಿಕೇಷನನ್ನು ಕೇಳುತ್ತಿದ್ದೇನೆ. ಏಕೆಂದರೆ ಅನೇಕ ವಿಚಾರಗಳನ್ನು ನಾನು ಈ ವರ್ಷದಲ್ಲಿ ಮಾತನಾಡಬೇಕು ಎನ್ನುವ ಆಸೆ ಇತ್ತು. ನನಗೆ ತುಂಬಾ ನೋವು, ನಿರಾಶೆ ಎರಡೂ ಸಹಿತ ಆಗಿದೆ. ಈ ಸದನದ ಕಾರ್ಯಕಲಾಪಗಳು ನಡೆಯುತ್ತಿರುವುದರ ಬಗ್ಗೆ ಇಲ್ಲಿ ಅನೇಕ ವಿಚಾರಗಳನ್ನು ಹೇಳಿ ನಾವು ಪ್ರಶ್ನೆ ಹಾಕಬೇಕು ಎಂದರೆ ಬರೀ ಇಲ್ಲಿ ಒಂದು ರೀತಿಯಲ್ಲಿ ಕೆಲವರದೇ ಮಾನೊಪಲಿ ಆಗುವ ಹಾಗೆ ಕಾಣುತ್ತಿದೆ. ತಾವು ಇದರ ಬಗ್ಗೆ ಗಮನ ಕೊಡುತ್ತೀರಿ ಎಂದು ಹೇಳಿ ನಿಮ್ಮಲ್ಲಿ ಸಂಪೂರ್ಣ ವಿಶ್ವಾಸ ಇರುವುದರಿಂದಾಗಿ ನನ್ನ ಒಂದು ದುಃಖವನ್ನು, ನೋವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಇದು ಬಹಳ ದುರ್ದೈವ. ನಾನು ಶಾಸಕನಾಗಿದ್ದುಕೊಂಡು 4 ವರ್ಷಗಳಿಂದ ಬಜೆಟ್ ಮೇಲೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಹತ್ತು ನಿಮಿಷ ಸಮಯ ಸಿಗುವುದಿಲ್ಲ ಎಂದು ಹೇಳಿದ ಮೇಲೆ ನಾವು ಇಲ್ಲಿ ಏನು ಶಾಸಕರಾಗಿ ಬಂದು

ಮಾಡುವುದು ನನಗಂತೂ ಅರ್ಥವಾಗುವುದಿಲ್ಲ. ಬಹಳ ನೋವು ಇದೆ. ನಾನು ತೀವ್ರವಾದ ಪ್ರತಿಭಟನೆಯನ್ನು ಸಹಿತ ಇದರ ಬಗ್ಗೆ ವ್ಯಕ್ತಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದು ಏನೆಂದರೆ ತಮಗೆ ನಾನು ಕೊಡತಕ್ಕಂಥ ಅಂಕಿಅಂಶಗಳನ್ನು ತಪ್ಪಿದ್ದರೆ ನಾನು ಅದನ್ನು ತಿದ್ದಿಕೊಳ್ಳುವುದಕ್ಕೆ ತಯಾರಿದ್ದೇನೆ. ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾವು 9 ಜನ ಶಾಸಕರುಗಳು ಸಹಿ ಮಾಡಿ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಸಭೆಯನ್ನು ಕರೆದು ಚರ್ಚೆ ಮಾಡಿದ್ದೇವೆ ಮೂರು ದಿನಗಳ ಹಿಂದೆ. ನಮಗೆ ಯೋಜನೇತರ ಬಾಬ್ತು 461 ಲಕ್ಷ, ಯೋಜನಾ ಬಾಬ್ತು 378 ಲಕ್ಷ. ಕೇಂದ್ರ ಪರಿಷ್ಕೃತ ಮೊತ್ತ 297 ಲಕ್ಷ ಒಟ್ಟು 11.64 ಕೋಟಿ ದುಡ್ಡು ನಮಗೆ ಬರಬೇಕು. ನಾವೆಲ್ಲ ನಿಮಗೆ ಮೆಮೊರಾಂಡಂಅನ್ನು ಮಾಡಿದ್ದೇವೆ. ಆ ಮೆಮೊರಾಂಡಂ ಅನ್ನು ಅಧ್ಯಕ್ಷರ ಮೂಲಕ ತಮಗೆ ಕಳುಹಿಸಿಕೊಡುತ್ತಿದ್ದೇನೆ. ದಯವಿಟ್ಟು ತಾವು ಈ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವೇ ? ಬಿಡುಗಡೆ ಮಾಡಬೇಕು ಎಂದು ಹೇಳಿ ಇದಕ್ಕೆ ಒಂದು ಖಚಿತವಾದ ಉತ್ತರ ನನಗೆ ಬೇಕು.

ಎರಡನೆಯದಾಗಿ ನಮ್ಮಲ್ಲಿ ಅನ್‌ಸ್ಪೆಂಟ್ ಏಳೂವರೆ ಕೋಟಿ ರೂಪಾಯಿ ಇದೆ. ಅದನ್ನು ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ರಸ್ತೆಗಳಿಗೆ ಎಂದು ಹೇಳುತ್ತಿದ್ದೇನೆ. ಅದಕ್ಕೆ ಒಂದು ಉತ್ತರ ಕೊಡಿ. ಇಲ್ಲ ಎಂದರೆ ನಾನೇನು ಇದಕ್ಕೆ ಬೇಸರ ಮಾಡಿಕೊಳ್ಳುವುದಿಲ್ಲ. ಇಲ್ಲ ಎಂದರೆ ಇಲ್ಲ. ಅವಕಾಶ ಕೊಡುತ್ತೀರಿ ಅಥವಾ ಕೊಡುವುದಿಲ್ಲ ಎರಡರಲ್ಲಿ ಒಂದು ಉತ್ತರ ಕೊಡಿ. ಮೂರನೆಯ ವಿಚಾರ ಉಪಾಧ್ಯಾಯರುಗಳ ನೇಮಕಾತಿ. ಈ ವಿಚಾರದಲ್ಲಿ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಸತತವಾಗಿ ಹೇಳಿಕೊಂಡು ಬರುತ್ತಿದ್ದೇನೆ. 300 ಸ್ಕೂಲ್ ಇದೆ. 350 ವೇಕೆನ್ಸಿ ಇದೆ. ಹೀಗಾದರೆ ಹಳ್ಳಿಗಳಿಗೆ ಹೋಗುವುದು ಹೇಗೆ ? ದಯಮಾಡಿ ಹೇಳಿ. ನೀವು ಈಗ ಸಾಕ್ಷರತಾ ಆಂದೋಳನ ಎಂದು ಹೇಳುತ್ತೀರಿ. ಹಳ್ಳಿಗಳಲ್ಲಿ ಹೋದರೆ ಮೇಷ್ಟರುಗಳೇ ಇಲ್ಲ, ನಾವು ಹೇಗೆ ಅಕ್ಷರ ಕಲಿಯುವುದು ಎಂದು ಹೇಳುತ್ತಾರೆ. ಅದಕ್ಕೂ ಒಂದು ಮೆಮೊರ್‍ಯಾಂಡಮ್ ಮಾಡಿದ್ದೇವೆ. ದಯಮಾಡಿ ರಿಕ್ರೂಟ್‌ಮೆಂಟಿಗೆ ಅವಕಾಶ ಮಾಡಿಕೊಡುತ್ತೀರಾ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಸುಮಾರು 60-70 ಜನ ಶಾಸಕರು ನಾವು ಈ ಗಡಿ ಬಗ್ಗೆ ಅವರು ಏನು ಹಣ ನಿಯೋಜನೆ ಮಾಡಿದ್ದೀರಿ ಅದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಏಕೆಂದರೆ ಇದು ಬಹಳ ಒಳ್ಳೆಯ ಕೆಲಸ ಆಗುತ್ತದೆ. ಇದು ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಪ್ರಾರಂಭ ಆಗಿದ್ದು ನಿಜವಾಗಿ ಸಹಿತ ಬಹಳ ಒಳ್ಳೆಯ ಕೆಲಸ ಆಗುತ್ತದೆ. ಕುಡಿಯುವ ನೀರಿನ ಸಮಸ್ಯೆ ಅನೇಕ ಕಡೆಗಳಲ್ಲಿ ಪರಿಹಾರ ಆಗಿದೆ. ರಸ್ತೆಗಳಿಗೆ ಅನುಕೂಲ ಆಗಿದೆ. ಆದ್ದರಿಂದ ತಾವು 5–10 ಕೋಟಿ ಆದರೂ ರಸ್ತೆಗೆ ಹೆಚ್ಚು ಹಣ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೇ ಬಹುಶಃ ಈ ಬಜೆಟ್ ಯಾರೋ ಸಿಟಿಯವರು ಮಾಡಿಕೊಟ್ಟಿರುವಂತಹ ಬಜೆಟ್ ಎಂದು ಕಾಣುತ್ತದೆ. ಒಳ ಉಡುಪು, ಗೊಂಬೆ, ಪಟಾಕಿ, ಪೋರ್ಸಲಿನ್‌ಗಳಿಗೆಲ್ಲಾ ರಿಡಕ್ಷನ್ ಆಗುತ್ತದೆ ಇಲ್ಲಿ. ನಾವು ಹಳ್ಳಿಯಿಂದ ಬರತಕ್ಕ ರೈತರಿಗೆ, ಅವರು ಓಟ್ ಹಾಕಿ ಕಳುಹಿಸಿದವರಿಗೆ, ಪಿವಿಸಿ ಪೈಪ್ ಮೇಲೆ, ಇನ್‌ಸ್ಪಲೇಷನ್ ಮೇಲೆ, ಅವರು ಉಪಯೋಗಿಸುವ ಬಾರ್ಬಡ್ ವೈರ್ ಮೇಲೆ ಟ್ಯಾಕ್ಸ್ ಬೀಳುತ್ತದೆ. ತಾವು ಹೇಳುತ್ತೀರಿ, ಕುಳಿತುಕೊಳ್ಳಿ ಸಮಾಧಾನದಿಂದ ವರ್ತಿಸಿ ಎಂದು. ಐದು ದಿವಸದಿಂದ ನಾನು ಇಲ್ಲಿ ಕುಳಿತಿದ್ದೇನೆ. ಎರಡು ಮಾತು ಆಡಲಿಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದೇನೆ. ಸರ್ಕಾರ ಯಾರಿಗಾಗಿ ನಡೆಯುತ್ತಿದೆ ಎಂಬುದರ ಬಗ್ಗೆ ಅವರು ಮೊದಲು ಉತ್ತರ ಕೊಡಬೇಕು. ಇಲ್ಲಿ ಕೊಟ್ಟಿರುವ ರಿಡಕ್ಷನ್ ಅಪ್ಪು ಅರ್ಬನ್ ಕ್ಲಾಸ್ ಮತ್ತು ಅಬೋವ್ ಮಿಡಲ್ ಕ್ಲಾಸ್‌ಗೆ ಹೆಲ್ಪ್ ಮಾಡುವಂಥಾದ್ದಾಗಿದೆ. ನಾವು ಬೇಡುತ್ತಿದ್ದೇವೆ ಸ್ವಾಮಿ. ಬೋರ್‌ವೆಲ್‌ಗೆ ನಾವು ಜೀಐ ಪೈಪ್ ಇಡಬೇಕು ಎಂದರೆ 10-12 ಲೆಂಗ್ತ್ ಪೈಪ್ ಇರಬೇಕು ಎಂದರೆ

ಒಂದೊಂದು ಲೆಂಗ್ತ್ ಪೈಪಿಗೆ ಎಂಟು ನೂರು, ಒಂಭೈನೂರು ರೂಪಾಯಿ ತೆರಬೇಕಾಗಿದೆ. ಫರ್ದರ್ ಟ್ಯಾಕ್ಸ್ ಅದಕ್ಕೆ. ಪಿವಿಸಿ ಪೈಪ್ ಮೇಲೆ ಫರ್ದರ್ ಟ್ಯಾಕ್ಸ್ ಬಾರ್ಬ್‌ಡ್ ವೈರ್ 22 ಸಾವಿರ ಟನ್‌ಗೆ ಇದೆ. ಇದರ ಮೇಲೆ ಇಪತ್ತು ಟ್ಯಾಕ್ಸ್ ಹಾಕಿಕೊಂಡು ಹೋಗುವುದಕ್ಕಾಗಿ ಈ ಸರ್ಕಾರ ನಡೆಯುತ್ತಿದೆಯೇ ? ದಯವಿಟ್ಟು ನಾನು ಕೇಳುತ್ತಿದ್ದೇನೆ. ರಿಲ್ಯಾಕ್ಸೇಷನ್ ಏನಾದರೂ ಘೋಷಣೆ ಮಾಡದೇ ಹೋದರೆ ಅನಿವಾರ್ಯವಾಗಿ ನಾವು ಧರಣಿ ಮಾಡುತ್ತೇವೆ.

ಶ್ರೀ ಎಂ. ನಾರಾಯಣ ಸ್ವಾಮಿ:– ಮಾನ್ಯ ಮುಖ್ಯಮಂತ್ರಿಗಳು ರೂರಲ್ ಏರಿಯಾದವರ ಮೇಲೆ ಟ್ಯಾಕ್ಸ್ ಹಾಕಿದ್ದಾರೆ. ಅವರು ಉಪಯೋಗಿಸುವ ಪೈಪ್ ಇರಬಹುದು ಪಿವಿಸಿ ಪೈಪ್ ಇರಬಹುದು ಅಥವಾ ಬೇರೆ ಬೇರೆ ಕೇಬಲ್ ಇರಬಹುದು. ಈಗ ಗೊಂಬೆ, ಪಟಾಕಿ ಇದಕ್ಕೆ ಏನು ಎಕ್ಸಂಪ್‌ಷನ್ ಕೊಟ್ಟಿದ್ದೀರಿ ಅದನ್ನು ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ನಾವು ಪ್ರಶ್ನೆ ಮಾಡುವುದಿಲ್ಲ. ಎಕ್ಸಂಪ್ಷನ್ ಕೊಟ್ಟುಕೊಳ್ಳಲಿ, ಟ್ಯಾಕ್ಸ್ ಹಾಕಿಕೊಳ್ಳಲಿ. ಆದರೆ ರೂರಲ್ ಏರಿಯಾ ಬಗ್ಗೆ ನಮಗೆ ಗೊತ್ತಿದೆ. ಒಂದು ಕಡೆ ವಿದ್ಯುತ್ ಇಲ್ಲ. ಇನ್ನೊಂದು ಕಡೆ ಟ್ರಾನ್ಸ್‌ಫಾರ್ಮರ್‌ಗಳು ಇಲ್ಲ. ಒಂದು ಕಡೆ ನೀರು ಇಲ್ಲ. ನೀರು ಇದ್ದರೂ ಕೂಡ ಸವಲತ್ತು ಇಲ್ಲ. ಇದರ ಮೇಲೆ ಬಂಡವಾಳ ಹಾಕತಕ್ಕ ಶಕ್ತಿ ಇಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಪೈಪ್ಸ್ ಮೇಲೆ ಟ್ಯಾಕ್ಸ್ ಹಾಕಿದರೆ ಬಹಳ ಕಷ್ಟ ಆಗುತ್ತದೆ. ಆದ್ದರಿಂದ ಕಳಕಳಿಯ ಮನವಿ ಮಾಡುತ್ತೇನೆ. ದಯಮಾಡಿ ಏನು ರೈತರ ಪೈಪ್‌ಗಳ ಮೇಲೆ ಟ್ಯಾಕ್ಸ್ ಹಾಕಿದ್ದೀರಿ, ದಯಮಾಡಿ ಇದನ್ನು ವಿತ್‌ಡ್ರಾ ಮಾಡಬೇಕು. ರೈತರ ಬಗ್ಗೆ ಏನೂ ರಿಲ್ಯಾಕ್ಸೇಷನ್ ಕೊಟ್ಟಿಲ್ಲ. ಇಲ್ಲದಿದ್ದರೆ ಧರಣಿ ಕುಳಿತುಕೊಳ್ಳುವುದಕ್ಕೆ ತಯಾರು ಇದ್ದೇನೆ. ಇದನ್ನು ದಯಮಾಡಿ ಕೊಡತಕ್ಕ ಒಂದು ವ್ಯವಸ್ಥೆ ಆಗಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೇ, ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ದರ ರಾಜ್ಯಾದ್ಯಂತ ಒಂದೇ ಇರಬೇಕು ಎಂದು ನಾನು ಒತ್ತಾಯ ಮಾಡಿದ್ದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಉತ್ತರ ಕೊಟ್ಟಿಲ್ಲ. ಆಮೇಲೆ ಪಾನ ಪ್ರತಿಬಂಧಕದ ಬಗ್ಗೆ ಮಾನ್ಯ ಹಿರಿಯ ಸಚಿವರಾದ ರಂಗನಾಥ ಅವರು, ಹಾರ್ನಹಳ್ಳಿ ರಾಮಸ್ವಾಮಿಯವರು, ನಮ್ಮ ವಿರೋಧಪಕ್ಷದ ನಾಯಕರಾದ ಮಾನ್ಯ ದೇಶಪಾಂಡೆ ಅವರು, ಸಿಂಧ್ಯರವರು, ಡಾ. ಅಳ್ವ ಅವರು, ಜಾಲಪ್ಪನವರು, ಪ್ರೊ. ನಂಜುಂಡ ಸ್ವಾಮಿ ಅವರು ನಮ್ಮ ಅನಂತಕೃಷ್ಣ ಅವರು ಎಲ್ಲರೂ ತಮ್ಮ ಭಾಷಣದಲ್ಲಿ ಒತ್ತಾಯ ಮಾಡಿದ್ದಾರೆ, ಪಾನ ಪ್ರತಿಬಂಧಕದ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ದುಶ್ಚಟದಿಂದ ದೂರ ಇದ್ದಾರೆ. ಅವರಿಂದ ಇದನ್ನು ನಾವು ಅಪೇಕ್ಷೆ ಮಾಡಿದರೆ ತಪ್ಪಿಲ್ಲ ಎಂದು ನನ್ನ ಭಾವನೆ ಇದೆ. ಆದ್ದರಿಂದ ಇದರ ಬಗ್ಗೆ ಅವರು ಹಂತ ಹಂತವಾಗಿ ಕೆಲವು ಜಿಲ್ಲೆಗಳಲ್ಲಿ ಈ ವರ್ಷ ಕೆಲವು ಜಿಲ್ಲೆಗಳಲ್ಲಿ ಮುಂದಿನ ವರ್ಷ ಪಾನ ಪ್ರತಿಬಂಧಕವನ್ನು ಜಾರಿಗೆ ತರಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್:– ಪೈಪ್ ವಿಚಾರದಲ್ಲಿ ಮಾನ್ಯ ಮಾಧು ಸ್ವಾಮಿಯವರು ಏನು ಹೇಳಿದ್ದಾರೆ, ಅದನ್ನು ಒಪ್ಪುತ್ತೇನೆ. ಟ್ಯಾಕ್ಸ್ ಅನ್ನು ತಾವು ವಾಪಸ್ ತೆಗೆದುಕೊಳ್ಳಬೇಕು. ಈ ಗದೆ ಯೋಜನೆಯಲ್ಲಿ ಪ್ರತಿ ವರ್ಷ 25 ಲಕ್ಷ ರೂಪಾಯಿ ಕೊಡಬೇಕು ಒಂದೊಂದು ತಾಲ್ಲೂಕಿಗೆ ಎಂದು ನಾರ್ಮ್ಸ್ ಮಾಡಿದ್ದೀರಿ. ಒಂದೂವರೆ ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಬೇಕು ಎಂದು ಹೇಳಿದ್ದೇವೆ. ಈಗ ಇನ್ನೂ ಒಂದೂವರೆ ವರ್ಷಗಳಾದರೂ ಮೊದಲನೆ ವರ್ಷದಲ್ಲಿ ಬರೇ ಆರು ಲಕ್ಷ, ಏಳು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಮೊದಲು ಪ್ರಾರಂಭದಲ್ಲಿ ಪ್ರತಿ ವರ್ಷ 25 ಲಕ್ಷ ರೂಪಾಯಿ ಕೊಡುತ್ತಿದ್ದೀರಿ. ಈ ಹಣ ಸಾಲದು. ಇಲ್ಲಿ ಕೂಡ ಒಂದೊಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆಶ್ರಯ ಯೋಜನೆಯ ಬಗ್ಗೆ ಆಮೇಲೆ ಮಾತನಾಡಿ

ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ಯೋಜನೆಗೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯವರು ಕೊಟ್ಟಿರುವಂತಹ ಅಡ್ವಾನ್ಸ್ ಹಣದಲ್ಲಿ ನಮ್ಮ ತಾಲ್ಲೂಕಿನಲ್ಲಿ 100 ಮನೆಗಳನ್ನು ಅವರು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಈಗ ಏನು ಬಿ.ಡಿ.ಓ.ಗಳು ಡಿ.ಸಿ.ಗಳಿಗೆ ನಾಲ್ಕು ನೂರು ಮನೆಗಳನ್ನು ಕೊಟ್ಟಿದ್ದಾರೆ. ಅದನ್ನು ಯಾವ ತರಹ ಪ್ಲಾನ್‌ನಲ್ಲಿ ಕಟ್ಟಬೇಕೆಂಬ ಬಗ್ಗೆ ಸೂಚನೆ ನೀಡಿಲ್ಲ. ಹೌಸಿಂಗ್ ಬೋರ್ಡ್‌ನದ್ದೆ ಒಂದು ಸ್ಕೀಮ್ ಆಗುತ್ತದೆ. ಹೌಸಿಂಗ್ ಬೋರ್ಡ್‌ನವರು ಕಟ್ಟುವಂಥ ಮನೆಗಳು ಚೆನ್ನಾಗಿರುತ್ತವೆ. ಇಲ್ಲಿ ಏನಾಗುತ್ತದೆ ಅಂದರೆ ಹೆಂಚನ್ನು ಹಾಕಿ ಕಾಡು ಮರಗಳನ್ನು ಸಪ್ಲೈ ಮಾಡುವುದಕ್ಕೆ ಕೊಟ್ಟಾಗ, ಇವೆಲ್ಲಾ ಬಿದ್ದು ಹೋಗುತ್ತದೆ. ಆ ಮನೆ ಬಿದ್ದು ಹೋಗುವುದಿಲ್ಲ.

ಇದರ ಬಗ್ಗೆ ರೈತರು ಕಾರಣ ಕೇಳುತ್ತಾರೆ. ಮತ್ತು ಆಶ್ರಯ ಯೋಜನೆಯಡಿ ಹಣ ಬಿಡುಗಡೆಯಾಗಿಲ್ಲ. ಇದರ ಬಗ್ಗೆ ಈಗಾಗಲೇ ಪ್ರಸ್ತಾವನೆ ಕಳುಹಿಸಲಾಗಿದ್ದು, ಜಿಲ್ಲಾಧಿಕಾರಿಗಳನ್ನು ಸಹ ಕೇಳಿದ್ದೇವೆ. ಮಾನ್ಯ ವಸತಿ ಖಾತೆ ಸಚಿವರು ಕ್ಷೇತ್ರಕ್ಕೆ ಬಂದಾಗ "ಏನೂ ಚಿಂತೆ ಮಾಡಬೇಡಿ, ಬೇಕಾದಷ್ಟು ಹಣವಿದೆ" ಎಂದು ಹೇಳಿದರು. ಆದುದರಿಂದ, ಈಗಲಾದರೂ ಶೀಘ್ರ ಹಣ ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವೈ. ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಮಂಡಿಸಿದ ಆಯವ್ಯಯ ಪತ್ರದ 16ನೇ ಪುಟದ ಭಾಷಣದಲ್ಲಿ 'ಈ ರಾಜ್ಯದ ಬೊಕ್ಕಸದ ಹಣದಲ್ಲಿ ಸುಮಾರು 53.30 ಶೇಕಡ ಹಣವನ್ನು ಖರ್ಚು ಮಾಡಿದ ನಂತರ ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿಯೇತರ ವೆಚ್ಚಗಳನ್ನು ತೆಗೆದುಕೊಂಡ ನಂತರ ತೀರಾ ಅಗತ್ಯವಾದ ಬಂಡವಾಳ ಹೂಡಿಕೆಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಹೂಡುವಂಥ ಹಣ ತುಂಬಾ ಕಡಿಮೆ. ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಬಹುಶಃ ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿಯೇತರ ವೆಚ್ಚ, ಇವೆರಡನ್ನೂ 53 ಭಾಗಕ್ಕೆ ಸೇರಿಸಿದರೆ, ಕಳೆದ ವರ್ಷ ಇದು '65 ಭಾಗವಾಗಿತ್ತು. ಈ ವರ್ಷದ ಲೆಕ್ಕವನ್ನು ಅವರು ಕೊಟ್ಟಿಲ್ಲ. ಸ್ವಲ್ಪ ಹೆಚ್ಚು -ಕಡಿಮೆ 73 ಭಾಗವಾಗಬಹುದು. ಅಂದರೆ, 3025 ಕೋಟಿ ರೂಪಾಯಿಗಳಲ್ಲಿ ಶೇಕಡ 73ರಷ್ಟು ಭಾಗದ ಹಣವನ್ನು ಈ ಕ್ಷೇತ್ರದಲ್ಲಿ ಖರ್ಚು ಮಾಡಿದರೆ ಅಭಿವೃದ್ಧಿ ಕಾರ್ಯಗಳಿಗೆ ಉಳಿಯುವಂಥ ಹಣ 100 ಕೋಟಿ ಚಿಲ್ಲರೆಯಾಗಬಹುದೆಂದು ನನ್ನ ಭಾವನೆ. 1000 ಕೋಟಿ ರೂಪಾಯಿಗಳ ಯೋಜನೆಯಿಟ್ಟುಕೊಂಡು ನೀರಾವರಿ, ವಿದ್ಯುಚ್ಛಕ್ತಿ ಕ್ಷೇತ್ರಕ್ಕೆ 1400 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, 500 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಿರುವುದು ಎಷ್ಟು ಸಾಧುವಾಗುತ್ತದೆ ? ಅದಕ್ಕೆ ನಾನು ಇದರ ಬಗ್ಗೆ ಸ್ಪಷ್ಟೀಕರಣ ಕೇಳುತ್ತಿದ್ದೇನೆ. ತಾವು ಹೇಳಿದ್ದೀರಿ: 'after deducting the normal maintenance and the non-plan expenditure, the amount left for the developmental work will be negligible'. ಗೌಣ ಎಂದು.

ಅದು ಎಷ್ಟಾಗುತ್ತದೆ ? ರಾಜ್ಯದ ಈ ವರ್ಷದ ಅಭಿವೃದ್ಧಿ ಕೆಲಸಗಳಿಗಾಗಿ ನಿವ್ವಳವಾಗಿ, ನಿರ್ದಿಷ್ಟವಾಗಿ ಸಿಗುವಂಥ ಹಣವೆಷ್ಟು after deducting the 53% normal expenditure and non–developmental expenditure? ಇದೊಂದು ಪ್ರಶ್ನೆ. ಎರಡನೆಯ ಪ್ರಶ್ನೆಯೇನೆಂದರೆ, ವಾಣಿಜ್ಯ ತೆರಿಗೆ ಸಂಗ್ರಹಣೆಯಲ್ಲಿ downward revision ಆಗಿದೆ. ನಿನ್ನೆ ದಿವಸ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಭಾಷಣ ಮಾಡುತ್ತಾ ಹೇಳುತ್ತಿದ್ದರು:- '400 ಕೋಟಿ ಚಿಲ್ಲರೆಯಿಂದ 300 ಕೋಟಿ ರೂಪಾಯಿಗಳಿಗೆ ಡೌನ್‌ವರ್ಡ್ ರಿವಿಷನ್ ಆಗಿದೆ ಎಂದು. ಇದಕ್ಕೆ ಭಾಷಣ ಮಾಡುವ ಸಮಯದಲ್ಲಿ ಉತ್ತರ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಉತ್ತರ ಕೊಡಲಿಲ್ಲ. ಈ ಡೌನ್‌ವರ್ಡ್ ರಿವಿಷನ್‌ಗೆ what were the specific definite

reasons for revising the collection of the target of the commercial taxes during this year?

ಮೂರನೆಯದಾಗಿ, ನಾನು ಭಾಷಣ ಮಾಡುವಾಗ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರಲಿಲ್ಲ. ಈ ಆಯವ್ಯಯದಲ್ಲಿ ಅಂಕಿ–ಅಂಶಗಳ ಮುಖಾಂತರ ರಾಜ್ಯದ ಜನರನ್ನು ದಾರಿ ತಪ್ಪಿಸುವಂಥ ಪ್ರಯತ್ನವನ್ನು ರಾಜ್ಯವನ್ನಾಳುತ್ತಿರುವ ನಾವು ಮಾಡುತ್ತಿದ್ದೇವೆಂಬ ಮಾತನ್ನು ನಾನು ಆಡಿದೆ. ಅದಕ್ಕೆ ಇಲ್ಲೊಂದು ಉದಾಹರಣೆ ಕೊಡುತ್ತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಈ ವರ್ಷದ ಯೋಜನಾ ವೆಚ್ಚದ ದರ, I congratulate you, it is much more high, almost 57%.

ಬಹುಶಃ ಈ ರಾಜ್ಯದ ಚರಿತ್ರೆಯಲ್ಲಿ ಇದನ್ನು ಯಾರಾದರೂ ನೋಡಿದರೆ ಬಹಳ ಸಂತೋಷ ಪಡುತ್ತಾರೆ. ಶೇಕಡಾ 57 ಜಿಗಿಯುತ್ತಿದೆ, ದರದ ಹೆಚ್ಚಳವಿದೆಯೆಂದು ಅವರು ಹೇಳುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿಗಳು ಇದು ಸರಿಯಿಲ್ಲವೆಂದು ಹೇಳುತ್ತಾರೆ. ಶೇಕಡ 57ರಷ್ಟು ಆಗುವುದಿಲ್ಲವೆಂದೂ, ಬಹುಶಃ 40 ಶೇಕಡ ಬರಬಹುದು ಎಂದು ಹೇಳುತ್ತಿದ್ದಾರೆ. ಇದರಲ್ಲಿ ಯಾವುದು ಸರಿ ಎಂದು ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಹಾಗೂ ರಾಜ್ಯದ ಜನತೆಗೆ ತಿಳಿಸಬೇಕು. ಈ ವರ್ಷದ ಯೋಜನಾ ವೆಚ್ಚದ ದರದ ಹೆಚ್ಚಳದಲ್ಲಿ ಪ್ರತಿಶತ 57 ಭಾಗವಾಗುತ್ತದೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಅಷ್ಟು ಆಗುವುದಿಲ್ಲ, ಬರಿ ಶೇಕಡಾ 40 ಆಗುತ್ತದೆ' ಎಂದು ಮಾನ್ಯ ಬಂಗಾರಪ್ಪನವರು ಹೇಳುತ್ತಾರೆ. ಇದರಲ್ಲಿ ಯಾವ ಅಂಕಿ – ಅಂಶಗಳು ಸರಿಯಾಗಿವೆ ಎಂಬುದನ್ನು ತಿಳಿಸಬೇಕು. ಇನ್ನೊಂದು ವಿಷಯದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಯಾವ ವಿಷಯವೆಂದರೆ ನೀರಾವರಿ ಸಾಮರ್ಥ್ಯವನ್ನು ಸೃಷ್ಟಿ ಮಾಡುವುದಕ್ಕೆ, ಅದರ ಉಪಯುಕ್ತತೆಗೂ ಇರುವ ಅಂತರವನ್ನು ಕಡಿಮೆ ಮಾಡಬೇಕೆನ್ನುವುದು. ಪೊಟೆನ್ಷಿಯಾಲಿಟಿಗೂ ಮತ್ತು ಯುಟಿಲಿಟಿಗೂ ಇರುವಂಥ ಅಂತರವನ್ನು ಕಡಿಮೆ ಮಾಡಬೇಕೆನ್ನುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ನಮಗೆಲ್ಲರಿಗೂ ಮನಮೆಚ್ಚುವ ರೀತಿಯಲ್ಲಿ ಹೇಳಿದ್ದಾರೆ ಆದರೆ, ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಇದು ನಿಮ್ಮಿಂದ ಸಾಧ್ಯವಾಗುವುದಿಲ್ಲ.

ನಾರಾಯಣಪುರ ಮತ್ತು ಹೇಮಾವತಿ ಅಣೆಕಟ್ಟೆಯನ್ನು ಕಟ್ಟಿ ಎಷ್ಟು ವರ್ಷಗಳಾಯಿತು ? Does this Government or any Government have realised the gap period? ಒಂದು ವರ್ಷದಲ್ಲಿ ಏನು ಒಂದು ಸೃಜನಾ ಶಕ್ತಿ ಸಾಮರ್ಥ್ಯ ಇದೆಯೋ ಅದನ್ನು ಉಪಯೋಗಿಸಿಕೊಳ್ಳತಕ್ಕದನ್ನು ಒಂದು ವರ್ಷ ಕಡಿಮೆ ಮಾಡುತ್ತೇವೆ ಎಂದು ಹೇಳುತ್ತೀರೋ ಇದು ಸಹಜತೆಗೆ ದೂರವಾದುದು. ಇದನ್ನು ನಿಮ್ಮ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ತಮ್ಮ ಮುಖಾಂತರ ತಿಳಿಸಬಯಸುತ್ತೇನೆ. In view of the experience you have gained in recent days.

ಅನಂತರ ರಾಜ್ಯದ ಬೊಕ್ಕಸ ಬರಿದಾಗಿದೆ ಎಂದು ಹೇಳಿದ್ದಾರೆ. ಅವರು ನೀರಾವರಿಯ ಬಗ್ಗೆ ಎರಡು ಅಂಕಿ ಅಂಶಗಳನ್ನು ಕೊಟ್ಟರು, ಅದರಲ್ಲಿ ನಾನು ಒಂದನ್ನು ಮಾತ್ರ ತಿಳಿದುಕೊಂಡಿದ್ದೇನೆ. ಅದೇನೆಂದರೆ ನೀರಾವರಿ ಕೆಲಸವಾಗಿರತಕ್ಕದ್ದಕ್ಕೆ ಬಿಲ್ಲನ್ನು ಕೊಡಲು 50 ಕೋಟಿ ಕೊಡಬೇಕಾಗಿದೆ ಎಂದು. ಬೊಕ್ಕಸ ಬರಿದಾಗಿದೆ. ಅದು ಯಾರಿಂದಾಯಿತು, ಅವರಿಂದಾಯಿತೇ ಅಥವಾ ಇವರಿಂದಾಯಿತೇ ಎನ್ನುವುದು ನನಗೆ ಬೇಡ. ಆದರೆ ಅದರ ಬಗ್ಗೆ ಅವರು ಉತ್ತರ ಕೊಡುವುದನ್ನು ನೋಡಿದರೆ ಒಂದು ರೀತಿಯಲ್ಲಿ ಸಿ.ಎಲ್.ಪಿ. ಸಭೆಯಲ್ಲಿ ಭಾಷಣ ಮಾಡಿದಂತೆ ಇದೆ. ಅವರು ಏಕೆ ಆ ಉತ್ತರವನ್ನು ಕೊಟ್ಟರೋ ಅದು ನನಗೆ ಬೇಕಾಗಿಲ್ಲ. ನಿಮ್ಮಲ್ಲಿ ಹಣ ಕಡಿಮೆ ಇದೆ, ಬೊಕ್ಕಸದಲ್ಲಿ ಹಣವಿಲ್ಲ. ಆದರೆ ಕೊನೆಯಪಕ್ಷ ಆದ್ಯತೆಯ ಕ್ಷೇತ್ರದ ಅಭಿವೃದ್ಧಿ ಕೆಲಸಕ್ಕಾಗಿ ದುಡ್ಡನ್ನು ಕೊಡುತ್ತೀರಾ ? ನೀರಾವರಿಯ 50 ಕೋಟಿ

ಬಿಲ್ಲನ್ನು ಚುಕ್ತಾ ಮಾಡುತ್ತೀರಾ? ಆರ್ಥಿಕ ಮುಗ್ಗಟ್ಟು ಇದ್ದರೂ ಕೂಡ, ಹಣದ ಕೊರತೆ ಇದ್ದರೂ ಕೂಡ, ಬೊಕ್ಕಸ ಬರಿದಾಗಿದ್ದರೂ ಕೂಡ ಇರತಕ್ಕ ಹಣದಲ್ಲಿ ಆದ್ಯತಾ ಕ್ಷೇತ್ರದಲ್ಲಿರತಕ್ಕ ಬಿಲ್ಲನ್ನು ಚುಕ್ತಾ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೀರಾ? ಇನ್ನು ಕಡೆಯದಾಗಿ ತಾವು ಅಬಕಾರಿ ಇಲಾಖೆಯಲ್ಲಿ ಒಂದೇ ಒಂದು ತಿಂಗಳಿಗೆ 5ಕೋಟಿ ಆದಾಯ ಬರತಕ್ಕ ಪ್ರಯತ್ನವನ್ನು ಮಾಡಿದ್ದಾರೋ, ಅದರಲ್ಲಿ ಸಫಲರಾಗಿದ್ದಾರೆ. ಅವರು ಕೊಟ್ಟಿರತಕ್ಕ ಅಂಕಿ ಅಂಶಗಳು ಸತ್ಯವಾದರೆ ನಾನು ಈ ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಮತ್ತೆ ಈ 5 ಕೋಟಿ ರೂಪಾಯಿಗಳಲ್ಲಿ ನೀರಾವರಿಗೆ ಆದ್ಯತಾ ಕ್ಷೇತ್ರದ ಮೇಲೆ ಹಣವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಪರ್ಫಾರ್ಮೆನ್ಸ್ ಬಜೆಟನ್ನು ಇಡಿ ಎಂದು ನಾನು ಬಹಳ ವರ್ಷಗಳಿಂದ ಒಂದೇ ಒಂದು ಬೇಡಿಕೆಯನ್ನು ಇಟ್ಟಿದ್ದೆ. ಈ ಸಾರಿ ಸ್ವಲ್ಪ ಮಟ್ಟಿಗೆ ಆ ಕೆಲಸವನ್ನು ಮಾಡತಕ್ಕ ಪ್ರಯತ್ನ ಮಾಡಿದ್ದಾರೆ. ಆದರೆ ಇದನ್ನು ಒಂದು ಪುಸ್ತಕದ ರೂಪದಲ್ಲಿ ಕೊಟ್ಟರೆ ಚರ್ಚೆ ಮಾಡುವುದಕ್ಕೆ ಸಹಾಯವಾಗುತ್ತದೆ, ಮತ್ತು ದೇಶದ ಜನರಿಗೆ ಒಂದು ಬಜೆಟಿಗೂ ಮತ್ತೊಂದು ಬಜೆಟಿಗೂ ಮಧ್ಯ. ಏನು ಕಾರ್ಯ ರಾಜ್ಯದಲ್ಲಿ ನಡೆದಿದೆ ಎನ್ನತಕ್ಕದ್ದು ಗೊತ್ತಾಗುತ್ತದೆ. ಇದರ ಬಗ್ಗೆ ತಾವು ದಯವಿಟ್ಟು ಆಲೋಚನೆ ಮಾಡಬೇಕು. ಎರಡನೆಯದಾಗಿ ಅವರು ಕೆಲವು ಪರಿಹಾರವನ್ನು ಘೋಷಣೆ ಮಾಡಿದ್ದಾರೆ on items like aluminium, atta, soji, maida and newsprint. What exactly the impact I would like to know, and also the additional revenue the Government is going to get from abolishing or the change of policy of the bottling. ಇವೆಲ್ಲಾ ಸೇರಿಸಿದರೆ 10-12 ಲಕ್ಷ ಬರಬಹುದು. Then in annexure VIII, commodities proposed for increase in the rate of sales tax include plastic pipes from 3% to 6%, metallic barbed wire from 8% to 10%. Atleast you go back to the old rate and take credit. The Government is not going to loose anything.

ಬಹಳ ಮುಖ್ಯವಾದುದೇನೆಂದರೆ ಕಾಫಿಯ ಪರ್ಚೇಸ್ ಮೇಲೆ ಟ್ಯಾಕ್ಸ್ ಎಂಟೂ ಮುಕ್ಕಾಲು ಪರ್ಸೆಂಟ್ ಇದೆ. ಇದು ಕೇರಳದಲ್ಲಿ 3 ಪರ್ಸೆಂಟ್ ತಮಿಳುನಾಡಿನಲ್ಲಿ 6 ಪರ್ಸೆಂಟ್ ಇದೆ. If my information is correct, it is not more than 6%. ಒಂದೊಂದು ರಾಜ್ಯದಲ್ಲಿ ಒಂದೊಂದು ತೆರಿಗೆ ಇದ್ದರೆ ಸರಿಯಾಗುವುದಿಲ್ಲ, ಇದರ ಬಗ್ಗೆ ನಾವು ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇವೆ. It is a national crop. ಈ ರಾಜ್ಯದಲ್ಲಿ ಒಂದು ತೆರಿಗೆ, ಆ ರಾಜ್ಯದಲ್ಲಿ ಒಂದು ತೆರಿಗೆ ಎಂದರೆ ಕಾಫಿ ಇಲ್ಲಿ ಹಲ್ಲ್ ಆಗುವುದರ ಬದಲು ಕೇರಳ, ಅಥವಾ ತಮಿಳುನಾಡಿಗೆ ಹೋಗುತ್ತದೆ, ಇದರಿಂದ ತಮಗೆ ಬರಬೇಕಾಗಿರತಕ್ಕ 3 ಪರ್ಸೆಂಟ್ ಸಹ ಬರುವುದಿಲ್ಲ; ಆದುದರಿಂದ ದಕ್ಷಿಣ ಭಾರತದ ರಾಜ್ಯಗಳು ಒಂದು ಸಮಾನಾಂತರ ರೂಪದ ತೆರಿಗೆಯನ್ನು ಹಾಕಬೇಕು. ಇದನ್ನು ಏಕೆ ಮಾಡಬೇಕೆಂದರೆ ಕಾಫಿ ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಬೆಳೆಯುವುದು. Please take note of it. Coffee industry is in crisis.

ಈ ಸಾರಿ ತಾವು ಇವರ ರೆಸ್ಕ್ಯೂಗೆ ಬರದಿದ್ದರೆ ನಮ್ಮ ಕೈಗಾರಿಕೆಗಳು ಇಲ್ಲಿಗೆ ಕೊನೆಗೊಳ್ಳುತ್ತವೆ. 300 ಕೋಟಿ ರೂ.ಗಿಂತ ಹೆಚ್ಚು ಫಾರಿನ್ ಎಕ್ಸ್‌ಛೇಂಜ್ ಗಳಿಸುವ ಉದ್ಯಮದ ಬಗ್ಗೆ ತಾವು ಒಂದೇ ಒಂದು ಶಬ್ದವನ್ನೂ ಕೂಡ ಇವರಲ್ಲಿ ಹೇಳಿಲ್ಲ. ಆದ್ದರಿಂದ ದಯವಿಟ್ಟು ಕೇರಳ, ತಮಿಳನಾಡು, ಆಂಧ್ರ, ಕರ್ನಾಟಕಕ್ಕೆ ಒಂದು ಪ್ಯಾರಿಟಿಯನ್ನಾದರೂ ಕೊಟ್ಟು ಬಿಡಿ. ಡಿಸೆಂಬರ್ ಮತ್ತು ಜನವರಿ ತಿಂಗಳ ಕಮರ್ಷಿಯಲ್ ಟ್ಯಾಕ್ಸಸ್ ಕಲೆಕ್ಷನ್ ಏನೆಂಬುದನ್ನು ಕೊಡಿ ಎಂದು ನಾನು ತಮ್ಮನ್ನು ಕೇಳಿದೆ. ಇದರಲ್ಲಿ

ಇಂಪ್ಲಿಕೇಷನ್ಸ್ ಬಹಳ ಇದೆ. I tell you this has the political implications though you don't accept it. I would convince you after getting the information. Thank you.

ಶ್ರೀ ಗುರುದೇವ್:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕೆಲವೊಂದು ರಿಯಾಯಿತಿಗಳನ್ನು ಘೋಷಣೆ ಮಾಡಿದ್ದಾರೆ. ವಿರೋಧ ಪಕ್ಷದವರ ಜೊತೆಗೆ ನನ್ನ ಧ್ವನಿಯನ್ನೂ ಕೂಡಿಸಿ ರೈತರಿಗೆ ಸಿಕ್ಕಬೇಕಾದ ಕೆಲವೊಂದು ರಿಯಾಯಿತಿಗಳನ್ನು ಕೊಡುವುದರ ಜೊತೆಗೆ ಮಾನ್ಯ ಚಂದ್ರೇಗೌಡರು ಹೇಳಿದಂತೆ ತಮ್ಮ ಈ ಆಯವ್ಯಯ ಭಾಷಣದಲ್ಲಿ ಏನು ಹೇಳಿದ್ದೀರಿ ಅದಕ್ಕೆ ಸಂಬಂಧಪಟ್ಟಂತೆ ಪ್ಲಾಂಟರ್ಸ್ ಏನು ಕಷ್ಟದಲ್ಲಿದ್ದಾರೆಂಬ ಬಗ್ಗೆ ತಮಗೆ ಮನವಿಯನ್ನು ಸಲ್ಲಿಸಿದ್ದೇವೆ. ಇದರ ಬಗ್ಗೆ ತಾವು ಏನನ್ನೂ ಹೇಳಲಿಲ್ಲ. ಕೇರಳ ಮತ್ತು ತಮಿಳನಾಡಿನಲ್ಲಿರುವ ರೀತಿಯಲ್ಲಿ ನಮ್ಮ ಕರ್ನಾಟಕದಲ್ಲೂ ನೀತಿಯನ್ನು ಅನುಸರಿಸಿದರೆ ನಮ್ಮ ಕಷ್ಟ ಸ್ವಲ್ಪ ಮಟ್ಟಿಗೆ ನಿವಾರಣೆಯಾಗುತ್ತದೆ. ನಮ್ಮ ಪ್ಲಾಂಟರ್ಸ್ ಕಮ್ಯೂನಿಟಿ ಸುಮಾರು 30–40 ಕೋಟಿ ರೂ.ನಷ್ಟು ಆದಾಯವನ್ನು ರಾಜ್ಯದ ಬೊಕ್ಕಸಕ್ಕೆ ಕೊಡುತ್ತಿದೆ. ಇದನ್ನು ತಾವು ಮನಸ್ಸಿಗೆ ತೆಗೆದುಕೊಂಡು ಕನಿಷ್ಠ 3 ಪರ್ಸೆಂಟಿಗಾದರೂ ಇದನ್ನು ಇಳಿಸಬೇಕು. ಈ ವಿಚಾರವನ್ನು ತಾವು ಇಲ್ಲಿ ಘೋಷಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಪೈಪ್ ಮತ್ತು ಬಾರ್ಬಡ್ ವೈರ್ ಬಗ್ಗೆ ತಾವು ಪ್ರಕಟಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ।। ಎನ್. ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ವಿಷಯಗಳ ಮೇಲೆ ರಿಯಾಯಿತಿಯನ್ನು ಕೊಡತಕ್ಕ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಬಹಳ ಮುಖ್ಯವಾಗಿ ಜಿ.ಐ. ಪೈಪ್‌ಗಳು, ಬಾರ್ಬ್ಡ್ ವೈರ್‌ಗಳು, ರಸಗೊಬ್ಬರಕ್ಕೆ ಸಬ್ಸಿಡಿ ಸಿಕ್ಕದೇ ಇರುವುದರಿಂದ ಅವರಿಗೂ, ಎಲಕ್ಟ್ರಿಸಿಟಿ ಬಗ್ಗೆ ಮಾತನಾಡುವ ಸಂದರ್ಭದಲ್ಲೂ ಕೂಡ ಎಲೆಕ್ಟ್ರಿಸಿಟಿ ಯೂನಿಟ್ ಮೇಲೆ ಛಾರ್ಜ್ ಮಾಡಬೇಕೆಂಬ ಕೇಂದ್ರದ ಪ್ರಪೋಸಲ್ ಇರುವುದರಿಂದ ಇದರ ಬಗ್ಗೆ ನಾನು ಅನೇಕ ರೈತರ ಜೊತೆ ಮತ್ತು ರೈತ ಸಂಘದ ಜೊತೆ ಮಾತನಾಡಿದ್ದೇನೆ. ಈಗಾಗಲೇ ವಿದ್ಯುಚ್ಛಕ್ತಿ ಮಂಡಲಿ ತುಂಬಾ ನಷ್ಟದಲ್ಲಿದೆ. ನಮಗೆ ಕಳುಹಿಸುವಂಥ ಮೆಟೀರಿಯಲ್ಸ್ ಮತ್ತು ಟ್ರಾನ್ಸ್‌ಫಾರ್ಮರ್ಸ್ ಸುಟ್ಟು ಹೋಗಿರುವ ಬಗ್ಗೆ ಕೂಡ ಚರ್ಚೆ ಮಾಡಿದ್ದೇವೆ. ಒಂದು ಪಂಪ್‌ಸೆಟ್ಟಿಗೆ ನಿಗದಿತವಾಗಿ 500 ರೂ. ಅಥವಾ 1000 ರೂ. ಹಾಕಿದರೆ ಒಂದು ತಾಲ್ಲೂಕಿನಲ್ಲಿ 10 ಸಾವಿರ ಪಂಪ್ ಸೆಟ್ಟುಗಳಿದ್ದರೆ ಅವುಗಳಿಗೆ ಒಂದೊಂದು ಪಂಪ್ ಸೆಟ್ಟಿಗೆ 1000 ರೂ.ನಂತೆ ರೈತರು ಕೊಡುವುದಕ್ಕೆ ತಯಾರಿದ್ದಾರೆ. ಅದನ್ನು ಕೊಟ್ಟರೆ ಅಲ್ಲಿನ ಕೆ.ಇ.ಬಿ.ಗೆ ಹಣ ಬರುತ್ತದೆ. ಅದೇ ರೀತಿಯಲ್ಲಿ ಕೆ.ಇ.ಬಿ.ಯವರು ಟ್ರಾನ್ಸ್ ಫಾರ್ಮರ್ಸ್ ಮತ್ತು ಮೆಟೀರಿಯಲ್ಸ್‌ನ್ನು ಒದಗಿಸಿದರೆ ರೈತರ ಬೆಳೆ ಒಣಗಿ ಹೋಗದಂತೆ ನೋಡಿಕೊಳ್ಳಲು ಅನುಕೂಲವಾಗುತ್ತದೆ. ಒಂದು ವರ್ಷಕ್ಕೆ 1000ರೂ.ನಂತೆ ಕೊಡಲು ಎಲ್ಲಾ ರೈತರೂ ಒಪ್ಪಿಕೊಳ್ಳುತ್ತಾರೆ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಅಧ್ಯಕ್ಷರೆ, ಸದನದಲ್ಲಿ ಮಂತ್ರಿಗಳು, ಮುಖ್ಯಮಂತ್ರಿಗಳೂ ಕೂಡ ಇಲ್ಲ.

(ಗೊಂದಲ)

ಡಾ।। ಎನ್. ಬಿ. ನಂಜಪ್ಪ:- ನನ್ನ ಅಭಿಪ್ರಾಯವನ್ನು ನಾನು ಹೇಳುತ್ತೇನೆ. ನಾನು ನಿಮಗಿಂತ ಒಳ್ಳೆಯ ವ್ಯವಸಾಯಗಾರ. ನನ್ನ ಬಗ್ಗೆ ನೀವು ಏತಕ್ಕೆ ಮಾತನಾಡುತ್ತೀರಿ ? ರೈತರಿಗೆ ಬೇಕಾಗಿರತಕ್ಕದ್ದು

ಕರೆಂಟ್ ಹಾಗೂ ಅಲ್ಲಿಗೆ ಬೇಕಾಗುವಂಥ ಮೆಟೀರಿಯಲ್ಸ್ ಮುಖ್ಯವಾದುದು. ನಿಮಗೆ ಕೊಡಬೇಕಾದ್ದನ್ನು ಕೊಡುವುದಿಲ್ಲವೆಂದು ಯಾವ ರೈತರೂ ಹೇಳುವುದಿಲ್ಲ. ನನಗೆ ಗೊತ್ತಿದೆ. ನಾನೂ ಒಬ್ಬ ರೈತ. ನನ್ನ ಸಲಹೆಯನ್ನು ನಾನು ಕೊಡುತ್ತೇನೆ ನಿಮಗೇಕೆ ಉರಿಯುತ್ತದೆ? ನೀವು ಸುಮ್ಮನಿರುವುದಕ್ಕಾಗುವುದಿಲ್ಲವೇ? ನಿಮ್ಮ ಅಭಿಪ್ರಾಯ ನೀವು ಕೊಡಿ; ನನ್ನ ಅಭಿಪ್ರಾಯವನ್ನು ನಾನು ಕೊಡುತ್ತೇನೆ. ಆದರಿಂದ ಉಪಯೋಗವಾದರೆ ಆಗಲಿ, ಇಲ್ಲದಿದ್ದರೆ ಹೋಗಲಿ. ಆ ವಿಚಾರ ಬೇರೆ.

ಅಧ್ಯಕ್ಷರು:– ನೀವು ಕ್ಲಾರಿಫಿಕೇಷನ್ ಕೇಳಿ.

ಡಾ. ಎನ್. ಬಿ. ನಂಜಪ್ಪ:– ಆಹಾರ ಪದಾರ್ಥಗಳ ವಿತರಣೆಯಲ್ಲಿ ಸೀಮೆಎಣ್ಣೆ ವಿತರಣೆಯಲ್ಲಿ ಬಹಳಷ್ಟು ಅವ್ಯವಸ್ಥೆಯಾಗಿದೆ. ಈಗ ಹಳ್ಳಿಗಳಿಗೆ ನಾವು ಹೋಗುವುದಕ್ಕೂ ಆಗುವುದಿಲ್ಲ. ಅಂತಹ ಪರಿಸ್ಥಿತಿ ಇದೆ.

ಅಧ್ಯಕ್ಷರು:– ಮಾನ್ಯ ಸದಸ್ಯರು ತಾವು ಕುಳಿತುಕೊಳ್ಳಬೇಕು. ಈಗ ಮಾನ್ಯ ಯಡಿಯೂರಪ್ಪನವರು ಮಾತನಾಡಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ:– ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ರೈತರ ಪರವಾಗಿ ಒಂದು ಕನ್ಸೆಷನ್ನನ್ನು ಪಡೆಯಲಿಕ್ಕೆ ಭಿಕ್ಷೆ ಬೇಡುವಂಥ ಸ್ಥಿತಿ ನಮಗೆ ಬಂದಿತಲ್ಲಾ! ಸರ್ಕಾರದ್ದು ಏನು ಉದ್ದೇಶ.

(ಗೊಂದಲ)

ಅಧ್ಯಕ್ಷರು:– ತಾವು ಕೇಳಿ, ತಾವು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಈ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ನಾನು ಎದ್ದ ತಕ್ಷಣ ಮಾನ್ಯ ಸದಸ್ಯರು ಕೂಗಿದರೆ ನಾವು ಹೇಗೆ ಕೆಲಸ ಮಾಡುವುದು ತಾವೇ ಹೇಳಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:– ಭಾಷಣವಾದರೆ ಬೇರೆ ಮಂತ್ರಿಗಳು ಫೀಡ್ ಮಾಡುತ್ತಾರೆ. ಇದು ಪ್ರಶ್ನೋತ್ತರ. ಮಾನ್ಯ ಮಂತ್ರಿಗಳು ಪ್ರಶ್ನೆಗೆ ಉತ್ತರ ಹೇಳಿಬಿಟ್ಟರೆ ಸಾಕು. ಇಲ್ಲಿರತಕ್ಕಂಥವರು 200 ಜನ ಪ್ರಶ್ನೆಯನ್ನು ಕೇಳಿದರೆ ಮತ್ತೊಂದು ಉತ್ತರದ ಭಾಷಣವಾಗುತ್ತದೆ. ಪ್ರಶ್ನೆಗೆ ತಕ್ಷಣ ಉತ್ತರ ಹೇಳಿಬಿಟ್ಟರೆ ಈ ಸಮಸ್ಯೆ ಬಗೆಹರಿಯುತ್ತದೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಬಜೆಟ್ ಮೇಲೆ ಯಾರು ಮಾತನಾಡಿಲ್ಲವೋ ಅವರಿಗೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ನಾನು ಅವಕಾಶ ಮಾಡಿಕೊಡುತ್ತೇನೆ, ಸ್ವಲ್ಪ ತಾಳ್ಮೆಯಿಂದ ಇರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ; ಬಜೆಟ್ ಬಗ್ಗೆ ಮಾತನಾಡಿ ಅನೇಕ ವಿಷಯಗಳ ಬಗ್ಗೆ ಉತ್ತರ ಸಿಗುತ್ತದೆಂದು ನಾನು ನಿಮ್ಮನ್ನು ಕೇಳುತ್ತೇನೆ. ನೀವು ನಮ್ಮ ರಕ್ಷಣೆಗೆ ಬರಬೇಕು. ನಾವು ಪ್ರಸ್ತಾಪ ಮಾಡಿದಂಥ ಪ್ರಮುಖ ವಿಷಯದ ಬಗ್ಗೆ ಒಂದು ಉತ್ತರ ನಮಗೆ ಬಂದಿತು. ಉದಾಹರಣೆಗೆ ಕೃಷ್ಣಾ, ಕಾವೇರಿ ನೀರಾವರಿಯ ಬಗ್ಗೆ ತಾವು ಹಣವನ್ನು ಕೊಟ್ಟದ್ದೀರಿ. ಈ ವರ್ಷ 1992–93ರಲ್ಲಿ ಹೇಳಿದ್ದೀರಿ, ಆದರೆ ದುಡ್ಡನ್ನು ಕೊಟ್ಟಿಲ್ಲ. 2000ನೇ ವರ್ಷದ ಬಚಾವತ್

ಆಯೋಗದ ಪ್ರಕಾರ, ಅವರ ತೀರ್ಪಿನ ಪ್ರಕಾರ ನೀರಾವರಿ ಯೋಜನೆಗಳು ಪೂರ್ಣವಾಗುವಂಥ ಪ್ರಶ್ನೆ ಬರುವುದಿಲ್ಲ. ಅದರ ಬಗ್ಗೆ ಯಾವುದೇ ಕ್ಲಾರಿಫಿಕೇಷನ್ ಕೊಡಲಿಲ್ಲ.

ನಾವು ಪ್ರಸ್ತಾವನೆ ಮಾಡಿದ್ದೇವೆ. ನಾನು ಏನು ಅಂದುಕೊಂಡಿದ್ದೆ ಎಂದರೆ ಕನಿಷ್ಟ ಪಕ್ಷ ಈ ಸರ್ಕಾರಕ್ಕೆ, ಅತ್ಯಂತ ಅಗತ್ಯವಿರುವಂಥ ನೀರಾವರಿ ಯೋಜನೆಗಳ ಬಗ್ಗೆ ಅವರಿಗೆ ಕಳಕಳಿ ಇದ್ದರೆ ಕಳೆದ ಮೂರು ವರ್ಷಗಳ ಅಂಕಿ ಅಂಶಗಳನ್ನು ಕೊಟ್ಟರೆ 300 ಕೋಟಿ ರೂಪಾಯಿಗಳನ್ನು ಕೊಡುವುದು ದೊಡ್ಡದಲ್ಲ. ಬಜೆಟ್‌ನಲ್ಲಿ 600 , 700 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದರು. ಅದಕ್ಕೆ ನಾನು ಒತ್ತಾಯ ಮಾಡುತ್ತಿರುವಂಥದ್ದು ಕನಿಷ್ಟ ಪಕ್ಷ ನೀವು ಬಜೆಟ್‌ನಲ್ಲಿ ಏನು ಹೇಳಿದ್ದೀರಿ, ನೀರಾವರಿ ಯೋಜನೆಗಳಿಗೆ ಏತಕ್ಕೆ ಖರ್ಚು ಮಾಡಲಿಲ್ಲ. ನಿಮ್ಮ ಉದ್ದೇಶವೇನು ? ಎರಡನೆಯದಾಗಿ ನಾನು ಏನು ಹೇಳಿಕೊಂಡಿದ್ದೆ ಅಂದರೆ ನಮ್ಮ ಸ್ನೇಹಿತರು ಕೂಗಿದರೂ ಪರವಾಗಿಲ್ಲ, ನಿಮ್ಮನ್ನು ರೈತರ ವಿರೋಧಿ ಎಂದು ನಾನು ಹೇಳಲಿಲ್ಲ. ಈ ರೈತರ ಬಗ್ಗೆ ತಾವು ಉದ್ದೇಶಪೂರ್ವಕವಾಗಿ ಸರ್ಕಾರ ಒಂದೇ ಒಂದಕ್ಕೆ ಪಂಪ್‌ಸೆಟ್ಟುಗಳಿಗೆ ಹಾಕುವಂಥ ಪೈಪ್‌ಗಳನ್ನು, ಬೇಲಿಗೆ ಹಾಕುವಂಥ ವೈರ್ ಬಗ್ಗೆ ಟ್ಯಾಕ್ಸ್ ಜಾಸ್ತಿ ಮಾಡಿದ್ದಾರೆ. ಅದಕ್ಕೆ ನಾವು ಇಲ್ಲಿರುವವರೆಲ್ಲರೂ ಅದನ್ನು ಕಡಿಮೆ ಮಾಡಿ ವಾಪಸ್, ತೆಗೆದುಕೊಳ್ಳಿ ಎಂದು ಕೇಳುವ ಹಾಗೆ ಮಾಡಿ ರೈತರಿಗೆ ದೊಡ್ಡ ಉಪಕಾರ ಮಾಡಿದೆವು ಎಂದು ಹೇಳಿ ವಾಪಸ್ ತೆಗೆದುಕೊಳ್ಳುವುದು. ಅದು 1 ಕೋಟಿ ರೂಪಾಯಿ ಟ್ಯಾಕ್ಸ್ ಆಗುವುದಿಲ್ಲ. ಅದರ ಉದ್ದೇಶವೇನು ? ಏತಕ್ಕೆ ಹಾಕಿ ಮತ್ತೆ ಏತಕ್ಕೆ ವಾಪಸ್ ತೆಗೆದುಕೊಳ್ಳುವುದು ? ತೆಗೆಯುವುದು ಬಿಡುವುದು ಅದು ಅವರಿಗೆ ಬಿಟ್ಟದ್ದು. ಎರಡನೆಯದು ನನಗೆ ಗೊತ್ತಿರುವುದು ಇಷ್ಟೇ; ಅನೇಕ ಅಂಕ ಅಂಶಗಳನ್ನು ಹೇಳಿದರು. ನಾನು ಎಲ್ಲಾ ವಿವರಕ್ಕೆ ಹೋಗುವುದಿಲ್ಲ. ಪಿ.ಡಬ್ಲ್ಯು.ಡಿ. ಇರಿಗೇಷನ್‌ನಲ್ಲಿ ಅವರೇ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ರಾಜ್ಯದ ಇತಿಹಾಸದಲ್ಲಿ ಮೊದಲನೆಯ ಬಾರಿಗೆ ಮಾರ್ಚ್ ಕೊನೆಯೊಳಗೆ 50 ಕೋಟಿ ರೂಪಾಯಿಗಳಿಗೆ ಎಲ್.ಓ.ಸಿ. ಬಿಡುಗಡೆ ಮಾಡದೇ ಬಾಕಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರುತ್ತಾರೆ. ನಾನು ಏನು ಅಂಕಿಅಂಶಗಳನ್ನು ಹೇಳಿದರೂ ಸಹಿತ ಕಳೆದ 2 ತಿಂಗಳಿಂದ ಜಿಲ್ಲಾಪರಿಷತ್ ಇರಬಹುದು, ನೀರಾವರಿ ಯೋಜನೆಗಳ ಬಗ್ಗೆ ಪಿ.ಡಬ್ಲ್ಯುಡಿ ಇಲಾಖೆಯಿಂದ ಯಾವ ಕೆಲಸವೂ ಆಗುತ್ತಿಲ್ಲ. ಇದರಿಂದಾಗಿ ಜನರಿಗೆ ಮುಖ ತೋರಿಸುವುದಕ್ಕಾಗುವುದಿಲ್ಲ. ರಸ್ತೆಗಳಲ್ಲಿ ತಿರುಗಾಡಲಿಕ್ಕಾಗುತ್ತಿಲ್ಲ. ಕಂಟ್ರಾಕ್ಟರುಗಳು ಬರುತ್ತಿಲ್ಲ. ಈ ಬಜೆಟ್ ಮಾರ್ಚ್‌ನೊಳಗೆ ತಾವು ಮೊದಲ ಬಾರಿಗೆ ಬಿಡುಗಡೆ ಮಾಡಬೇಕಾಗಿದೆ. ಹಿಂದೆ ಎಲ್ಲಾ ಕಾಲದಲ್ಲೂ ಬಿಡುಗಡೆ ಮಾಡಿದ್ದಾರೆ ನನಗೆ ಗೊತ್ತಿರುವ ಪ್ರಕಾರ. ಕೊನೆಯ ಪಕ್ಷ 50 ಕೋಟಿ ರೂಪಾಯಿಗಳು ಇರಿಗೇಷನ್ ಪಿ.ಡಬ್ಲ್ಯು.ಡಿಯಿಂದ ಎಲ್.ಓ.ಸಿ. ಬಾಕಿ ಇದೆ. ತಾವು ಟ್ರೆಜರಿಯಲ್ಲಿ ಬಾಕಿ ಇದೆ ಡಿಲೆಯಾಗುತ್ತಿದೆ ಎಂದು ಹೇಳುತ್ತೀರಿ. ಇವತ್ತು ಹೇಳುತ್ತೀರಾ 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು. ಇನ್ನು 15 ದಿವಸಗಳು ಇದೆ. ಕಂಟ್ರಾಕ್ಟರ್ಸ್ ಬಂದು ಇಷ್ಟೆಲ್ಲಾ ಕೆಲಸವನ್ನಾದರೂ ಮಾಡುತ್ತಾರೆ. ಮೂರನೆಯದು ನೇರವಾಗಿ ಇರುವಂಥ ಪ್ರಶ್ನೆ, ರೈತರಿಗೆ ಅನೇಕ ದಿವಸಗಳಿಂದ ನೆರೆ ಹಾವಳಿ ಬಿದ್ದಿರುವಂಥವರಿಗೆ ನೀವು ಘೋಷಣೆ ಮಾಡಿದಂಥ 5 ಕೋಟಿ ಇನ್ನೂ ಬಿಡುಗಡೆ ಮಾಡಿಲ್ಲ ಈ ನಿಮಿಷದವರೆಗೆ. ಮತ್ತೆ ನೆರೆ ಹಾವಳಿ ಮತ್ತು ಅತಿವೃಷ್ಟಿ, ಬರಗಾಲಕ್ಕೆ ಸಿಕ್ಕಿರತಕ್ಕಂಥ ರೈತರಿಗೆ ಯಾವುದೇ ಕನ್ಸೆಷನ್ ಘೋಷಣೆ ಮಾಡಲಿಲ್ಲ. ಅದಕ್ಕೆ ನೆರೆಹಾವಳಿ, ಅತಿವೃಷ್ಟಿ ಮತ್ತು ಬರಗಾಲಕ್ಕೆ ಸಿಕ್ಕಿರುವಂಥ ರೈತರಿಗೆ ಸಹಕಾರಿ ಸಂಘಗಳ ಮೇಲೆ ಇರುವಂಥ ಸಾಲವನ್ನು ಮನ್ನಾ ಮಾಡಿ ಅವನು ಗೌರವದಿಂದ ಭೂಮಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೀರಾ ? 35 ಕೋಟಿ ರೂಪಾಯಿ ಏನು ಸಬ್ಸಿಡಿ ಇದೆ ಗೊಬ್ಬರದ್ದು ಅದನ್ನು ಈ ತಕ್ಷಣ ಬಿಡುಗಡೆ ಮಾಡುತ್ತೀರಾ ? ಈ ನಾಲ್ಕು ಪ್ರಶ್ನೆಗಳಿಗೂ ನೇರವಾಗಿ ಉತ್ತರವನ್ನು ಕೇಳುತ್ತೇನೆ. ತಾವು ಮಾಡುವುದು ಬಿಡುವುದು ಅದು ತಮಗೆ ಬಿಟ್ಟಿದ್ದು ಸ್ವಾಮಿ.

1.35 ಪಿ. ಎಂ.

ಶ್ರೀ ಬಸವರಾಜ ರಾಯರೆಡ್ಡಿ:- ಆಯವ್ಯಯದ 3ನೇ ಪುಟದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಿಸರ್ಗದ ವಿಕೋಪ ಪರಿಹಾರದ ಬಗ್ಗೆ ಹೇಳಿದ್ದಾರೆ, ಕಳೆದ ನವೆಂಬರ್‌ನಲ್ಲಿ ರಾಯಚೂರು, ಬಳ್ಳಾರಿ, ಬಿಜಾಪುರ ಇನ್ನಿತರ ಉತ್ತರ ಕರ್ನಾಟಕದ ಭಾಗದಲ್ಲಿ ವಿಪರೀತ ಮಳೆಯಿಂದ ನೈಸರ್ಗಿಕ ವಿಕೋಪ ಉಂಟಾಯಿತು. ಅದಕ್ಕೆ 78 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಆದರೆ ಇಲ್ಲಿ ಅವರು ಪ್ಯಾರಾ 8ರಲ್ಲಿ ಹೇಳುತ್ತಾರೆ, ಪ್ರಧಾನ ಮಂತ್ರಿಗಳ ಸಲಹೆಯಂತೆ ಅವರು ಎಕ್ಸ್‌ಟರ್ನಲ್ ಏಜೆನ್ಸಿ ಅಂದರೆ ಹೊರಗಡೆಯಿಂದ ವಿವಿಧ ವಲಯಗಳಿಗೆ ಒಟ್ಟು 977ಕೋಟಿ ರೂಪಾಯಿ ಕೊಡಲು ಮೆಮೋರ್‍ಯಾಂಡಂ ಕೊಡುತ್ತೇವೆಂದು ಹೇಳಿದ್ದಾರೆ. ಈ 977 ಕೋಟಿ ರೂಪಾಯಿಗಳನ್ನು ಹೊರಗಡೆ ಏಜೆನ್ಸಿಯಿಂದ ಪಡೆಯುತ್ತೇವೆಂದು ಹೇಳುತ್ತಿದ್ದಾರೆ. ಯಾವುದು ಅದು? ವರ್ಲ್ಡ್ ಬ್ಯಾಂಕ್, ಡ್ಯಾನಿಡ್, ಯೂನಿಸೆಫ್‌ನವರೇ, ಯಾರು ಯಾರು ಹೊರಗಡೆ ಏಜೆನ್ಸಿಯವರು ಕೊಡುವುದಕ್ಕೆ ಒಪ್ಪಿದ್ದಾರೆ ಎಂಬುದನ್ನು ಹೇಳಬೇಕು. ನ್ಯಾಚುರಲ್ ಕೆಲಾಮಿಟಿಯಲ್ಲಿ ಹಣ ಕೊಟ್ಟಿದ್ದರೂ ಗ್ರಾಮಾಂತರ ಪ್ರದೇಶದ ರಸ್ತೆಗಳಿಗೆ ಒಂದು ಪೈಸೆ ಕೂಡ ಕೊಟ್ಟಿಲ್ಲ. ಇದರಿಂದ 7 ಜಿಲ್ಲೆಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳು ಸಂಪೂರ್ಣ ಕೆಟ್ಟು ಹೋಗಿ ಸಾರಿಗೆ ವ್ಯವಸ್ಥೆ ಕೆಟ್ಟು ಹೋಗಿದೆ. ದಯವಿಟ್ಟು ಕೂಡಲೇ ಗ್ರಾಮಾಂತರ ಪ್ರದೇಶದ ರಸ್ತೆಗಳಿಗೂ ನ್ಯಾಚುರಲ್ ಕೆಲಾಮಿಟೀಸ್‌ನಲ್ಲಿ ಹಣ ಬಿಡುಗಡೆ ಮಾಡಬೇಕು. ಎರಡನೆಯದಾಗಿ, ಪ್ರೊಫೆಷನಲ್ ಟ್ಯಾಕ್ಸ್ ಆನ್ ಜರ್ನಲಿಸ್ಟ್, ಇವರು 4ರಿಂದ 6 ಸಾವಿರ ಸಂಬಳ ತೆಗೆದುಕೊಳ್ಳುತ್ತಾರೆ. ಅವರಿಗೆ ಪ್ರತಿ ತಿಂಗಳು 50 ರೂಪಾಯಿ ವೃತ್ತಿ ತೆರಿಗೆ ಇತ್ತು. ಅದನ್ನು ಈಗ 50 ಇದ್ದುದನ್ನು 60ಕ್ಕೆ ಏರಿಸಿದ್ದೀರಿ. 4ರಿಂದ 6 ಸಾವಿರ ರೂಪಾಯಿಗಳವರೆಗೆ ಏನು ಸಂಬಳ ತೆಗೆದುಕೊಳ್ಳತಕ್ಕ ಜರ್ನಲಿಸ್ಟ್ ಇದ್ದಾರೆ ಅವರಿಗೆ 50 ರೂಪಾಯಿ ಕಲೆಕ್ಟ್ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅವರಿಗೆ ಉಚಿತವಾಗಿ ಮಾಡಿ. 6ಸಾವಿರದಿಂದ ಮೇಲೆ ಸಂಬಳ ತೆಗೆದುಕೊಳ್ಳತಕ್ಕವರು ಯಾರಿದ್ದಾರೆ ಅವರಿಂದ ಟ್ಯಾಕ್ಸ್ ಕಲೆಕ್ಟ್ ಮಾಡಿ. 6 ಸಾವಿರದಿಂದ ಕೆಳಗೆ ಇರುವವರಿಗೆ ಸಂಪೂರ್ಣ ತೆಗೆದು ಹಾಕಬೇಕು. ಜರ್ನಲಿಸ್ಟ್ 4 ರಿಂದ 6000 ರೂಪಾಯಿಗಳವರೆಗೆ ಏನು ಸಂಬಳ ತೆಗೆದುಕೊಳ್ಳುತ್ತಾರೆ ಅವರಿಗೆ ಪ್ರೊಫೆಷನಲ್ ಟ್ಯಾಕ್ಸ್ 50 ರೂಪಾಯಿ ಇದ್ದುದನ್ನು 60 ರೂಪಾಯಿಗಳಿಗೆ ಹೆಚ್ಚು ಮಾಡಿದಿರಿ. 6 ಸಾವಿರ ರೂಪಾಯಿಗಳಿಗೆ ಮೇಲೆ ಇರುವವರಿಗೆ 70 ರೂಪಾಯಿ ಮಾಡಿದಿರಿ. ಅದಕ್ಕೆ ನನ್ನ ಪ್ರಾರ್ಥನೆ ಇಷ್ಟೇ, ದಯವಿಟ್ಟು 4ರಿಂದ 6 ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವವರಿಗೆ ಉಚಿತ ಮಾಡಿಕೊಡಬೇಕು.

ಶ್ರೀ ಡಿ. ಹಲಗೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರದಲ್ಲಿ ತಿಳಿಸಿದಂತೆ ಅನೇಕ ರಿಯಾಯಿತಿ-ವಿನಾಯಿತಿಗಳನ್ನು ಕೊಟ್ಟಿರುವುದನ್ನು ಸ್ವಾಗತಿಸುತ್ತಾ, ಇದರ ಜೊತೆಗೆ ಅನೇಕ ಮಾನ್ಯ ಸದಸ್ಯರು ಹೇಳಿದ ಹಾಗೆ ವ್ಯವಸಾಯಗಾರರಿಗೆ ನಾಡಿನ ಜನರಿಗೆ ಅನ್ನ ನೀಡುವ ರೈತರಿಗೆ' ಏನಾದರೂ ವಿನಾಯಿತಿ ಇದೆಯೇ ಎಂದರೆ ಕಂಡು ಬರಲಿಲ್ಲ. ಈಗ ಗೊಬ್ಬರದ ಧಾರಣೆ ಇಷ್ಟೊಂದು ಏರಿರುವಾಗ ಕೇಂದ್ರ ಸರ್ಕಾರ ಸ್ವಲ್ಪ ಭಾಗ ಕೊಟ್ಟಿರುವಾಗ ಸಾವಿರಾರು ಕೋಟಿ ರೂಪಾಯಿಗಳ ಬಡ್ಜೆಟ್ಟಿನಲ್ಲಿ 50 ಕೋಟಿ ರೂಪಾಯಿಗಳನ್ನಾದರೂ ವ್ಯವಸಾಯಗಾರರಿಗೆ ರಸಗೊಬ್ಬರಕ್ಕೋಸ್ಕರ ಸಬ್ಸಿಡಿ ಕೊಟ್ಟು ರೈತ ಸಮುದಾಯವನ್ನು ಸಂತೋಷಪಡಿಸಬೇಕು. ಅವನು ಹೆಚ್ಚು ಬೆಳೆ ಬೆಳೆಯುವುದಕ್ಕೆ ಪ್ರೋತ್ಸಾಹಿಸಬೇಕು. ಎರಡನೆಯದಾಗಿ, ನೀರಾವರಿ ಪಂಪು ಸೆಟ್ಟುಗಳಿಗೆ ಕೇಂದ್ರ ಸರ್ಕಾರ ಏನು ಹೇಳಿದೆ ಅದು ಆಗದೆ ಹಿಂದೆ ರಾಜ್ಯದಲ್ಲಿ ಏನು ಇತ್ತು 5 ಹೆಚ್.ಪಿ.ವರೆಗೆ ಉಚಿತ ವಿದ್ಯುತ್ ಸೌಲಭ್ಯ ಕೊಡಬೇಕೆಂಬುದು ಮತ್ತು ಅದಕ್ಕೆ ಉಪಯೋಗಿಸತಕ್ಕ ಪಿವಿಸಿ ಪೈಪ್, ಬೋರ್‌ವೆಲ್‌ಗಳಿಗೆ ಹಾಕತಕ್ಕ ಪೈಪುಗಳಿಗೆ ಸುಂಕ ವಿನಾಯಿತಿ ಕೊಡತಕ್ಕದ್ದು. ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳು ಕೆಟ್ಟು ಸಾರಿಗೆ ವ್ಯವಸ್ಥೆ ಇಲ್ಲ. ಹಿಂದೆ ಹೋಗುತ್ತಿದ್ದ ಸಾರಿಗೆ ವ್ಯವಸ್ಥೆಯೂ

ಇವತ್ತು ಇಲ್ಲದಿರುವುದರಿಂದ ಹೆಚ್ಚಿನ ಸಾರಿಗೆ ವ್ಯವಸ್ಥೆಯನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಡತಕ್ಕದ್ದು ಆಗಬೇಕು. ಅಭಿವೃದ್ಧಿ ಮತ್ತು ಹೈದರಾಬಾದ್ ಅಭಿವೃದ್ಧಿ ಬಗೆಗೆ ಹೇಳಿದಿರಿ. ಆದರೆ ಬಯಲುಸೀಮೆ ಮಲೆನಾಡು ಅಭಿವೃದ್ಧಿಯನ್ನು ಮರೆತ ಹಾಗೆ ಇದೆ. ಎಲ್ಲರನ್ನೂ ಮರೆತ ಹಾಗೆ ಕಾಣುತ್ತದೆ. ದಯವಿಟ್ಟು ಬಯಲು ಸೀಮೆ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಾರಿಗೆ ವ್ಯವಸ್ಥೆ ಮಾಡತಕ್ಕದ್ದು.

ಶ್ರೀ ಷಫಿ ಅಹಮದ್:- ಉತ್ತರದಲ್ಲಿ ಸಾಕಷ್ಟು ಹೇಳಿದ್ದೀರಿ. ಆದರೆ ಅರ್ಬನ್ ಏರಿಯ ಬಗ್ಗೆ ಮುಖ್ಯವಾಗಿ ನಾನ್‌ಸ್ಲಂನಲ್ಲಿ ವಾಸಿಸುತ್ತಿರುವ ಜನಗಳಿಗೆ ಹರಿಜನ ಬಸ್ತಿಗಳಿಗೆ ಟ್ರೈ ಕಲರ್ ಕಾರ್ಡ್ ಕೊಡುತ್ತಿಲ್ಲ. ಆದರ ಬಗ್ಗೆ ವಿಶ್ಲೇಷಣೆ ಮಾಡಿಲ್ಲ.

ಏಕೆಂದರೆ ಇವತ್ತು ಟ್ರೈ ಕಲರ್ ಕಾರ್ಡ್ ಬಹಳ ಮುಖ್ಯ. ಅದರ ಬಗ್ಗೆ ಹೇಳಬೇಕು. ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಒಂದು ಕೋಟಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದು ಈಗ ಇವತ್ತು 2 ಕೋಟಿ ರೂಪಾಯಿ ಬಡ್ಜೆಟ್‌ನಲ್ಲಿ ಅಳವಡಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ಅದನ್ನು ಬಿಡುಗಡೆ ಮಾಡಬೇಕು. ಮುಖ್ಯವಾಗಿ ಮಲೆನಾಡು ಹಾಗೂ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಘೋಷಣೆ ಮಾಡಿದ್ದೀರಿ. ಮಾನ್ಯ ವೆಂಕಟಪ್ಪನವರು ಕೋಲಾರ, ಮಂಡ್ಯ ಮತ್ತು ಚಿತ್ರದುರ್ಗ ಹಾಗೂ ಬೆಂಗಳೂರು ಅರ್ಬನ್ ಜಿಲ್ಲೆಯವರು ಬಹಳ ಮಟ್ಟಿಗೆ 2 ವರ್ಷದಿಂದ ನಾವು ಒತ್ತಾಯ ಮಾಡುತ್ತಿದ್ದೇವೆ. ರಾಯಲ್ ಸೀಮಾ ಏರಿಯಾ ಬೆಲ್ಟ್‌ನಲ್ಲಿ ವಾಸ ಮಾಡುವ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಅದರಲ್ಲೂ ತುಮಕೂರು, ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇರುವುದರಿಂದ ಇದರ ಬಗ್ಗೆ ಸರ್ಕಾರ ಕಾಳಜಿ ವಹಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಗ್ರಾನೈಟ್ ಲೂಟಿ ಬಗ್ಗೆ ಸರ್ಕಾರದ ನೀತಿ ಏನು ? ಈಗ ಇದರ ಬಗ್ಗೆ ಏನು ಮಾಡಬೇಕೆಂದು ಹೊರಟಿದ್ದೀರಿ ? ಮತ್ತು ಗಡಿ ಪ್ರದೇಶ ಅಭಿವೃದ್ಧಿ ಬಗ್ಗೆ ಹೆಚ್ಚಿನ ಹಣವನ್ನು ಕೇಳಿದ್ದೇವೆ. ಆದರ ಬಗ್ಗೆ ಉತ್ತರ ಕೊಡಬೇಕು. ಇನ್ನು ಆಶ್ರಯ ಯೋಜನೆ ಬಗ್ಗೆ ನಮ್ಮ ಜಿಲ್ಲೆಯಲ್ಲಿ ನಿವೇಶನ ಕೊಂಡುಕೊಳ್ಳಲು ಹಣ ಇಲ್ಲ ಇದರ ಬಗ್ಗೆ ಏನು ? ಕೃಷ್ಣ ನೀರು ಹಂಚಿಕೆ ಬಗ್ಗೆ ಸರ್ಕಾರದ ನೀತಿ ಏನು ? ಬಚಾವತ್ ತೀರ್ಪಿನ ಬಗ್ಗೆ ಸರ್ಕಾರ ಕೈಗೊಂಡ ಕ್ರಮ ಏನು ? ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಕುಳಿತು ತೀರ್ಮಾನ ತೆಗೆದುಕೊಳ್ಳಬೇಕೆಂದು ಇದ್ದಿರಿ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಕಾವೇರಿ ನದಿ ನೀರಿನ ವಿಷಯವಾಗಿ, ಕಾವೇರಿ ನ್ಯಾಯ ಮಂಡಲಿ ತೀರ್ಮಾನದ ಬಗ್ಗೆ ಸರ್ಕಾರದ ನೀತಿ ಏನು ? ನಿಮ್ಮ ಮಂತ್ರಿ ಮಂಡಲದ ತೀರ್ಮಾನ ಕಾವೇರಿ, ಕೃಷ್ಣ ನೀರಿನ ಬಗ್ಗೆ ಏನು ಎಂದು ಪ್ರಕಟ ಇನ್ನೂ ಆಗಿಲ್ಲ. ಮತ್ತು ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ ಇವತ್ತಿನವರೆಗೂ ಆಯವ್ಯಯದಲ್ಲಿ ಸರಿಯಾದ ಮಾರ್ಗದರ್ಶನ ಇಲ್ಲ. ಕೇಂದ್ರದಲ್ಲಿ ಇದು ಆಗುತ್ತದೆಯೋ ಇಲ್ಲವೋ, ಇಲ್ಲ ಎಂದರೆ ಇಲ್ಲ ಎಂದು ಹೇಳಿ. ಮತ್ತು ಅನೇಕ ರೈಲ್ವೆ ಬೇಡಿಕೆಗಳ ಬಗ್ಗೆ ಕೇಂದ್ರದ ಜೊತೆ ಮಾತನಾಡುತ್ತೇವೆಂದು ಹೇಳಿದ್ದು ಪತ್ರಿಕೆಗಳಲ್ಲಿ ಬಂದಿದೆ. ಈ ಸದನದಲ್ಲಿ ನಿಮ್ಮ ನಿಲುವು ಏನು ? ಚಾಮರಾಜನಗರ-ಮೆಟ್ಟುಪಾಳ್ಯಂ ಮಾರ್ಗ, ಬೆಂಗಳೂರು ವೃತ್ತ ರೈಲ್ವೆ ವಿಚಾರವಾಗಿ ಸರ್ಕಾರದ ನೀತಿ ಏನು ?

ಶ್ರೀ ಆರ್. ದಯಾನಂದ ರಾವ್:- ಮಾನ್ಯ ಅಧ್ಯಕ್ಷರೇ, ಆಶ್ರಯ ಯೋಜನೆ ಅಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸೈಟು ಹಂಚಿದ್ದೀರಿ. ಬೆಂಗಳೂರು ನಗರ ಪ್ರದೇಶದಲ್ಲಿ ಎಷ್ಟೋ ಜನ ಬಡವರು ಇದ್ದಾರೆ. ಮತ್ತು ಬಿಡಿಎ ಮೂಲಕ ಸೈಟ್ ಕೊಡುವುದು ನಿಲ್ಲಿಸಿದ್ದಾರೆ. ಆದರೆ ಇವರ ಬಗ್ಗೆ ಸರ್ಕಾರ ಚಿಂತನೆ ಮಾಡಿಲ್ಲ. ಇವರಿಗೂ ಸರ್ಕಾರ ಸೈಟ್‌ಗಳನ್ನು ಒದಗಿಸಿಕೊಡುತ್ತದೆಯೋ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಗೊಬ್ಬರದ ಬೆಲೆ ಏರಿರತಕ್ಕ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕೇಂದ್ರ ಸರ್ಕಾರದ ಜೊತೆ ತಾವೂ ಕೂಡ ಕಾಂಪೀಟ್ ಮಾಡುತ್ತಿದ್ದೀರಿ. ಗೊಬ್ಬರದ ಮೇಲೆ ಶೇಕಡ 2 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಇದೆ. ನೀವು ಕೊನೆಯ ಪಕ್ಷ ಅದನ್ನಾದರೂ ಮಾಡಿ ಎಂದು ಹೇಳಿದ್ದೆ. ಅದರ ಬಗ್ಗೆ ಏನೂ ಹೇಳಿಲ್ಲ. ಬಡ್ಜೆಟ್‌ನಲ್ಲಿ ಇದನ್ನು ತೆಗೆಯುತಕ್ಕ ಮನಸ್ಸು ಮಾಡಿಲ್ಲ. ಗೊಬ್ಬರದ ಮೇಲಿರುವ 2 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್‌ನ್ನು ತೆಗೆದು ಹಾಕಬೇಕು. ಎರಡನೆಯದಾಗಿ, ನಮ್ಮ ಜಿಲ್ಲೆ ಬಗ್ಗೆ ಸತತವಾಗಿ ಹೇಳುತ್ತಿದ್ದೇವೆ. ಕೋಲಾರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಬಗ್ಗೆ ಹೇಳುತ್ತಿದ್ದೇವೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯಿಂದ ಆ ಭಾಗಕ್ಕೆ ಪ್ರಯೋಜನವಾಯಿತು. ಮುಖ್ಯಮಂತ್ರಿಗಳು ಮಲೆನಾಡು ಅಭಿವೃದ್ಧಿ ಬಗ್ಗೆ ಮಾಡಿದರು. ಅವರಿಗೆ ಅನುಕೂಲ ಆಯಿತು. ಏನು ಅನುಕೂಲ ಆಗಿದೆ ಎಂದರೆ, ಕೊನೇ ಪಕ್ಷ ಏನೋ ಆಗಿದೆ. ಇವತ್ತು ನಮ್ಮ ಈ ಜಿಲ್ಲೆಗಳಿಗೆ ಏನೂ ಇಲ್ಲ ಬರೀ ಕೈಗೆ ಚಿಪ್ಪು, ಖಾಲಿ ಚಿಪ್ಪು ಕೊಟ್ಟಿದ್ದೀರಿ. ಆದ್ದರಿಂದ ಈ ಭಾಗಗಳಿಗೆ ವಿಶೇಷವಾಗಿ ಏನಾದರೂ ತಾವು ಕಾರ್ಯಕ್ರಮ ಹಾಕಿ ಈ ಭಾಗಗಳನ್ನು ಅಭಿವೃದ್ಧಿ ಮಾಡುವುದಕ್ಕೆ ದಯವಿಟ್ಟು ಪ್ರಯತ್ನ ಮಾಡುತ್ತೀರಾ ? ಇನ್ನು ನಮ್ಮ ಭಾಗದಲ್ಲಿ ಕೆರೆಗಳಲ್ಲಿ ಹೂಳು ತೆಗೆಯುತಕ್ಕ ವಿಶೇಷ ಎಕ್ಸ್‌ಪರಿಮೆಂಟ್ ನಡೆದು ಅದು ಸಕ್ಸಸ್‌ಫುಲ್ ಆಗಿದೆ. ಕೊನೆಯ ಪಕ್ಷ ಈ ಕೆರೆಗಳಲ್ಲಿ ಹೂಳು ತೆಗೆಯುತಕ್ಕ ವಿಶೇಷ ಕಾರ್ಯಕ್ರಮವನ್ನು ಹಾಕಿ ಆ ಭಾಗದ ರೈತರಿಗೆ ಅನುಕೂಲ ಮಾಡುತ್ತೀರಾ ?

ಶ್ರೀ ಹಂಪನಗೌಡ ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೇ, ನೆರೆ ಹಾವಳಿಯಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 90 ಹಳ್ಳಿಗಳು ನೆಲಸಮವಾಗಿವೆ. ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರೆಂಬುದನ್ನು ಹೇಳಿಲ್ಲ. ಸುಮಾರು 90 ಹಳ್ಳಿಗಳ ಪುನರ್ ವಸತಿ ಕೆಲಸದ ಬಗ್ಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ? ಭೂಮಿ ಖರೀದಿ ಮಾಡುವುದಕ್ಕೆ ಎಷ್ಟು ಹಣ ಒದಗಿಸಿದ್ದೀರಿ ಎಂಬುದನ್ನು ಹೇಳಿಲ್ಲ. ಆಶ್ರಯ ಯೋಜನೆಯಲ್ಲಿ ನಮ್ಮ ಜಿಲ್ಲೆಯಲ್ಲಿ 500 ಮನೆಗಳನ್ನು ಕಟ್ಟಬೇಕೆಂದು ತಾವು ತಿಳಿಸಿದ್ದೀರೆಂದು ಹೇಳಿದ್ದೀರಿ. ಆದರೆ ನಮ್ಮ ಜಿಲ್ಲಾಧಿಕಾರಿಗಳು 500 ಮನೆ ಕಟ್ಟುವುದಕ್ಕೆ ಆಗುವುದಿಲ್ಲವೆಂದು ವರದಿ ಕೊಟ್ಟಿದ್ದಾರೆ. 15 ಸಾವಿರ ರೂಪಾಯಿ ಎಸ್ಟಿಮೇಟೆಡ್ ಕಾಸ್ಟ್ ಕಡಿಮೆ ಇದೆ, ಅದನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಈ ಹಣವನ್ನು ಹೆಚ್ಚು ಮಾಡುತ್ತೀರಾ ಎಂದು ಹೇಳಬೇಕು.

ಶ್ರೀ ಬಾಬೂರಾವ್ ಚೌಹಾಣ್:- ಮಾನ್ಯ ಅಧ್ಯಕ್ಷರೇ, ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಹೈದರಾಬಾದ್ ಕರ್ನಾಟಕ ಬೋರ್ಡ್‌ಗೆ 50 ಕೋಟಿ ರೂಪಾಯಿ ಕೊಟ್ಟರು. ಬಂಗಾರಪ್ಪನವರು ಬಂದು 65 ಕೋಟಿ ರೂಪಾಯಿ ಮಾಡಿದರು. ಮಾನ್ಯ ಮುಖ್ಯಮಂತ್ರಿಯವರಿಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ಇದಕ್ಕೆ 15 ಕೋಟಿ ಜಾಸ್ತಿ ಮಾಡಿ 80 ಕೋಟಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ತುಂಗ ಮೇಲ್ದಂಡೆ ಯೋಜನೆಗೆ ಒಂದು ತಿಂಗಳಲ್ಲಿ ಮಂಜೂರಾತಿಯನ್ನು ಕೇಂದ್ರದಿಂದ ಮಾಡಿಸುತ್ತೇನೆಂದು ಹೇಳಿದರು. ಆದರೆ ಇನ್ನೂ ಆಗಿಲ್ಲ. ಈ ಸಾರಿ 50 ಕೋಟಿ ರೂಪಾಯಿ ಹಣ ಒದಗಿಸುತ್ತೇವೆಂದು 6 ವರ್ಷದಲ್ಲಿ ಈ ಯೋಜನೆ ಪೂರೈಸುತ್ತೇವೆಂದು ಹೇಳಿದ್ದೀರಿ. ಆದರೆ ತಾವು ಕೇವಲ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. 2 ಲಕ್ಷ 34 ಸಾವಿರ ಎಕರೆ ನೀರಾವರಿ ಆಗುವ ಈ ಯೋಜನೆಗೆ 50 ಕೋಟಿ ರೂ.ಗಳನ್ನು ಒದಗಿಸುತ್ತೇವೆಂದು ಹೇಳಿದ್ದೀರಿ. ಕಡೇ ಪಕ್ಷ 25 ಕೋಟಿ ರೂಪಾಯಿಯನ್ನು ಒದಗಿಸುತ್ತೀರಾ ? ಇನ್ನು ಸಣ್ಣ ನೀರಾವರಿ ಬಗ್ಗೆ ಹೇಳಬೇಕೆಂದರೆ ಮೊನ್ನೆ

ಮಹಾಪೂರ ಬಂದು ನನ್ನ ತಾಲ್ಲೂಕಿನಲ್ಲಿ 51 ಕೆರೆಗಳು ಒಡೆದು ಹೋಗಿವೆ. ಮಳೆ ಬಂದರೆ ನೀರು ನಿಲ್ಲುವುದಿಲ್ಲ. ರೈತರ ಜಮೀನು ಕೊಚ್ಚಿ ಹೋಗುತ್ತವೆ. ಅಲ್ಲಿ ಮೇಂಟೆನೆನ್ಸ್ ಮಾಡುವುದಕ್ಕೆ, ರೆಸ್ಟೋರ್ ಮಾಡುವುದಕ್ಕೆ ಮೈನರ್ ಇರಿಗೇಷನ್‌ಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ವೈ ಮೇಟಿ:– ಮಾನ್ಯ ಅಧ್ಯಕ್ಷರೇ, ಒಳಉಡುಪುಗಳಿಗೆ ಟ್ಯಾಕ್ಸ್ ಬಗ್ಗೆ ಹೇಳಿದ್ದಾರೆ. ಅದರಲ್ಲಿ ಹತ್ತಿ ಬಟ್ಟೆ ಬಿಟ್ಟು ಬೇರೆ ಎಲ್ಲದ್ದಕ್ಕೂ ರಿಯಾಯಿತಿ ಕೊಟ್ಟಿದ್ದಾರೆ. ಶ್ರೀಮಂತರ ಉಡುಪಿಗೆ ರಿಯಾಯಿತಿ ಕೊಟ್ಟಿದ್ದೀರಿ. ಬಡವರು, ರೈತರು, ಹಿಂದುಳಿದ ವರ್ಗದವರು ಹಾಕುವ ಹತ್ತಿ ಬಟ್ಟೆಗೆ ರಿಯಾಯಿತಿ ಇಲ್ಲ. ಇನ್ನು ಏರ್‌ಕಂಡೀಷನರ್ಸ್‌ಗೆ ರಿಯಾಯಿತಿ ಕೊಟ್ಟಿದ್ದೀರಿ. ರೈತರು ಬಿಸಿಲಿನಲ್ಲಿ ಸಾಯುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ವ್ಯಾಪಾರಸ್ಥರು ರೈತರ ಹೆಸರಿನಲ್ಲಿ, ರೈತರಿಂದ ಉತಾರ ತೆಗೆದುಕೊಂಡು ಹೋಗಿ ಪೈಪ್ ತಂದು, ಅದಕ್ಕೆ ಮಾರಾಟ ತೆರಿಗೆ ಹಾಕಿ ರೈತರಿಗೆ ಪೈಪು ಕೊಡುತ್ತಾರೆ. ತಾವು 3 ಪರ್ಸೆಂಟ್ ಟ್ಯಾಕ್ಸ್ ಮಾಡಿದ್ದೀರಿ. ತಾವು ಕಂಪ್ಲೀಟ್ ರೈತರ ಪೈಪ್ ಮೇಲೆ ಟ್ಯಾಕ್ಸ್ ಇಳಿಸದೇ ಇದ್ದರೆ ಧರಣಿ ಮಾಡಬೇಕಾಗುತ್ತದೆ. ಇದು ಸರ್ಕಾರಕ್ಕೆ ನಾಚಿಕೇಗೇಡು ಎಂದು ಹೇಳುತ್ತೇನೆ. ಇದು ರೈತ ವಿರೋಧಿ ಸರ್ಕಾರ ಎಂದು ಹೇಳಬೇಕಾಗುತ್ತದೆ. ಮತ್ತೆ ಇಲ್ಲಿ ಕಾರ್ಯಕಲಾಪ ನಡೆಯುವುದಕ್ಕೆ ನಾವು ಬಿಡುವುದಿಲ್ಲ. ಇದು ರೈತ ವಿರೋಧಿ ಸರ್ಕಾರ ಎಂದು ಹೇಳಬೇಕಾಗುತ್ತದೆ.

ಶ್ರೀ ವಿನಯಕುಮಾರ್ ಸೊರ್ಕೆ:– ಮಾನ್ಯ ಅಧ್ಯಕ್ಷರೇ, ಅಕ್ಷಯ ಯೋಜನೆಯನ್ನು ಮುಂದುವರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ. ಗ್ರಾಮೀಣ ಪ್ರದೇಶದಲ್ಲಿ ಒಂದೊಂದು ಶಾಸಕರ ಕ್ಷೇತ್ರದಲ್ಲಿ ಸಾಧಾರಣ 15 ಸಾವಿರ ಹೆಣ್ಣು ಮಕ್ಕಳು, ಆರ್ಥಿಕವಾಗಿ ಹಿಂದುಳಿದವರ ಹೆಣ್ಣು ಮಕ್ಕಳು ತಿಂಗಳಿಗೆ ಒಂದು ಸಲ ಶಾಲೆಗೆ ಬಂದು ಹಣವನ್ನು ಒದಗಿಸುವ, ಮಕ್ಕಳ ವಿದ್ಯಾಭ್ಯಾಸಕ್ಕೆ ಹಣವನ್ನು ಒದಗಿಸುವ ಕಾರ್ಯಕ್ರಮ ನಡೆಯುತ್ತಿದೆ. ಇವತ್ತು ಪ್ರತಿಯೊಂದು ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು ಮನೆಯಿಂದ ಹೊರಗೆ ಬರುವ ಅವಕಾಶ ತುಂಬಾ ಕಡಿಮೆ. ಆದರೆ ಹೆಣ್ಣು ಮಕ್ಕಳು ಪ್ರತಿ ತಿಂಗಳು ಬರುವ ಸಂದರ್ಭದಲ್ಲಿ ಅಂತಹವರಿಗೆ ಮೋಟಿವೇಷನ್ ಮಾಡುವ ಕಾರ್ಯಕ್ರಮ ಆಗುತ್ತದೆ. ಈ ಕಾರ್ಯಕ್ರಮವನ್ನು ಮುಂದುವರಿಸಬೇಕೆಂದು ಹೇಳುತ್ತೇನೆ. ಮತ್ತು ನಮ್ಮಲ್ಲಿ ಸಣ್ಣ ರೈತರು ಸೀಮೆ ಎಣ್ಣೆ ಪಂಪುಗಳನ್ನು ಉಪಯೋಗ ಮಾಡುತ್ತಿದ್ದಾರೆ. ಇವತ್ತು ದೀಪ ಉರಿಸುವ ಎಣ್ಣೆಗೂ, ಅದೇ ರೀತಿ ಪಂಪು ಎಣ್ಣೆಗೂ ಕೂಡ ಸ್ವಲ್ಪ ಮಟ್ಟಿಗೆ ದರ ವ್ಯತ್ಯಾಸ ಇದೆ. ಕೇರಳದಲ್ಲಿ ಸೀಮೆಎಣ್ಣೆಯನ್ನು ರೈತರಿಗೆ ರಿಯಾಯಿತಿ ದರದಲ್ಲಿ ಕೊಡುತ್ತಿದ್ದಾರೆ. ದೀಪ ಉರಿಸುವುದಕ್ಕೆ ಇರುವ ಎಣ್ಣೆಗೆ ಏನು ಕ್ರಯ ಇದೆ ಆ ಕ್ರಯದಲ್ಲೇ ಪಂಪುಗಳಿಗೆ ರೈತರು ಉಪಯೋಗ ಮಾಡುವ ಎಣ್ಣೆಯನ್ನು ಕೊಡುತ್ತಿದ್ದಾರೆ. ಹಲವಾರು ಸಂದರ್ಭದಲ್ಲಿ ಮನವಿ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈ ರೈತರಿಗೆ ಸೀಮೆಎಣ್ಣೆಯನ್ನು ರಿಯಾಯಿತಿ ದರದಲ್ಲಿ ಒದಗಿಸಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ:– ನಿನ್ನೆ ದಿವಸ ನಾನು ಮಾತನಾಡುವಾಗ ಎರಡು–ಮೂರು ವಿಷಯಗಳನ್ನು ಈ ಸದನದ ಗಮನಕ್ಕೆ ತಂದಿದ್ದೆ. ಬಹಳ ಮುಖ್ಯವಾಗಿ 1991ರ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ಮಳೆಯಾಗಿ 12600 ಮನೆಗಳು ಬಿದ್ದು ಹೋದವು. ಅದೇ ರೀತಿಯಾಗಿ ನಮ್ಮ ಪಕ್ಕದ ತಾಲ್ಲೂಕಾದ ಗೌರಿಬಿದನೂರಿನಲ್ಲಿ ಕೂಡ ಮನೆಗಳು ಬಿದ್ದು ಹೋದವು. ನಮ್ಮ ತಾಲ್ಲೂಕಿನಲ್ಲಿ ಒಂದೇ ಒಂದು ಮನೆಯನ್ನು ಕಟ್ಟಿಕೊಡಲಿಲ್ಲ. ಆದರೆ ಗೌರಿಬಿದನೂರು ತಾಲ್ಲೂಕಿನಲ್ಲಿ ಐದು ಸಾವಿರ ಮನೆಗಳಿಗೆ flood damage ಸಲುವಾಗಿ ಸ್ಯಾಂಕ್ಷನ್ ಮಾಡಿದ್ದೀರಿ. ಈ ತಾರತಮ್ಯವನ್ನು ಏಕೆ ಮಾಡಿದ್ದೀರಿ ? ನನ್ನ ತಾಲ್ಲೂಕು ಮತ್ತು ಗೌರಿಬಿದನೂರು ತಾಲ್ಲೂಕು, ಎರಡರಲ್ಲೂ ಕೂಡ ಒಂದೇ ಸಾರಿ ಮಳೆ ಬಂತು. ಅವರಲ್ಲಿ 13–14 ಸಾವಿರ ಮನೆಗಳು ಬಿದ್ದು ಹೋದವು ಮತ್ತು ನಮ್ಮಲ್ಲಿ 12600 ಮನೆಗಳು ಬಿದ್ದು ಹೋದವು ಎಂದು ಮಂತ್ರಿಗಳು ಸದನದಲ್ಲಿ ನನಗೆ ಉತ್ತರ ಕೊಟ್ಟಿದ್ದಾರೆ. ಒಂದೇ ಒಂದು ಮನೆಯನ್ನು ನನ್ನ ತಾಲ್ಲೂಕಿನಲ್ಲಿ

ತೆಗೆದುಕೊಂಡಿಲ್ಲವಲ್ಲಾ ಏನು ಉದ್ದೇಶ? ಇದರ ಬಗ್ಗೆ ತಾವು ದಯವಿಟ್ಟು ಉತ್ತರ ಕೊಡಬೇಕು. ಒಂದು ಪಕ್ಷ ವಿರೋಧ ಪಕ್ಷದವರು ಅಲ್ಲಿಂದ ಬಂದಿದ್ದಾರೆ ಎಂಬುದು ಇದ್ದರೆ ನಾನು ಇವತ್ತೆ ಬೇಕಾದರೆ ರಾಜೀನಾಮೆ ಕೊಡುತ್ತೇನೆ. ಆ ಮನೆಗಳನ್ನಾದರೂ ಬಡವರಿಗೆ ಕಟ್ಟಿಕೊಡುತ್ತೀರಾ, ದಯವಿಟ್ಟು ಹೇಳಬೇಕು. ಎರಡನೆಯದಾಗಿ ಗುಲ್ಬರ್ಗಾ, ರಾಯಚೂರಿನಲ್ಲಿ ಟಾಡಿಯನ್ನು ತೆಗೆದಿದ್ದೀರಿ. ನಾನು ಟಾಡಿಯನ್ನು ಕೊಡಿ ಎಂದು ಕೇಳುವವನಲ್ಲ. ತಮಗೆ ಗೊತ್ತಿದೆ ಕ್ಲೋರಲ್ ಹೈಡ್ರೈಟ್ ಹಾಕಿ ಮಾಡುತ್ತಾರೆ ಎಂದು. ಇದನ್ನು ಮಾಡುವವರು ಕಂಟ್ರಾಕ್ಟರ್ಸ್, ಟ್ಯಾಪರ್ಸ್ ಅಲ್ಲ. ಈ ಟ್ಯಾಪರ್ಸ್‌ಗೆ ಏನಾದರೂ ಅಲ್ಟರ್‌ನೇಟ್ ಅರೇಂಜ್‌ಮೆಂಟ್ಸ್‌ನ್ನು ತಾವು ಮಾಡುತ್ತೀರಾ? ಇವರಿಗೆ ಬೇರೆ ಏನೂ ಕೆಲಸ ಬರುವುದಿಲ್ಲ. ಟ್ಯಾಪರ್ಸ್, ವೆಂಡರ್ಸ್, ಕ್ಲೀನರ್ಸ್, ಸಹಸ್ರಾರು ಜನ ಇವತ್ತು ಹೊಟ್ಟೆಗಿಲ್ಲದೇ ಇದ್ದಾರೆ. ಇವರಿಗೆ ಬೇರೆ ಏನಾದರೂ ವ್ಯವಸ್ಥೆಯನ್ನು ತಾವು ಮಾಡುತ್ತೀರಾ? ಇನ್ನೊಂದು ಈ ಅಗ್ರಿಕಲ್ಚರಲ್ ಪ್ರೊಡಕ್ಷನ್ ಇನ್‌ಸೆಂಟಿವ್ ಸ್ಕೀಮ್ ಅಂತ ಹೇಳಿ ಈ ಸಹಕಾರ ಸಂಘಗಳಲ್ಲಿ ಬಡ್ಡಿ ಸಬ್ಸಿಡಿ ಮಾಡುವುದಕ್ಕೆ ಆಗುವುದಿಲ್ಲ ಅಂತ ಹೇಳಿ, ಇದನ್ನು ತಂದಿರಿ. ಈಗ ಅವರಲ್ಲಿ ಬೇಕಾದಷ್ಟು ಸಾಲ ಇದೆ. ಸಹಕಾರ ಬೇಡಿಕೆ ವಿಷಯ ಬಂದಾಗ ನಾನು ಮಾತನಾಡುತ್ತೇನೆ. ಆದರೆ ಈಗ ನನಗೆ ಗೊತ್ತಾಗಿದ್ದು ಏನೆಂದರೆ ಬರೀ small and ಮಾರ್ಜಿನಲ್ ಫಾರ್ಮರ್ಸ್‌ಗೆ ಮಾತ್ರ agricultural development incentives ಕೊಡುತ್ತೀರಿ ಎಂದು. ಇದನ್ನು ಎಲ್ಲರಿಗೂ ಅನ್ವಯಿಸುವ ಹಾಗೆ ದಯವಿಟ್ಟು ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಯವರು):– ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸದಸ್ಯರು ಕೆಲವು ಸ್ಪಷ್ಟೀಕರಣವನ್ನು ಮತ್ತು ವಿವರಗಳನ್ನು ಕೇಳಿದ್ದಾರೆ. ಮುಖ್ಯವಾಗಿ ಮಾಧುಸ್ವಾಮಿಯವರು, ಮೇಟಿಯವರು, ನಾರಾಯಣಸ್ವಾಮಿಯವರು ಸ್ವಲ್ಪ ಜೋರಾಗಿ ಮಾತನಾಡಿದ್ದಾರೆ. ಪ್ಲಾಸ್ಟಿಕ್ ಪೈಪ್ಸ್ ಮತ್ತು ಫಿಟ್ಟಿಂಗ್ಸ್ ಅದು ಹೆಚ್ಚಾಗಿ ವಾಟರ್ ಸಪ್ಲೈ ಸ್ಕೀಂ ಮತ್ತು ಇರಿಗೇಷನ ಪರ್ಪಸ್‌ಗೆ ಉಪಯೋಗ ಮಾಡತಕ್ಕಂಥಾದ್ದು. ಇದರಲ್ಲಿ conduit pipe ಮತ್ತು fittings ಈ ಟ್ಯಾಕ್ಸ್‌ನಲ್ಲಿ ಸೇರಿಲ್ಲ. ಈಗ ನಾವು ಏನು ಮಾಡಿದ್ದೇವೆ ಎಂದರೆ ಮೂರು ಪರ್ಸೆಂಟ್‌ನಿಂದ ಆರು ಪರ್ಸೆಂಟ್‌ಗೆ ಏರಿಸಿದ್ದೇವೆ. ಈಗ ತಮಿಳುನಾಡಿನಲ್ಲಿ ಎಷ್ಟಿದೆ ಎಂದರೆ 9.2 ಪರ್ಸೆಂಟ್ ಇದೆ. ಕೇರಳದಲ್ಲಿ 10 ಪರ್ಸೆಂಟ್, ಆಂಧ್ರಪ್ರದೇಶದಲ್ಲಿ 7.7 ಪರ್ಸೆಂಟ್, ಮಹಾರಾಷ್ಟ್ರದಲ್ಲಿ 8.96 ಪರ್ಸೆಂಟ್ ಇದೆ. ಸ್ವಲ್ಪ ಕೇಳಿ. ನಾವು ಹೇಳುವುದನ್ನು ಕೇಳಿ ಆಮೇಲೆ ಮಾತನಾಡೋಣ. ಆದರೂ ಕೂಡ ರೈತರ ವಿಚಾರದಲ್ಲಿ ನಾವು ಕಂಪೇರ್ ಮಾಡುವುದು ಬೇಡ ಎಂದು ಹೇಳಿ ನಾವು ಏನು ಏರಿಕೆಯನ್ನು ಮಾಡಿದ್ದೇವೆ, ಅದನ್ನು ಕೈಬಿಡುತ್ತೇನೆ. ಆ ಏರಿಕೆಯನ್ನು ಕೈಬಿಡುತ್ತೇನೆ. It will remain at three percent. ಆದ್ದರಿಂದ In the entire country this is the lowest percent.

ಆಮೇಲೆ ಈ ಏರಿಕೆಯನ್ನು ಕೈಬಿಡುವುದರಿಂದ ಬಹಳ ನಷ್ಟವಾಗುತ್ತದೆ. 110 ಲಕ್ಷ ರೂಪಾಯಿ ನಷ್ಟವಾಗುತ್ತದೆ. ಇನ್ನು ಅಲ್ಯುಮಿನಿಯಂದ್ದು ಮಾಡಿದ್ದೇನೆ. ಅದರಿಂದ ಎಷ್ಟು ಹಣ ನಿಮಗೆ ಹೋಗುತ್ತದೆ ಎಂದು ಮಾನ್ಯ ಚಂದ್ರೇಗೌಡರು ಹೇಳಿದರು. Aluminium Utensils ನಿಂದ 120 ಲಕ್ಷ ಹೋಗುತ್ತದೆ. Wheat products ನಿಂದ 250 ಲಕ್ಷ ಹೋಗುತ್ತದೆ. ಆಮೇಲೆ concession in stamp duty ಏನು ಕೊಟ್ಟಿದ್ದೇವೆ, ಅದರಿಂದ ಸುಮಾರು 6 ಕೋಟಿ ರೂಪಾಯಿ ನಷ್ಟವಾಗುತ್ತದೆ. ಒಟ್ಟು ಸುಮಾರು 10 ಕೋಟಿ ರೂಪಾಯಿ ನಷ್ಟವಾಗುತ್ತದೆ.

I think bottling benefit, we have to assess.

ಅದನ್ನು ಯಶಸ್ವಿಯಾಗಿ ಮಾಡಬೇಕು. 750 ಕೋಟಿ ಎಕ್ಸೈಸ್ ರೆವಿನ್ಯೂ ಬರಬೇಕೆಂದು

ಮಾಡಿದ್ದೇವೆ. ಬಾಟ್ಲಿಂಗ್ ಕ್ಯಾನ್ಸಲ್ ಮಾಡಿದ್ದರಿಂದ. ನಮ್ಮ ಭೈರೇಗೌಡರು ಅಂಕಿಅಂಶ ಕೊಟ್ಟಿದ್ದಾರೆ, ಖಂಡಿತವಾಗಿಯೂ ಈ ಆದಾಯ ಜಾಸ್ತಿ ಬರಬೇಕು. ನಮ್ಮ ಭೈರೇಗೌಡರನ್ನು ಎಕ್ಸೈಸ್ ಕನ್ಸಲ್ಟೆಂಟ್ ಎಂದು ನೇಮಕ ಮಾಡಬೇಕಾಗುತ್ತದೆ. ಮತ್ತೆ ಕೆ.ಇ.ಬಿ. ಬಗ್ಗೆ ಇಲ್ಲಿ ಪ್ರಶ್ನೆ ಬಂತು. ಕೆ.ಇ.ಬಿ. ಬಜೆಟ್ ಏನಿದೆ ಎಂದು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು. 1992–93ರಲ್ಲಿ ಕೆ ಇ ಬಿ ಬಜೆಟ್ 171 ಕೋಟಿ ಕೊಡಲಾಗಿತ್ತು, 1993–94ರಲ್ಲಿ 308 ಕೋಟಿ ಪ್ರೊವೈಡ್ ಮಾಡಿದ್ದೇವೆ. This is the amount we have given. As against Rs. 171 crores, we have now provided Rs. 308 crores to KEB.

In the World Bank allocation, for 1992–93 for Transmission and Distribution Losses we had earmarked Rs. 91 crores. ಟ್ರಾನ್ಸಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಇಂಪ್ರೂವ್ ಮಾಡುವುದಕ್ಕೆ, 1992–93ರಲ್ಲಿ 91 ಕೋಟಿ ಇತ್ತು. ಏಕೆಂದರೆ, ನಾನು ಬರೀ ಭಾಷಣ ಮಾಡಿ ನಿಲ್ಲಿಸಿದರೆ ಸಾಲದು. ಇದಕ್ಕೆ ಬಜೆಟರಿ ಸಪೋರ್ಟ್ ಕೊಡದಿದ್ದರೆ, ನಮ್ಮ ಎಲ್ಲಾ ಭಾಷಣಗಳೂ ನಿರರ್ಥಕ. ಒಟ್ಟಾರೆ, ನಾನು ಭಾಷಣ ಮಾಡಿ ಕುಳಿತುಕೊಳ್ಳಬಹುದು, ನನಗೆ ತೃಪ್ತಿಯಾಗಬಹದು. ಆದರೆ, ಕರ್ನಾಟಕ ರಾಜ್ಯದ ಜನತೆಗೆ ತೃಪ್ತಿಯಾಗುವುದಿಲ್ಲ. ಈ ಸಿಸ್ಟಂ ಇಂಪ್ರೂವ್‌ಮೆಂಟ್ ಮಾಡಬೇಕೆಂದು ಹೇಳಿ, 91 ಕೋಟಿ ರೂಪಾಯಿಗಳನ್ನು 1992-93ರಲ್ಲಿ ಕೊಡಲಾಗಿದೆ. ಇದರಲ್ಲಿ ಟ್ರಾನ್ಸ್‌ಮಿಷನ್ಸ್ ಬರುತ್ತದೆ, ಪೈಪ್ಸ್ ಬರುತ್ತದೆ, ಮತ್ತು ಸಿಸ್ಟಂ ಇಂಪ್ರೂವ್‌ಮೆಂಟ್ ಹೀಗೆ ಬೇರೆ ಬೇರೆ ರೀತಿಯಲ್ಲಿ ಬರುತ್ತದೆ. ಇದರಿಂದ ರೈತರಿಗೆ ಸಾಕಷ್ಟು ಅನಾನುಕೂಲವಾಗಿದೆ, To reduce the Transmission losses and also to improve the present system, so that a vibrant system will be evolved; As against Rs. 91 crores in 1992–93, we have provided Rs. 161 crores in 1993–94. We have done it consciously.

ವಿದ್ಯುತ್ತನ್ನು ಸರಿಯಾಗಿ ಹಂಚುವುದಕ್ಕೆ ಸಾಧ್ಯವಿಲ್ಲದಿದ್ದರೆ, ಈ ಜನರೇಷನ್ ಮಾಡಿ ಯಾವುದೇ ಪ್ರಯೋಜನವಿಲ್ಲ. ಅದಕ್ಕೆ, ನಾವು ಪ್ಯಾರಲಲ್ ಆಗಿ ಸಿಸ್ಟಂ ಇಂಪ್ರೂವ್ ಮಾಡಬೇಕೆಂದು ಭಾಷಣ ಮಾಡುತ್ತಲೇ ಬಂದಿದ್ದೇವೆ. ಬಹಳ ಹಿಂದಿನಿಂದಲೂ ಬರೀ ಜನರೇಷನ್ ಮಾಡಿದರೆ ಸಾಲದು ಎಂಬ ಮಾತನ್ನು ಆಡುತ್ತಲೇ ಬಂದಿದ್ದೇನೆ. I had an opportunity to make up this kind of a big vaccum and we have done it. To strengthen KEB, in the KEB budget also, we have provided more money on the System improvement and Distribution system, ವರ್ಲ್ಡ್ ಬ್ಯಾಂಕ್‌ನಲ್ಲಿ ಅಷ್ಟು ಕೊಟ್ಟಿದ್ದರೂ ಕೂಡ, ಕೆ.ಇ.ಬಿ. ಬಜೆಟ್‌ನಲ್ಲಿಯೂ ಕೂಡ, we have provided more money.

1992–93ರಲ್ಲಿ 20 ಕೋಟಿ ಕೊಟ್ಟಿದ್ದರೆ, ಕೆಇಬಿ ಬಜೆಟ್‌ನಲ್ಲಿ, now, we have provided Rs. 45 crores. As against that, 40 ಕೋಟಿ ನಾವು ಕೊಟ್ಟಿದ್ದೇವೆ. ಇಷ್ಟೆಲ್ಲಾ ಹಣ ಏಕೆ ಕೊಟ್ಟಿದ್ದೇವೆಂದರೆ Sub–Stations, Express Lines, Transformers of higher capacity, improving the voltage capacity, ಇಂಪ್ರೂವ್‌ಮೆಂಟ್ ಮಾಡುವುದಕ್ಕಾಗಿ. ಆದ್ದರಿಂದ ಇದೊಂದು ಅದ್ವಿತೀಯ ರೀತಿಯಲ್ಲಿ ನಾವು ಸಿಸ್ಟಂಗೆ ಹೆಚ್ಚು ಹಣವನ್ನು ಹಾಕಿದ್ದೇವೆ. ಈ ರೀತಿ ಬೇರೆ ಬೇರೆ ರಂಗದಲ್ಲಿ ಬಲಪಡಿಸತಕ್ಕ ದೃಷ್ಟಿಯಲ್ಲಿ ಕ್ರಮ ಕೈಗೊಂಡಿದ್ದೇವೆ. ಈ ಸಮಸ್ಯೆಯ ವಿಚಾರದಲ್ಲಿ ಮಾನ್ಯ ಬೈರೇಗೌಡರು ಮತ್ತು ಇನ್ನೂ ಅನೇಕ ಸನ್ಮಾನ್ಯ ಸದಸ್ಯರು, ಈ ಕಡೆಯವರು, ಆ ಕಡೆಯವರೂ ಪ್ರತಿ ಸಾರಿ ಈ ಬಗ್ಗೆ ದೂರನ್ನು ಕೊಡುತ್ತಿದ್ದಾರೆ. ಇದರಿಂದ ಪರಿಹಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಜಿ.ಪಿ.ಗೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಏನಿದೆ, ಅದರ ಬಗ್ಗೆಯೂ ಪ್ರಸ್ತಾಪ ಇಲ್ಲಿ ಬಂತು. ನಾವು

ಇದನ್ನು ಬಿಡುಗಡೆ ಮಾಡುತ್ತಲೇ ಬಂದಿದ್ದೇವೆ. ನಾವು ಯಾವಾಗಲೂ ಕೂಡ ಇದಕ್ಕೆ ಕೊರತೆ ಮಾಡಿಲ್ಲ. ಈ ಜೆ.ಆರ್.ವೈ. ಯೋಜನೆಗೆ ಏನಾದರೂ ಕಡಿಮೆ ಇದ್ದರೆ, 31.3.93 ರೊಳಗೆ, we are going to fill up that by 31.3.93. We are providing that.

ತಾವು ಹೇಳಿದಿರಿ, ಏನಾದರೂ re-appropriation reallocaiton ಮಾಡುವಂಥ ಅವಶ್ಯಕತೆ ಇದ್ದರೆ, ಅದನ್ನು ಮಾಡೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ನಾನು ಅದನ್ನೆಲ್ಲಾ ಹೇಳಿಯೇ ಇಲ್ಲ. 11.43 ಕೋಟಿ ಡ್ಯೂ ಇವೆ, ಏಳೂವರೆ ಕೋಟಿ ನಮ್ಮ ಹತ್ತಿರ ದುಡ್ಡು ಇದೆ, ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಪರ್ಮಿಷನ್ ಕೇಳಿದ್ದೇವೆ.

ನೀವು ವೇರಿಯಸ್ ಹೆಡ್‌ನಲ್ಲಿ ಕೊಡತಕ್ಕಂಥಾದ್ದು ಅದರಲ್ಲಿ ಒಂದು ಕೋಟಿ ನಿನ್ನೆ ರಿಲೀಸ್ ಮಾಡಿದ್ದೀರಿ. ಇನ್ನು ಎಷ್ಟು ಕೋಟಿ ರಿಲೀಸ್ ಮಾಡುತ್ತೀರಿ ? ನಾವು ಜಿಲ್ಲಾ ಎಂ.ಎಲ್.ಎ.ಗಳೆಲ್ಲಾ ಬರೆದು ಕೊಟ್ಟಿದ್ದೇವೆ. ಏಳೂವರೆ ಕೋಟಿ ನಮ್ಮ ಹತ್ತಿರ ಇದೆ. ರೀಅಪ್ರಾಪ್ರಿಯೇಷನ್ ನಮಗೆ ನೀವು ಅವಕಾಶ ಕೊಡುತ್ತೀರಾ ? ನಮ್ಮಲ್ಲಿ ಮೇಸ್ಟರ್ಸ್‌ಗಳಿಲ್ಲ. ನಮ್ಮಲ್ಲಿ 300 ಸ್ಕೂಲ್ಸ್‌ಗಳಿವೆ. 350 ಮೇಸ್ಟರ್‌ಗಳ ವೇಕೆನ್ಸಿ ಇದೆ. ಮಾಡಿ ಕೊಡುತ್ತೀರಾ ? ಇವು ಎರಡೇ ನಾನು ಕೇಳಿರುವುದು. ಹೌದು ಅನ್ನಿ ಅಥವಾ ಇಲ್ಲ ಅನ್ನಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ಹೌದು ಅಂದರೆ ಹೌದು 'ಇಲ್ಲ' ಅಂದರೆ ಇಲ್ಲ. ಈಗ ತಾವು ಅನ್‌ಸ್ಪೆಂಟ್ ವಿಚಾರ ಹೇಳಿದಿರಿ ಅದನ್ನೇ ನಾನು ಹೇಳುತ್ತಿದ್ದೇನೆ. ರೀ ಅಪ್ರಾಪ್ರಿಯೇಷನ್ ಅಂದರೆ ಇದ್ದ ಹಣವನ್ನು ಉಪಯೋಗ ಮಾಡತಕ್ಕಂಥ ಒಂದು ಅನುಮತಿ. ಇದರ ಬಗ್ಗೆ 92-93 ಹಣ ಆದರೆ ನಾವು ಪರ್ಮಿಟ್ ಮಾಡುತ್ತೇವೆ. ಈಗ ಯಾವುದೋ ಕಾಲದ್ದು ಬಿಲ್ ಸೆಟಲ್ ಮಾಡಲಿಕ್ಕೆ ನಾವು ಪರ್ಮಿಟ್ ಕೊಡುವುದಿಲ್ಲ. ಅದನ್ನು ಮಾಡಲಿಕ್ಕೆ ಬರುವುದಿಲ್ಲ. ನಾವು ಹೇಳಿದಂತೆ ಟೀಚರ್ ಪೋಸ್ಟ್‌ಗಳನ್ನು ತಕ್ಷಣ ಫಿಲಪ್ ಮಾಡಲಿಕ್ಕೆ ಹೇಳಿದ್ದವೆ. ಇನ್ನು ನ್ಯೂ ಪೋಸ್ಟ್‌ಗಳನ್ನು ಕೂಡ ಕ್ರಿಯೇಟ್ ಮಾಡತಕ್ಕಂಥ ಅವಶ್ಯಕತೆ ಇದೆ. That will be our commitment to fillup. Already the process is on.

ಇಡೀ ರಾಜ್ಯಾದ್ಯಂತ ಎಲ್ಲಿ particularly, Teachers, Doctors para-medical staff, ಮತ್ತು ಹಾಸ್ಪಲ್‌ಗಳಲ್ಲಿ ಇರುವಂತಹ ಸ್ಟಾಫ್‌ಗಳ ವೇಕೆನ್ಸಿ ಇವೆ, ಇದನ್ನು ತುಂಬಿಸಲಿಕ್ಕೆ ನಾವು ಯಾವುದೇ ಅಡ್ಡಿ ಆತಂಕ ಬರುವುದಿಲ್ಲ. We are releasing it. We are releasing the posts.

ನಾವು ಆಯಾಯಾ ಇಲಾಖೆಗೆ ಅಪಾಯಿಂಟ್‌ಮೆಂಟ್ ಮಾಡಲಿಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇವೆ.ಅಪಾಯಿಂಟ್‌ಮೆಂಟ್ಸ್‌ಗಳನ್ನು ಅವರು ಮಾಡುತ್ತಾರೆ. There is no problem.

ಶ್ರೀ ಪಿ. ಜಿ. ಆರ್. ಸಿಂಧ್ಯ:- ದುಡ್ಡು ರಿಲೀಸ್ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯಿಲಿ:- ಮಾಡುತ್ತೇವೆ. ಇನ್ನು ಗ್ರಾನೈಟ್ ಪಾಲಿಸಿ ಬಗ್ಗೆ The ball is in your court.

ತಾವು ನೋಡಬೇಕು ಏಕೆಂದರೆ ಇಲ್ಲಿ ಹೌಸ್ ಕಮಿಟಿ ಮಾಡಿದ್ದೇವೆ. ನಮಗೆ ಬಹಳ ಕಷ್ಟ ಆಗಿದೆ. ತಾವು ವರದಿ ಎಷ್ಟು ಜಾಗ್ರತೆ ಕೊಡುತ್ತೀರೋ ಅಷ್ಟು ಜಾಗ್ರತೆ ನಾವು ಗ್ರಾನೈಟ್ ಪಾಲಿಸಿ ಅನೌನ್ಸ್ ಮಾಡುತ್ತೇವೆ. ಆದರೆ ಇಲ್ಲೀಗಲ್ ಆಗಿ ಕ್ವಾರಿ ಮಾಡತಕ್ಕಂಥಾದ್ದು ಸಾಗಾಣಿಕೆ ಮಾಡತಕ್ಕಂಥಾದ್ದು

ಸ್ವಲ್ಪ ಫೀಲ್ಡ್‌ಗೆ ಹೋಗಿ ನೋಡಿದರೆ ಎಲ್ಲಾ ಬಂದ್ ಆಗಿದೆ. ಈಗ ಎಲ್ಲಾ ನಮ್ಮ ಹತ್ತಿರ ಬರುತ್ತಿದ್ದಾರೆ. ನಮಗೆ ಪಟ್ಟಾದ್ದು ಸಾಗಿಸುವುದಕ್ಕೆ ಬಿಡುವುದಿಲ್ಲ. ಇಲ್ಲೀಗಲ್ ಅಂತೂ ನಾವು ಎಲ್ಲಾ ಲಾರಿ ಹಿಡಿಸಿದ್ದೇವೆ ಯಾರು ಇದ್ದರೂ ಕೂಡ ಹಿಡಿದು ನಿಲ್ಲಿಸಿದ್ದೇವೆ. ದಯಮಾಡಿ ತಾವು ಫೀಲ್ಡ್ ಎಕ್ಸ್‌ಪಿರಿಯನ್ಸ್ ನೋಡಿ. We have stopped it.

ಶ್ರೀ ಎಂ. ನಾರಾಯಣ ಸ್ವಾಮಿ:– ಬಂಗಾರಪೇಟೆ ತಾಲ್ಲೂಕಿನಲ್ಲಿ ಈಗಲೂ ನಡೆಯುತ್ತಿದೆ.

ಶ್ರೀ ಎಂ. ವೀರಪ್ಪಮೊಯಿಲಿ:– ಈಗ ಪಟ್ಟಾ ಜಾಗದ್ದು ಕೊಂಡು ಹೋಗುವಾಗ ನೀವು ನಿಲ್ಲಿಸುತ್ತಾ ಇದ್ದೀರಿ ಅಂತ ದೂರುಗಳು ಬರುತ್ತಿವೆ. ಏಕೆಂದರೆ ನಾವು ಪಟ್ಟಾದ ಹೆಸರಲ್ಲಿ ಸರ್ಕಾರಿ ಜಮೀನದ್ದು ಸಾಗಿಸುತ್ತಿದ್ದಾರೆ. ಅಂತಹ ಪ್ರಸಂಗಗಳು ಇದ್ದವು ಅದಕ್ಕೆ ನಾವು ಸ್ವಲ್ಪ ಕಟ್ಟು ನಿಟ್ಟು ಮಾಡಿದ್ದೇವೆ. ಅದನ್ನು ಇನ್ನೂ ಬಲಪಡಿಸುತ್ತೇವೆ ಆದರೆ ತಾವು ದಯಮಾಡಿ ಹೇಳಿ ತಮ್ಮ ಪಾಲಿಸಿ ರೆಡಿ ಇಲ್ಲ ಅಂದರೆ I am ready with my policy. ಈ ಸದನದ ಸಮಿತಿ ಆದುದರಿಂದ ತಮಗೆ ಗೌರವ ಕೊಡಬೇಕೆನ್ನುವ ಉದ್ದೇಶದಿಂದ I am waiting for your report.

ಆದ್ದರಿಂದ ಗ್ರಾನೈಟ್ ಪಾಲಿಸಿ ಬಗ್ಗೆ ತಮ್ಮದು ನಿರ್ಣಯ ಇದೆ. ಯಾವುದೇ ಇಲ್ಲಿಗ್ಯಾಲಿಟೀಸ್ ನಾವು ಹೇಳಿದ್ದೇವೆ ಇದು ಗ್ರಾನೈಟ್ ಲಾಬಿ ಇರಬಹುದು ಅಥವಾ ಕ್ಯಾಪಿಟೇಷನ್ ಫೀಸ್ ವಿಚಾರ ಇರಬಹುದು, ಲಿಕ್ಕರ್ ವಿಚಾರ ಇರಬಹುದು ಗ್ಯಾಂಬ್ಲಿಂಗ್ ವಿಚಾರ ಇರಬಹುದು ಗುಂಡಾಗಿರಿ ವಿಚಾರ ಇರಬಹುದು; ವಿಡಿಯೋಗೇಮ್ಸ್ ವಿಚಾರ ಇರಬಹುದು, ಇದು ಒಂದೊಂದು ವಿಷಯ ನಾವು ಪಟ್ಟಿ ಹೇಳಿದರೆ ಏನೇನು ಮಾಡಿದ್ದೇವೆಂದು ಬಹುಶಃ ತಮಗೆ ಹೇಳುವುದಾದರೆ ನಾವು ಕಟ್ಟುನಿಟ್ಟು ಸ್ವಲ್ಪ ಜಾಸ್ತಿ ಅಂತ ಹೇಳಿ ನನ್ನ ಮೇಲೆ ಅಪವಾದ ಅಷ್ಟೇ ಹೊರತು ಬೇರೇನೂ ಇಲ್ಲ. ಆದರೆ ಇಡೀ ನಮ್ಮ ಸಮಾಜದ ನೆಮ್ಮದಿಯ ದೃಷ್ಟಿಯಿಂದ ನಾವು ಕ್ರಮ ಕೈಗೊಂಡಿದ್ದೇವೆ. ಬಹುಶಃ ಏನಾಗಿದೆ ಅಂದರೆ ಇಲ್ಲಿ ಗ್ಯಾಲಿ ಮಾಡುವುದು ಒಂದು ಸಂಸ್ಕೃತಿ ಅಂತ ಇರತಕ್ಕಂಥದ್ದು ಇದ್ದರೆ ಆ ಸಂಸ್ಕೃತಿ ಮಾತ್ರ ನಮ್ಮ ಕರ್ನಾಟಕ ರಾಜ್ಯದಲ್ಲಿ ಬುಡ ಸಮೇತ ಕಿತ್ತು ಹಾಕಲಿಕ್ಕೆ ಏನು ಮಾಡಬೇಕೋ ಅದನ್ನು ನಾವು ಮಾಡುತ್ತಿದ್ದೇವೆ. ಆದ್ದರಿಂದ ಇನ್ನು ತಾವು ಸಲಹೆ ಕೊಡಿ, ಗ್ರಾನೈಟ್ ಪಾಲಿಸಿ ಬಗ್ಗೆ ಅದನ್ನು ನಾವು ಮಾಡುತ್ತೇವೆ. ಇನ್ನು ಒಂದು ಸನ್ಮಾನ್ಯ ಬೈರೇಗೌಡರು ನೇತ್ರಾವತಿ ಡಿಸ್ಟಲರೀಸ್ ಬಗ್ಗೆ ಹೇಳಿದರು. ನಾನು ವಿವರ ತರಿಸಿದ್ದೇನೆ. ಅದು 20.9.90ಗೆ he has applied for the licence and the Excise Commissoner recommended for the issue on 27.12.90. Government communicated its prior approval on 19.11.92. On 19.11.92 I don't think I have take over charge.

ಆಮೇಲೆ ಫೆನ್ನಿ, ಹೌದು, ಗೋವಾದಿಂದ ಇದು ಸ್ಮಗಲ್ ಆಗುತ್ತಿದೆ, ನಮ್ಮ ಇಂಡಸ್ಟ್ರಿ ಸಫರ್ ಆಗುತ್ತದೆ.. It is a good industry. ಆದ್ದರಿಂದ 42 ಪರ್ಸೆಂಟ್‌ನಿಂದ ಇದನ್ನು 32 ಪರ್ಸೆಂಟ್‌ಗೆ ನಾವು ಇಳಿಸುವುದಕ್ಕೆ ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆ. Then Duty. ಗಡಿ ಪ್ರದೇಶಕ್ಕೆ ಹೆಚ್ಚು ಅನುದಾನ ಕೊಡಬೇಕೆಂದು ಹೇಳಿದಿರಿ.

2.05 ಪಿ. ಎಂ.

ಈಗಾಗಲೇ 3,025 ಕೋಟಿ ರೂಪಾಯಿಗಳ ಆಯವ್ಯಯ ಆಗಿದೆ. ಇನ್ನೂ ಹೆಚ್ಚಿಗೆ ಕೊಟ್ಟರೆ ಬೇರೆ ಕಡೆಯಿಂದ ತೆಗೆದುಕೊಡಬೇಕಾಗುತ್ತದೆ. ಆದರೂ ಕೂಡ ಈ ಗಾತ್ರವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆ ವಿಚಾರದ ಡಿಮ್ಯಾಂಡ್ ಬರುತ್ತದೆ ಆಗ ಹೆಚ್ಚಿಗೆ ಮಾಡುವ ಬಗ್ಗೆ ಖಂಡಿತವಾಗಿ ಆಲೋಚನೆ ಮಾಡೋಣ. ಮಾಧುಸ್ವಾಮಿ, ಮೇಟಿಯವರು ಮತ್ತು ನಾರಾಯಣಸ್ವಾಮಿಯವರು ಎತ್ತಿದ ವಿಚಾರಗಳಿಗೆ ಮೊದಲೇ ನಾನು ಉತ್ತರ ಕೊಟ್ಟುಬಿಟ್ಟಿದ್ದೇನೆ. ಮಾನ್ಯ ವೆಂಕಟೇಶ್ವರ್‌ರವರು ಆಶ್ರಯದ ಬಗ್ಗೆ ಹಣವನ್ನು ರಿಲೀಸ್ ಮಾಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಮ್ಮ strong ಕಮಿಟ್‌ಮೆಂಟ್

ಇದೆ. ಬಡವರಿಗೆ ಮನೆ ಮತ್ತು ನಿವೇಶಗಳನ್ನು ಕೊಡುವುದು ನಮ್ಮ ಮೊದಲ ಕಮಿಟ್‌ಮೆಂಟ್. ಯಾವ ಸೆಕ್ಟರ್‌ಗಳಿಗಿಂತಲೂ ಇದಕ್ಕೆ ಪ್ರಥಮ ಆದ್ಯತೆ ಇರುತ್ತದೆ. ತಾವುಗಳು ವಿಚಾರವನ್ನು ನನಗೆ ಹೇಳಿದ್ದೀರಿ. ಅದರಲ್ಲಿ ಕಮ್ಯೂನಿಕೇಷನ್ ಗ್ಯಾಪ್ ಇರಬಹುದು. ನಾನು ಅದನ್ನು ಚೆಕಪ್ ಮಾಡುತ್ತೇನೆ. ಅನಂತರ ಮಾನ್ಯ ವೈ. ಕೆ. ರಾಮಯ್ಯನವರು ಇರಿಗೇಷನ್ ಬಗ್ಗೆ ನೀರಾವರಿಯ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಹಣವನ್ನು ಖರ್ಚು ಮಾಡಬೇಕೆಂದು ಹೇಳಿದ್ದಾರೆ. ನಾನು ಅವರೊಂದಿಗೆ ಸಮ್ಮತಿ ಹೊಂದಿದ್ದೇನೆ. ನಾನು ಇದನ್ನು ಬಹಳ ಪರಿಶೀಲನೆ ಮಾಡಿದ್ದೇನೆ. ಒಂದು ರೀತಿಯಲ್ಲಿ ಶಸ್ತ್ರಚಿಕಿತ್ಸೆಯು ಇದಕ್ಕೂ ಆಗಬೇಕು. ವಿಶೇಷತಃ ಇರಿಗೇಷನ್ ಸೆಕ್ಟರ್‌ನ ವಿಚಾರದಲ್ಲಿ ರಿ–ಕನ್ಸಸ್ಟ್ರಕ್ಷನ್ ಆಫ್ ದಿ ಕಲ್ವರ್ಟ್ ಎಂದು ಹೇಳುವುದು ಅದಕ್ಕೆ 50 ಸಾವಿರ ರೂಪಾಯಿಗಳನ್ನು ಹಂಚುವುದು ಹೀಗೆ ಹಣ ಹಂಚುವ ಕಾರ್ಯವು ಬಹಳ ಆಗುತ್ತಾ ಇದೆ. ಅದರ ವಿವರಕ್ಕೆ ಈಗ ಹೋಗುವುದು ಬೇಡ. ನಾನು ಕೆಲವು ಕಡೆಗಳಲ್ಲಿನ ಪಟ್ಟಿಯನ್ನು ವಿವರಗಳನ್ನು ತರಿಸಿ ನೋಡಿದ್ದೇನೆ. ಅದರಲ್ಲಿ ನಿನ್ನೆ ನಾನು ಒಂದು ವಿಚಾರಕ್ಕೆ ಎನ್‌ಕ್ವಯರಿ ಮಾಡಲು ಆದೇಶ ಕೊಟ್ಟಿದ್ದೇನೆ. ಹೀಗೆ ಒಂದೆರಡು ಕೋಟಿ ರೂಪಾಯಿಗಳನ್ನು ಯಾವುದೋ ರೀತಿಯಲ್ಲಿ ಹಂಚುವುದು. ನನಗನ್ನಿಸುತ್ತದೆ ಹಣದ ಮೇಳವನ್ನು ಇರಿಗೇಷನ್‌ನಲ್ಲಿ ಮಾಡಿದರೆ ಅದೇ ಒಳ್ಳೆಯದು ಎಂದು. ಯಾವುದಕ್ಕೋ 50 ಸಾವಿರ ಕೊಡುವುದು, ಅದೇ ರೀತಿಯಲ್ಲಿ ಒಂದು ಪಟ್ಟಿ ಮಾಡುವುದು, ರಿ–ಕನ್ಸ್‌ಸ್ಟ್ರಕ್ಷನ್ ಆಫ್ ದಿ ಕಲ್ವರ್ಟ್ ಎಂದು ತೋರಿಸುವುದು, ಇಂಥ ವಿಚಾರಗಳ ಒಂದು ಪಟ್ಟಿಯನ್ನು ನಿನ್ನೆ ತಾನೆ ನೋಡಿದ್ದೇನೆ. ಇದರ ಪ್ರಕಾರ ಹೀಗೆ ಒಂದೆರಡು ಕೋಟಿ ರೂಪಾಯಿಗಳು ವ್ಯರ್ಥವಾಗಿ ಹೋಗುತ್ತಾ ಇದೆ, ಇಂಥದ್ದು ಬಹಳ ಆಗುತ್ತಾ ಇದೆ. ಇದರಲ್ಲಿ ಸಾಕಷ್ಟು ಕೊಲಾಬರೇಶನ್ ನಡೆಯುತ್ತದೆ. ಅದು ನಡೆದು ಕಂಟ್ರಾಕ್ಟರ್ಸ್ ಕೆಲಸ ಮಾಡದೆ ಎಸ್ಕಲೇಷನ್ ಪಡೆಯತಕ್ಕಂಥಾದ್ದು, ಆರ್ಬಿಟ್ರೇಷನ್‌ಗೆ ಹೋಗತಕ್ಕಂಥಾದ್ದು ನಡೆಯುತ್ತದೆ. ಕೆಲವೊಂದು ಹಾಳು ಪ್ರವೃತ್ತಿಗಳು ಈ ಇರಿಗೇಷನ್ನಲ್ಲಿ ನಡೆಯುತ್ತಾ ಇದೆ, a message will definitely go down to all the Engineers at any level if anybody meddles with the money which is meant for this, we will not spare him, whoever he may be. We will defintiely take care of this.

ಇದು ಬಹಳ ಆಗುತ್ತಾ ಇದೆ. ಅದರ ಬಗ್ಗೆ ಜನಗಳಿಗೆ ಒಂದು ವಿಶ್ವಾಸವನ್ನು ನಾವು ಈ ಬಗ್ಗೆ ಮೂಡಿಸಿ ಹೇಳಬೇಕಾಗುತ್ತದೆ. ಆ ವಿಶ್ವಾಸ ಇವೊತ್ತು ತಪ್ಪಿ ಹೋಗಿದೆ. ಅದನ್ನು ನಾವು ಕಟ್ಟುನಿಟ್ಟಾಗಿ ನಿಲ್ಲಿಸುತ್ತೇವೆ. Perhaps, if the enquiry which I have ordered yesterday, if that is true, we will not hesitate to suspend Officers concerened at any level.

ಹೀಗಾಗಿ ವಿಶೇಷತಃ ಇರಿಗೇಷನ್‌ನಲ್ಲಿ ಇಂಥ ಒಂದು ರೀತಿಯ ಸೋರಿಕೆ ಆಗುತ್ತಿದೆ. That has become order of the day, particularly in the Irrigation. I think all of us should join together to tackle this kind of a dishonesty in implementation of these irrigation projects. ಇದನ್ನು ನಿಲ್ಲಿಸುವುದಕ್ಕೆ ಏನು ಅವಶ್ಯಕತೆ ಇವೆಯೋ ಅವನ್ನು ಮಾಡುತ್ತೇವೆ. This is a cancerous growth in the administration. We are revising the major Irrigation Control Board so that it can be monitored every month at the highest level.

ಇದನ್ನು ನಾವು ಮಾಡುತ್ತಾ ಇದ್ದೇವೆ. ಆದ್ದರಿಂದ ತಾವು ಹೇಳಿದಂಥಾದ್ದು, ಏಕೆಂದರೆ ಆ ಜಾಗದಲ್ಲಿ ಇದ್ದು, ಅದನ್ನು ಕಂಡು ನೋಡಿ, ಹಲುಬಿ ಈ ಮಾತನ್ನು ಹೇಳುತ್ತಾ ಇದ್ದೇನೆ. I know it, even at a distance, when I go through all these things it pains me to see that Karnataka is being destroyed by certain vested interest who will not allow our projects to come up.

ತಾವು ಹೇಳಿದಂತೆ ಈ ಸ್ಕೈಲ್‌ನಲ್ಲಿ ಹೋದರೆ ಕಾವೇರಿಯೂ ಆಗುವುದಿಲ್ಲ, ಕೃಷ್ಣ ಕೂಡ ಆಗುವುದಿಲ್ಲ. ಬಹುಶಃ ಇದರ ಮೂಲಕ ಅತ್ಯಂತ ದೊಡ್ಡ ದ್ರೋಹವನ್ನು ಕರ್ನಾಟಕದ ಜನತೆಯ ಮೇಲೆ ಮಾಡುತ್ತಿದ್ದೇವೆ ಎಂದು ಅನಿಸುತ್ತದೆ. I agree with you. This has to be stopped and we will definitely stop it at any cost. ಇದರ ಬಗ್ಗೆ ತಾವುಗಳು ಹೆಚ್ಚಿನ ಬೆಳಕನ್ನು ಚೆಲ್ಲಿದ್ದೀರಿ, ಇದರ ಬಗ್ಗೆ ತಮ್ಮ ಕಳಕಳಿಯು ಅಂತರಾಳದಿಂದ ಬಂದಿದೆ ಎಂಬುದರಲ್ಲಿ ಅನುಮಾನ ಇಲ್ಲ. We have not done it only for politics. ಈ ರೀತಿಯಲ್ಲಿ ಸುಲಿಗೆ ಮಾಡತಕ್ಕಂಥ ಒಂದು ಕಲ್ಚರ್ ಏನಿದೆ, ಅದನ್ನು ಕಿತ್ತೊಗೆಯತಕ್ಕಂಥ ಅವಶ್ಯಕತೆಯು ಇದೆ. ಈ ಕಳಕಳಿಯು ಇಲ್ಲಿ ನಿಲ್ಲದೇ ಆ ಫೀಲ್ಡ್‌ನಲ್ಲಿ ಕಾಣಬೇಕಾಗುತ್ತದೆ. ಅದು ಕಾಣದೇ ಇದ್ದರೆ ನಂಬಿಕೆ ಇಡತಕ್ಕಂಥ ಅವಶ್ಯಕತೆಯು ಬರುವುದಿಲ್ಲ. ಅದನ್ನು ಮಾಡಿ ತೋರಿಸತಕ್ಕಂಥ ಒಂದು ಪ್ರಾಮಾಣಿಕವಾದ ಕಾರ್ಯಕ್ರಮವನ್ನು ನಾವು ಮಾಡುತ್ತೇವೆ ಎಂಬ ಭರವಸೆ ನಮಗೆ ಇದೆ. ನಾವು ಅದನ್ನು ಮಾಡಿತೋರಿಸುವ ತನಕ ನೀವು ನಂಬುವ ಗೋಜಿಗೆ ಹೋಗುವುದು ಬೇಡ. Till it is proved, don't believe it. I am with you.

ಇನ್ನು ಪರ್ಚೇಸ್ ಟ್ಯಾಕ್ಸ್ ಬಗ್ಗೆ ದಕ್ಷಿಣ ರಾಜ್ಯಗಳಲ್ಲಿನ ಟ್ಯಾಕ್ಸ್‌ನ ಮೇರೆಗೆ ಸರಿಸಮಾನ ಮಾಡಬೇಕೆಂದು ತಾವುಗಳು ಕೇಳಿದ್ದೀರಿ. There has been a pressure to increase again back to 13% but I resisted that kind of a pressure. ಕಡಿಮೆ ಮಾಡಲಿಲ್ಲ, ಹಾಗೆಯೇ ಇಟ್ಟುಬಿಟ್ಟಿದ್ದೇನೆ. ಆ ಪ್ರೊಪೋಸಲ್ ಬಂದಾಗ ಶ್ರೀ ಗುರುದೇವ್ ಮತ್ತಿತರರ ನೆನಪು ಆಯಿತು. Then I thought we should not increase, to be very frank with you. ಅದನ್ನು ಇನ್ನೂ ಕಡಿಮೆ ಮಾಡಬೇಕು; make it on par ಅಂತ ಹೇಳಿದ್ದೀರಿ.

ಶ್ರೀ ಗುರುದೇವ್:– ಜಾಸ್ತಿ ಇರುವುದನ್ನು ಕಡಿಮೆ ಮಾಡಿ ಎಂದು ಕೇಳುತ್ತಾ ಇದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ:– ತಾವುಗಳು ಎಲ್ಲವನ್ನೂ on par ಮಾಡಿ ಎಂದು ಹೇಳಿದ್ದೀರಿ.

ತಾವುಗಳು ಹೇಳಿದ ಹಾಗೆ ಅದು ಅಷ್ಟು ಕಡಿಮೆ ಏನೂ ಇಲ್ಲ. ತಮಿಳುನಾಡಿನಲ್ಲಿ 7.2 ಪರ್ಸೆಂಟ್ ಇದೆ. ಕೇರಳದಲ್ಲಿ 8ಪರ್ಸೆಂಟ್ ಇದ್ದರೆ ಆಂಧ್ರಪ್ರದೇಶದಲ್ಲಿ 7.7ಪರ್ಸೆಂಟ್ ಇದೆ. ನಮ್ಮಲ್ಲಿ 13ಪರ್ಸೆಂಟ್ ಇದ್ದುದನ್ನು ಕಳೆದ ಬಜೆಟ್‌ನಲ್ಲಿ 8 ಪರ್ಸೆಂಟ್‌ಗೆ ಇಳಿಸಿದ್ದೇವೆ. By and large, we are on par with them; ಕೇರಳದಲ್ಲಿ 8ಪರ್ಸೆಂಟ್ ಇದೆ. ಕಾಫಿ ಎಸ್ಟೇಟ್ಸ್ ಇರುವುದು ಕರ್ನಾಟಕ ಮತ್ತು ಕೇರಳದಲ್ಲಿ ತಾವು on par ಅಂತ ಹೇಳಿದಿರಿ. Perhaps it is very much nearer to that.

ಶ್ರೀ ಗುರುದೇವ್:– ಮಾನ್ಯ ಮುಖ್ಯಮಂತ್ರಿಯವರೇ, ತಮಗೆ ಕೊಟ್ಟಂಥ ಮಾಹಿತಿಯು ತಪ್ಪು ಇದೆ. ಮದ್ರಾಸ್‌ನಲ್ಲಿ 4 ಪರ್ಸೆಂಟ್ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ:– ನಾವು ದಾಖಲೆಗಳ ಪ್ರಕಾರವೇ ಸರಿಯಾದ ಮಾಹಿತಿಗಳನ್ನು ಕೊಡುವುದು. ನಾನು ಹೇಳಿದ್ದುದು ಸರಿಯಾಗಿದೆ. ಕಳೆದ ಸಾರಿ ನಾವು ಬಹಳ ಕಡಿಮೆ ಮಾಡಿದ್ದೇವೆ. ಇದರ ಮೂಲಕ ನಮಗೆ ಸುಮಾರು 24 ಕೋಟಿ ರೂಪಾಯಿಗಳ ಆದಾಯವು ಬರುತ್ತದೆ. ಇದನ್ನು ಬಿಟ್ಟರೆ ಇತರ ಅಭಿವೃದ್ಧಿ ಕಾರ್ಯಕ್ರಮಗಳು ಸ್ಥಗಿತವಾಗುತ್ತವೆ.

ಡಾ।। ಎನ್.ಬಿ. ನಂಜಪ್ಪ:– ಸಭಾಧ್ಯಕ್ಷರೇ, ಕಾಫಿ ಪರ್ಚೇಸ್ ಟ್ಯಾಕ್ಸನ್ನು ಸ್ಮಾಲ್ ಹೋಲ್ಡರ್ಸ್‌ಗೆ ಕಡಿಮೆ ಮಾಡಬೇಕೆಂದು ಪ್ಲಾಂಟರ್ಸ್ ಮೀಟಿಂಗ್ ಮಾಡಿದಾಗ ಕೆಲವು ವಿಚಾರಗಳು ಬಂತು. ಒಂದೆರಡು ಎಕರೆ ಇದ್ದವರಿಗೂ ಕೂಡ ಟ್ಯಾಕ್ಸ್ ಇದೆ ಅದನ್ನು ಕಡಿಮೆ ಮಾಡಬೇಕು. ದೊಡ್ಡ ಪ್ಲಾಂಟರ್ಸ್‌ಗಳಿಗೆ ಹಾಕಿದರೆ ಅಡ್ಡಿ ಇಲ್ಲ. ಹೀಗೆ ಅದನ್ನು ಕಡಿಮೆ ಮಾಡತಕ್ಕಂಥ ಸಂದರ್ಭದಲ್ಲಿ ಟೋಟಲ್ ಸಬ್ಸಿಡಿಯನ್ನು ಕೊಡಬೇಕೆಂದು ಕೋರಿಕೆ ಇದೆ ....

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಚಂದ್ರೇಗೌಡರು, ಫರ್ ಫಾರ್ಮೆನ್ಸ್ ಬಜೆಟ್ ಕೊಡಿ ಎಂದು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಹೌದು ಅದನ್ನು ಏಕೆ ಅಡಗಿಸಿಡಬೇಕು. We must give the performance budget. In future we will give the performance budget. Nothing should be suppressed: ನಾವು ಏನು ಮಾಡಿದ್ದೇವೆ ಅದನ್ನು ಜನತೆಗೆ ತೋರಿಸಿಕೊಡದಿದ್ದರೆ ನಾವು ಮಾಡತಕ್ಕಂಥ ತಪ್ಪು ಕೆಲವರಿಗೆ ಅರ್ಥವಾಗುವುದಿಲ್ಲ. Then we will have to look for another audit report, which will come after 2–3 years. Perhaps, in the next year itself, our performance ಕನ್ನಡಿಯ ಹಾಗೆ ಇರಬೇಕು. Transparency in an adminstration is a mandatory and a must. We will introduce that kind of a transparency in the administration, not to hide anything.

ಇನ್ನು ನೆರೆಹಾವಳಿಯ ಬಗ್ಗೆ ಸನ್ಮಾನ್ಯ ರಾಯರೆಡ್ಡಿಯವರು, ಹಂಪನಗೌಡರು ಮುಂತಾಗಿ ಅನೇಕ ಜನ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬೆಳೆ ಪರಿಹಾರವನ್ನು ಕೊಡುವ ಬಗ್ಗೆ ನಾವು ಈಗಾಗಲೇ ಕ್ರಮವನ್ನು ಕೈಗೊಳ್ಳುತ್ತಾ ಇದ್ದೇವೆ. ಅನೇಕ ಕಡೆಗಳಲ್ಲಿ ನಾವು ಕೊಟ್ಟ ಪರಿಹಾರ ಸಾಲದು ಎಂದು ಕೂಡ ಮನಗಂಡಿದ್ದೇವೆ. ನೆರೆ ಹಾವಳಿ ಪ್ರದೇಶದಲ್ಲಿ ಕೆಲವು ಮೂಲಭೂತ ಇಷ್ಯೂಗಳಿವೆ. ಬಳ್ಳಾರಿ ಹೊಸಪೇಟೆಗಳಿಂದ ಅನೇಕರು ಪ್ರತಿನಿಧಿಗಳಾಗಿ ಬಂದು ಮನವಿ ಮಾಡಿಕೊಂಡಿದ್ದಾರೆ. ಯಾವ ರೀತಿಯಲ್ಲಿ ಇವರ ಸಮಸ್ಯೆಗಳನ್ನು ಪರಿಹಾರ ಮಾಡಬಹುದು ಎಂದು ನೋಡುತ್ತೇವೆ. ಈ ಬಗ್ಗೆ ಚರ್ಚೆ ಕೂಡ ಮುಂದೆ ಇರುವುದರಿಂದ ಅದರ ಬಗ್ಗೆ ಹೆಚ್ಚು ಹೇಳುವ ಅವಶ್ಯಕತೆ ಇಲ್ಲ ಆದರೆ ನೆರೆಹಾವಳಿಯಲ್ಲಿ ಏನು ಕ್ರಮ ತೆಗೆದುಕೊಳ್ಳಲಿದ್ದೇವೆ ಅಂದರೆ ನಮ್ಮ ಸನ್ಮಾನ್ಯ ರೆವಿನ್ಯೂ ಸಚಿವರು ಒಂದು ಯೋಜನೆ ಮಾಡಿದ್ದಾರೆ. 997 ಕೋಟಿ ಇದ್ದುದು ಸ್ವಲ್ಪ ಹೆಚ್ಚು ಆಗಿ ಒಂದು ಸಾವಿರ ಕೋಟಿ ರೂಪಾಯಿಗಳವರೆಗೆ ಆಗತಕ್ಕಂಥ ಈ ಯೋಜನೆಯನ್ನು the Government of India is posing it to the world bank.

ಅದನ್ನು ವಿಶ್ವಬ್ಯಾಂಕಿಗೆ ಕೊಡುತ್ತಿದ್ದಾರೆ. ಅದರ ಬಗ್ಗೆ ಪ್ರಧಾನಿಯವರು ವಿಶೇಷವಾಗಿ ಆಸಕ್ತಿಯನ್ನು ತೋರಿಸಿ ಈ ಪ್ರಾಜೆಕ್ಟನ್ನು ಈಗಾಗಲೇ we have presented to the Government of India, last week.

ಶ್ರೀ ಬಿ. ಎಸ್. ಯಡಿಯೂರಪ್ಪ:– ನೆರೆ ಹಾವಳಿಗೆ ಇಮ್ಮೀಡಿಯೆಟ್ ರಿಲೀಫ್ ಏನು ಕೊಡುತ್ತೀರಿ ಹೇಳಿ ? 5 ಕೋಟಿಯನ್ನು ಬಿಡುಗಡೆ ಮಾಡಬೇಕು. ಅದನ್ನಾದರೂ ಬಿಡುಗಡೆ ಮಾಡಿ.

ಶ್ರೀ ವಾಟಾಳ್ ನಾಗರಾಜ್:– ಬಿಡುಗಡೆ ಮಾಡಿದ್ದೇವೆಂದು ಹೇಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್:– ನೀರಾವರಿ ಕೆರೆಗಳು ಒಡೆದು ಹೋಗಿದೆ. ಅದನ್ನು ದುರಸ್ತಿ ಮಾಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ:– ಇದನ್ನು ಮೂರು ಭಾಗವಾಗಿ ನಾನು ವಿಂಗಡಿಸುತ್ತಿದ್ದೇನೆ. ಒಂದನೆಯ ಭಾಗ ತಾತ್ಕಾಲಿಕವಾದಂತಹ ಸಹಾಯವನ್ನು ಕೊಡತಕ್ಕಂಥದ್ದು. ಅದು ಸತ್ತವರಿಗೆ ಪರಿಹಾರ ಅಥವಾ ಪಂಪ್‌ಸೆಟ್ಟುಗಳಿಗೆ ಪರಿಹಾರವನ್ನು ಕೊಡುವುದು. ಕ್ರಾಫ್ ಕಾಂಪೆನ್‌ಸೇಷನ್ ಕೊಡತಕ್ಕಂಥದ್ದು. ತಕ್ಷಣ 5 ಸಾವಿರ ರೂಪಾಯಿ ಖರ್ಚು ಮಾಡಿ ಯಾರ ಮನೆ ಬಿದ್ದು ಹೋಗಿದೆ ಅಥವಾ ಹಾಳಾಗಿದೆ ಅವರಿಗೆ ಕೊಡತಕ್ಕ ವ್ಯವಸ್ಥೆ ಇದೆ. ನಾವು ಸಮರೋಪಾದಿಯಲ್ಲಿ ಈ ಪರಿಹಾರವನ್ನು ಒದಗಿಸಿದ್ದೇವೆ. ಇನ್ನು ಎರಡನೆಯದು ಏನೆಂದರೆ ಅನೇಕ ಕಡೆ ಸಣ್ಣ ಕೆರೆಕಟ್ಟೆಗಳು ಇವತ್ತು ಒಡೆದು ಹೋಗಿವೆ. ಅದನ್ನು ರಿಪೇರಿ ತಕ್ಷಣ ಮಾಡದಿದ್ದರೆ ಮುಂದೆ ಬೆಳೆ ತೆಗೆಯಲಿಕ್ಕೆ ಕಷ್ಟವಾಗುತ್ತದೆ. ಕೆಲವು ಗದ್ದೆಗಳು ಹೊಲಗಳು ಜವಳು ಬಿದ್ದಿದೆ. ಇದನ್ನು ನಾವು ತಕ್ಷಣ ಮಾಡಬೇಕಾಗುತ್ತದೆ. ಅದು ಒಂದು ಭಾಗ. ಅದನ್ನು ಕೂಡ ಅಟೆಂಡ್ ಮಾಡುತ್ತಿದ್ದೇವೆ. ಮೂರನೆಯ

ಭಾಗ ಅಂದರೆ ಸತತವಾಗಿ ಪ್ರವಾಹಕ್ಕೆ ಈಡಾಗತಕ್ಕಂಥ ಅನೇಕ ಪ್ರದೇಶಗಳು ಇವೆ. ಸಾಕಷ್ಟು ಮನೆ ಹೋಗುತ್ತದೆ, ಹೊಲ ಹೋಗುತ್ತದೆ, ಕೆರೆ ಹಾಳಾಗುತ್ತದೆ, infrastructure which is constructed by the State Government and the Private sector.

ಎರಡೂ ಭಾಗದಲ್ಲಿಯೂ ಕೂಡ ರೈತರಿಗೆ ಅನುಕೂಲವಾಗಲಿಕ್ಕೆ ಮುಂದೆ ಬರತಕ್ಕಂಥ ವರ್ಷಗಳಲ್ಲಿ ಯಾವ ಪ್ರವಾಹ ..ದರೂ ಕೂಡ ಅದನ್ನು ತಡೆಹಿಡಿದು ತಮ್ಮ ಆರ್ಥಿಕ ಶಕ್ತಿಯನ್ನು ಉಳಿಸಿಕೊಳ್ಳತಕ್ಕಂಥ ದೃಷ್ಟಿಯಲ್ಲಿ ಇದು ವ್ಯಾಪಕವಾದಂಥ ಸಮಗ್ರವಾದಂಥ ಯೋಜನೆ. ಇದು ನಾವು ಕೊಟ್ಟಿಂಥದ್ದು ಪ್ರೊಟೆಕ್ಟಿವ್ ಮೇಷರ್ಸ್ ಇದಕ್ಕಾಗಿ ನಾವು ಈ ಕಾರ್ಯಕ್ರಮ ವರ್ಲ್ಡ್ ಬ್ಯಾಂಕಿಗೆ ಇವತ್ತು ಕೊಡುತ್ತಿದ್ದೇವೆ. ಇಂತಹ ಶಾಶ್ವತವಾದಂತಹ ಪರಿಹಾರವನ್ನು ಕೊಡದೆ, ತಾವು ಪ್ರತಿ ಸಾರಿಯೂ ಕೂಡ ನೆರೆ ಬರುತ್ತದೆಂದು ತಾತ್ಕಾಲಿಕವಾದಂತಹ ಪರಿಹಾರ ಕೊಟ್ಟರೆ ಆ ರೈತನಿಗೆ ಶಕ್ತಿಯನ್ನು ಕೊಡಲಿಕ್ಕೆ ಆಗುವುದಿಲ್ಲ ಎಂಬ ಉದ್ದೇಶದಿಂದ ನಾವು ಇದನ್ನು ಮಾಡಿದ್ದೇವೆ, ಅಗ್ರಿಕಲ್ಚರಲ್ ಇನ್‌ಪುಟ್ ಬಗ್ಗೆ ನಾವು ಸಬ್ಸಿಡಿಯನ್ನು ರಬಿ ಕ್ರಾಪಿಗೆ ಕೊಡಬೇಕೆಂದು ಮಾಡಿದ್ದೇವೆ. ಮತ್ತೆ ಬಾಕಿ ಹಣವನ್ನು ಖಾರಿಫ್ ಕ್ರಾಪಿಗೆ ಕೊಡುವಂತೆ ಮಾಡುತ್ತಿದ್ದೇವೆ. ಆದ್ದರಿಂದ ಮತ್ತೆ ಕೆಲವು ಉಳಿದಂತಹ ಎಲ್ಲಾ ಸಮಸ್ಯೆಗಳ ಬಗ್ಗೆ ಸಾಕಷ್ಟು ಚರ್ಚೆ ಈಗ ಆಗುತ್ತದೆ. ಅದನ್ನು ಆ ಸಂದರ್ಭದಲ್ಲಿ ಉತ್ತರ ಕೊಡುತ್ತೇನೆ.

ಇನ್ನು ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ನಾನು ಇನ್ನೂ ವಿಚಾರ ಮಾಡಿಲ್ಲ. ಇದರ ಬಗ್ಗೆ ವಿಚಾರ ಮಾಡೋಣ. ಮಾನ್ಯ ವಾಟಾಳ್ ನಾಗರಾಜ್‌ರವರು ಗಡಿ ಪ್ರದೇಶದ ಬಗ್ಗೆ ಹೇಳಿದರು. ಕಾವೇರಿ, ಕೃಷ್ಣಾ, ನದಿ ನೀವು ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ರೈಲ್ವೆ ಬೇಡಿಕೆಗಳ ವಿಚಾರ ಹೇಳಿದ್ದೀರಿ. ಈಗ ಕಾವೇರಿ, ಕೃಷ್ಣ ಬಗ್ಗೆ ಚರ್ಚೆ ಈ ಡಿಮ್ಯಾಂಡ್ ಪಾಸ್ ಆದ ಕೂಡಲೇ ನಾಳೆಯೇ ಇದರ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ. ನಮ್ಮ ಹಕ್ಕನ್ನು ಉಳಿಸಿಕೊಳ್ಳಲಿಕ್ಕೆ ಆರ್ಥಿಕವಾದಂತಹ ರಾಜಕೀಯವಾದಂತಹ ಎಲ್ಲಾ ಪ್ರಾಮಾಣಿಕವಾದಂತಹ ಪ್ರಯತ್ನ ನಾವು ಮಾಡಿಯೇ ಮಾಡುತ್ತೇವೆ ಅದರಲ್ಲಿ ಕಡಿಮೆ ಬರುವುದಿಲ್ಲ. ವಿಜಯನಗರದ ಉಕ್ಕು ಕಾರ್ಖಾನೆಯ ಬಗ್ಗೆ ನಾವು ಈಗಾಗಲೇ we have invited some people ಇನ್ನು ಎರಡು ವಾರದಲ್ಲಿ ಇದಕ್ಕೆ ನಿರ್ಣಯ ಬರುತ್ತದೆ. ರೈಲ್ವೆ ಬೇಡಿಕೆಯ ಬಗ್ಗೆ ನಾನು ವಿಶೇಷವಾಗಿ ನಮ್ಮ ಈಗಿನ ರೈಲ್ವೆಯ ಸಚಿವರು ಕೂಡ ಕರ್ನಾಟಕ ರಾಜ್ಯದ ಬಗ್ಗೆ ಇಷ್ಟು ಸಾಧನೆ ಕರ್ನಾಟಕದ ರಾಜ್ಯದ ಇತಿಹಾಸದಲ್ಲೇ ಆಗಲಿಲ್ಲ ಚಾಮರಾಜನಗರ ಮತ್ತು ಮೆಟ್ಟುಪಾಳ್ಯಂ ಇದರ ಬಗ್ಗೆ ನಾವು ಪ್ರತ್ಯೇಕವಾಗಿ ರೈಲ್ವೆ ಮಂತ್ರಿಗಳ ಜೊತೆಯಲ್ಲಿ ಮಾತನಾಡಿಕೊಂಡು ಮಾಡುತ್ತೇವೆ. ಇದರಿಂದ ವಿಶೇಷವಾದ ರೀತಿಯಾದಂತಹ ಆರ್ಥಿಕ ಕ್ರಾಂತಿ ಕೈಗಾರಿಕಾ ಕ್ರಾಂತಿ ಮತ್ತು ಕೃಷಿ ಕ್ರಾಂತಿ ಕರ್ನಾಟಕ ರಾಜ್ಯದಲ್ಲಿ ಬರಲಿಕ್ಕೆ ರೈಲ್ವೆ ಸಂಪರ್ಕ ಸಾಧನೆ ಇನ್ನೂ ಹೆಚ್ಚಾಗಿ ಬೇಕು. ಅದು ಒಳ್ಳೆಯ ಕೆಲಸ ಪೂರಕವಾಗಿ ಕೆಲಸ ಮಾಡುತ್ತದೆಂದು ಹೇಳಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಮಾನ್ಯ ಬೈರೇಗೌಡರು ಗೊಬ್ಬರದ ಮೇಲೆ ತಾವು ಟ್ಯಾಕ್ಸನ್ನು ಸ್ವಲ್ಪ ಕಡಿತ ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದ್ದೀರಿ. ಈ ಸೂಚನೆಯನ್ನು ಗಂಭೀರವಾಗಿ ನಾವು ಪರಿಶೀಲನೆ ಮಾಡುತ್ತೇವೆ. ಈಗ ಉತ್ತರ ತಕ್ಷಣ ನಮ್ಮ ಹತ್ತಿರ ಇಲ್ಲ.

ಶ್ರೀ ಸಿ. ಬೈರೇಗೌಡ:- ಈಗ ಗೊಬ್ಬರದ ಬೆಲೆ ಒಂದಕ್ಕೆ ಮೂರರಷ್ಟು ಆಗಿದೆ. ಅದಕ್ಕೆ ನೀವು ಕೊಡತಕ್ಕಂಥದ್ದು ಶೇಕಡ 2ರಷ್ಟು. ಇದರ ಬಗ್ಗೆ ನೇರವಾಗಿ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ:- ತಾವು ಬಹಳ ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದೀರಿ. ಅದರ ಬಗ್ಗೆ ಅಪ್ರೊಪ್ರಿಯೇಷನ್ ಬಿಲ್ ಬರುವಾಗ ನಾವು ಆಲೋಚನೆ ಮಾಡೋಣ.

ಶ್ರೀ ಸಿ. ಬೈರೇಗೌಡ:– ಇದರ ಬಗ್ಗೆ ವಿವರವಾದ ಚರ್ಚೆ ಅನಾವಶ್ಯಕ. ಶೇಕಡ 2ರಷ್ಟು ಇರತಕ್ಕಂಥದ್ದು. ಅದರ ಹೊರೆಯನ್ನು ಏತಕ್ಕೆ ನೀವು ರೈತರಿಗೆ ಏರಿಸುತ್ತಿದ್ದೀರಿ ?

ಶ್ರೀ ಎಂ. ವೀರಪ್ಪಮೊಯಿಲಿ:– ಮೈದಾನ ಪ್ರದೇಶದ ಬಗ್ಗೆ ಪ್ಯಾರಾ 53 ನ್ನು ತಾವು ದಯಮಾಡಿ ನೋಡಬೇಕು. ಇದರ ಬಗ್ಗೆ ಒಂದು ಪ್ರಯತ್ನ ನಡೆದಿದೆ. ಮಲೆನಾಡು ಬೋರ್ಡ್ ಮಾಡಿದ್ದೀರಿ, ಹೈದರಾಬಾದ್ ಕರ್ನಾಟಕ ಬೋರ್ಡ್ ಮಾಡಿದ್ದೀರಿ, ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಮಾಡಿದ್ದೀರಿ, ಮೈದಾನ ಪ್ರದೇಶಕ್ಕೆ ಇಂತಹ ಒಣಭೂಮಿಗಳಿಗೆ ಏನು ಮಾಡಿದ್ದೀರಿ, ಏನು ಮಾಡುತ್ತೀರಿ ಎಂದು ಕೇಳಿದ್ದೀರಿ. ತಾವು ಪ್ಯಾರಾ 53ನ್ನು ಓದಬೇಕು. ಅದರಲ್ಲಿ ಏನು ಮಾಡಿದ್ದೇವೆ ಅಂದರೆ ಜಲ ವಿಭಾಜಕ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವ ಸುಲವಾಗಿ ಪ್ರತಿಯೊಂದು ವಿಭಾಗದಲ್ಲಿ ಒಣಭೂಮಿ ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲಾಗಿತ್ತು. ಈ ಕಾರ್ಯಕ್ರಮಗಳನ್ನು ಬರಗಾಲ ಪೀಡಿತ ಪ್ರದೇಶ ಕಾರ್ಯಕ್ರಮ ಮತ್ತು ಬಂಜರು ಭೂಮಿ ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ಸಾರ್ಥಕ ರೀತಿಯಲ್ಲಿ ಸಮನ್ವಯಗೊಳಿಸಿ ಅವುಗಳನ್ನು ಒಂದೇ ಆಡಳಿತ ವ್ಯವಸ್ಥೆಗೆ ಒಳಪಡಿಸುವ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದು. ಈ ವ್ಯವಸ್ಥೆಯಿಂದ ಮೈದಾನ ಮತ್ತು ಬರಗಾಲ ಪೀಡಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಇದರ ಬಗ್ಗೆ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ:– ಅದಕ್ಕೆ ಎಷ್ಟು ಹಣ ಇಟ್ಟಿದ್ದೀರಿ ?

ಶ್ರೀ ಎಂ. ವೀರಪ್ಪಮೊಯಿಲಿ:– ಇದನ್ನು ಇಂಟಿಗ್ರೇಟ್ ಮಾಡಿಕೊಂಡು ನಾವು ಹಣವನ್ನು ಕೊಡುತ್ತೇವೆ. ಪ್ರಶ್ನೆ ಏನೆಂದರೆ ಇದರ ಬಗ್ಗೆ ಯಾವ ಸ್ವರೂಪ ಇರಬೇಕು ಯಾವ ರೀತಿಯಲ್ಲಿ ಮಾಡಬೇಕು ಅದಕ್ಕೆ ಕೋಲಾರ, ತುಮಕೂರು, ಚಿತ್ರದುರ್ಗ ಈ ಭಾಗದ ಶಾಸಕರು ಯಾರಿದ್ದಾರೆ ಅವರನ್ನು ಕರೆದು. ಇದರ ಬಗ್ಗೆ ಚರ್ಚೆ ಮಾಡುತ್ತೇವೆ. ಒಣ ಭೂಮಿ ಮೈದಾನ ಭೂಮಿ ಪ್ರದೇಶದ ಜನರ ಜೊತೆಯಲ್ಲಿ ನಾನು ಇದರ ಬಗ್ಗೆ ಮಾತನಾಡುತ್ತೇನೆ. This will be ultimately one Board.

ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಬೇರೆ ಬೇರೆ ಜಿಲ್ಲೆಯ ಮಟ್ಟದಲ್ಲಿ ಹಲವು ಜಿಲ್ಲೆಗಳಲ್ಲಿ ಸೇರಿಸಿ ಏನಿದೆ ಅದನ್ನು ಕ್ರೋಢೀಕರಿಸಿ ನಾವು ಒಂದು ಬೋರ್ಡನ್ನು ಮಾಡತಕ್ಕ ಒಂದು ಪ್ರಯತ್ನ ಇಲ್ಲಿ ಕಾಣಿಸಿದ್ದೇವೆ. ತಾವು ನೋಡಲೇ ಇಲ್ಲ. ಮಾನ್ಯ ಬೈರೇಗೌಡರು ಇದನ್ನು ಸ್ವಾಗತವನ್ನು ಮಾಡಿಕೊಂಡು ಭಾಷಣ ಮಾಡುತ್ತಾರೆಂದು ನಾನು ತಿಳಿದುಕೊಂಡರೆ ತಾವು ಏನೂ ಹೇಳಲೇ ಇಲ್ಲ. ಕೆರೆಯ ಬಗ್ಗೆ ಪ್ಯಾರಾ 44ರಲ್ಲಿ ತಾವು ನೋಡಿದರೆ ಡೀಸಿಲ್ಟ್ ಮಾಡತಕ್ಕದ್ದನ್ನು ಬೃಹತ್ ರೀತಿಯಲ್ಲಿ ಮಾಡಲಿಕ್ಕೆ ನಾವು ವಿಶ್ವಬ್ಯಾಂಕಿನ ನೆರವಿನೊಂದಿಗೆ 1993-94ರಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ ಕೆರೆಗಳ ಆಧುನೀಕರಣವೂ ಸಹ ಒಂದು ಭಾಗವಾಗಿರುತ್ತದೆ. ಈ ಯೋಜನೆಯ ವ್ಯಾಪ್ತಿಗೆ 120.00 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 151 ಸಣ್ಣ ನೀರಾವರಿ ಕೆರೆಗಳನ್ನು ಒಳಪಡಿಸಲಾಗುವುದು. ಇದು ನಮ್ಮ ಕಾರ್ಯಕ್ರಮ ಆಗಿದೆ. ಈಗಾಗಲೇ 1993–94ನೇ ಸಾಲಿನ ಅನುಷ್ಠಾನಕ್ಕೆ ಇದು ಬಂದಿದೆ. Yes. I agree with you. ತಮಿಳುನಾಡಿನ ಡೀಸಿಲ್ಟ್ ಪ್ರಾಜೆಕ್ಟ್ ಅನ್ನು ನಾನು ಒಂದನ್ನು ತರಿಸಿದೆ. ಯಾವ ಇಂಜಿನಿಯರ್ ಹತ್ತಿರ ಕೇಳಿದರೂ ಕೂಡ ಅವರು ತಾಂತ್ರಿಕವಾದಂತಹ ಹೇಳಿಕೆಯನ್ನು ಕೊಡುತ್ತಾರೆ. ಇಲ್ಲ, ಹೊಸ ಕೆರೆಯನ್ನು ಮಾಡುವುದೇ ಒಳ್ಳೆಯದು ಎಂದು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ:– ನಮ್ಮ ತಾಲ್ಲೂಕಿನಲ್ಲಿ ಮಾಡಿದ್ದಾರೆ. ತಾವು ಬಂದು ನೋಡಿ, ಅದು ಸಾಧುವಾದರೆ ನೀವು ಅದನ್ನು ಕಾರ್ಯಗತ ಮಾಡಿ. ನಮ್ಮಲ್ಲಿ ಈಗಾಗಲೇ ಅದು ಪೂರ್ತಿಯಾಗುತ್ತಿದೆ.

ಶ್ರೀ ಎಂ. ವೀರಪ್ಪಮೊಯಿಲಿ:– ಕೋಲಾರದಲ್ಲಿ ಕಾರ್ಯಕ್ರಮ ಪ್ರಾರಂಭವಾಗಿದೆ. ನನಗೆ ಗೊತ್ತಿದೆ, ಒಳ್ಳೆಯ ಪ್ರಯೋಗ ನಡೆದಿದೆ, ಅದನ್ನೇ ಇನ್ಸ್‌ಪಿರೇಷನ್ ಆಗಿ ಇಟ್ಟುಕೊಂಡು ಕೂಡ ಇವತ್ತು ಡೀಸಿಲ್ಟ್

ಮಾಡತಕ್ಕ ಕೆಲಸ ಆಗುತ್ತಿದೆ. ಮುಖ್ಯವಾಗಿ ತಮಿಳುನಾಡಿನಲ್ಲಿ ಸುಮಾರು 803ಕೋಟಿ ರೂಪಾಯಿ ವಿಶ್ವ ಬ್ಯಾಂಕಿನ ಯೋಜನೆ ಅಲ್ಲಿ ಮಂಜೂರಾಗಿ ಬಂದಿದೆ. ಅನುಷ್ಠಾನವನ್ನು ಮಾಡುತ್ತಿದ್ದಾರೆ. ನಾನು ಈಗಾಗಲೇ ಅಧಿಕಾರಿಗಳ ಜೊತೆ ಇದರ ಬಗ್ಗೆ ಮಾತನಾಡಿದ್ದೇನೆ. ಇನ್ನು ವಿಚಾರ ಮಾಡೋಣ. ವಿಸ್ತೃತವಾದಂತಹ ದೊಡ್ಡ ಸಮಗ್ರ ಯೋಜನೆ ಬಗ್ಗೆ ವಿಚಾರ ಮಾಡೋಣ. 800 ಕೋಟಿ ಇರಬಹುದು, 1000 ಕೋಟಿ ಇರಬಹುದು, ಸುಮಾರು ಅದೇ ಅಂದಾಜಿನ ಕೆರೆಗಳ ಬಗ್ಗೆ ವಿಶ್ವಬ್ಯಾಂಕಿಗೆ ಇನ್ನೊಂದು ಎರಡನೆಯ ಹಂತದ ಯೋಜನೆ ಏತಕ್ಕೆ ಕೊಡಬಾರದು, ಡೀಸಿಲ್ಟಿಂಗ್ ಬಗ್ಗೆ ನಾವು ಬಹಳ ವರ್ಷಗಳಿಂದ ಚರ್ಚೆಯನ್ನು ಮಾಡುತ್ತಿದ್ದೇವೆ. ತಾಂತ್ರಿಕ ಕಾರಣಗಳನ್ನು ಮುಂದೊಡ್ಡುತ್ತಿದ್ದೇವೆ. ಬಹುಶಃ ಇದು ಬಹಳ ಅವಶ್ಯಕವಾದಂತಹ ಕಾರ್ಯಕ್ರಮವೆಂದು ನನಗೆ ಅನ್ನಿಸಿದೆ. ಇದರ ಬಗ್ಗೆ ನಾವು ಚರ್ಚೆ ಮಾಡಬೇಕು. 130 ಕೋಟಿ ರೂಪಾಯಿಯ ಆಧುನೀಕರಣದ ಪ್ರಯತ್ನ 1993-94ಕ್ಕೆ ಅದನ್ನು ಅನುಷ್ಠಾನವನ್ನು ಮಾಡುತ್ತೇವೆ. ಇದರ ಅನುಭವ ಕೂಡ ನಮಗೆ ಸಿಕ್ಕುತ್ತದೆ. ವಿಶ್ವಬ್ಯಾಂಕಿಗೆ ಹೇಳಬಹುದು ಇಂತಹದ್ದು ಒಳ್ಳೆಯ ಅನುಭವ ಅಂತ ಹೇಳಬಹುದು. ಅದನ್ನು ಆಧಾರ ಮಾಡಿಕೊಂಡು ನಾವು ಇನ್ನೊಂದು ಯೋಜನೆಯನ್ನು ಈಗಾಗಲೇ ತಯಾರು ಮಾಡಬೇಕೆಂದು ಸಂಬಂಧಪಟ್ಟಂತಹ ಇಲಾಖೆಗೆ ಹೇಳಿದ್ದೇನೆ. ಸುಮಾರು 800-1000 ಕೋಟಿ ರೂಪಾಯಿಯನ್ನು ಈ ಕೆರೆ ಆಧುನೀಕರಣದ ಬಗ್ಗೆ ಒಂದು ಸಮಗ್ರವಾದಂತಹ ಯೋಜನೆಯನ್ನು ಕೂಡ ನಾವು ಸಿದ್ಧಪಡಿಸಲಿಕ್ಕೆ ಈಗಾಗಲೇ ತಯಾರಿ ನಡೆದಿದೆ. ಅದು ಬಂದ ಮೇಲೆ ವ್ಯಾಪಕವಾಗಿ ಇದರಲ್ಲಿ ಚರ್ಚೆ ಮಾಡಬಹುದು. ಸ್ಟೇಜ್ 2 ಅಂತ ಹೇಳಿ, ಆಧುನೀಕರಣ ಮತ್ತು ಡೀಸಿಲ್ಟಿಂಗ್ ಯೋಜನೆಯನ್ನು ನಾವು ತರಲಿಕ್ಕೆ ಒಂದು ಪ್ರಯತ್ನ ನಡೆದಿದೆ. ನಾನು ಬಜೆಟ್‌ನಲ್ಲಿ ಹೇಳಿಲ್ಲ. ಏಕೆಂದರೆ ಈಗಾಗಲೇ ಅನುಷ್ಠಾನವಾಗಿರತಕ್ಕಂಥ ಯೋಜನೆ ಈಗಾಗಲೇ ಇರುವ ಕಾರಣದಿಂದ ಅದನ್ನು ಪ್ರಸ್ತಾಪ ಮಾಡಲಿಲ್ಲ. ಆದರೆ ನನ್ನ ತಯಾರಿಯಲ್ಲಿ ಅದೂ ಒಂದು ಇತ್ತು. ಬಜೆಟ್‌ನಲ್ಲಿ ಆಯವ್ಯಯದ ಮಂಡನೆ ಮಾಡುವಾಗ ಅದನ್ನು ಹೇಳಬೇಕು ಅಂತ ಉದ್ದೇಶ ಇದ್ದರೂ ಕೂಡ ಅದನ್ನು ತಡೆಹಿಡಿದಿದ್ದೇನೆ. ಆದರೆ ಅದರ ರಿಪೋರ್ಟನ್ನು ಈಗಾಗಲೇ ತಯಾರು ಮಾಡಿಕೊಂಡು ಇಲ್ಲಿ ಬರಬೇಕೆಂದು ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ಇನ್ನು ಹತ್ತಿ ಬಟ್ಟೆಯ ಬಗ್ಗೆ ನೀವು ಏನು ಹೇಳಿದ್ದೀರಿ, ಅದನ್ನು ವಿಚಾರ ಮಾಡುತ್ತೇನೆ. ಶ್ರೀ ವಿನಯ್ ಕುಮಾರ ಸೊರಕೆ ಅವರು ಅಕ್ಷಯ ಕಾರ್ಯಕ್ರಮವನ್ನು ಮಾಡುತ್ತೀರಾ ಅಂತ ಕೇಳಿದ್ದಾರೆ. ಇದಕ್ಕೆ ಹಣ ಕೊಡುತ್ತಾ ಇಲ್ಲ, ಈ ಯೋಜನೆಯನ್ನು ಮುಂದುವರೆಸುತ್ತೇವೆ. ಮಕ್ಕಳಿಗೆ ಪೌಷ್ಟಿಕ ಆಹಾರ ಕೊಟ್ಟರೆ ಸ್ವಲ್ಪ ಉತ್ತೇಜನ ಬರುತ್ತದೆ ಮತ್ತು ಅವರಿಗೆ ಒಳ್ಳೆಯ ಆರೋಗ್ಯ ಇರುವುದಕ್ಕೆ ಸಮವಸ್ತ್ರ, ಶಾಲಾ ವಾತಾವರಣ ಅವರಿಗೆ ಹೆಚ್ಚು ಅನುಕೂಲ ಆಗುವಂತಹ ದಿಸೆಯಲ್ಲಿ ಅಕ್ಷಯ ಕಾರ್ಯಕ್ರಮವನ್ನು ಕಾರ್ಯಗತ ಮಾಡುವಾಗ ಕೂಡ ಒಂದು ಪ್ರಾಯೋಗಿಕವಾಗಿ ಇದೆ. ಈ ರೀತಿ ಒಂದು ವರ್ಷ ನೋಡುತ್ತೇವೆ. ಸರಿಯಾದಂತಹ ಫಲ ಕೊಡದಿದ್ದರೆ ನಾವು ಈ ಅಕ್ಷಯ ಕ್ರಮವನ್ನು ಬದಲಾವಣೆ ಮಾಡುವಂತಹ ದಿಸೆಯಲ್ಲಿ ನೋಡುತ್ತೇವೆ. ಹಿಂದೆ ಈ ಸದನದಲ್ಲಿ ನಾನು ಶಿಕ್ಷಣ ಸಚಿವನಾಗಿದ್ದಾಗಲೇ ಹೇಳಿದ್ದೆ. ಆದುದರಿಂದ ಇದರಲ್ಲಿ ವಿಶೇಷವೇನೂ ಇಲ್ಲ ಈ ಅಕ್ಷಯ ಕಾರ್ಯಕ್ರಮದಿಂದ ಮಕ್ಕಳು ನಿಜವಾದಂತಹ ಒಂದು ದಷ್ಟಪುಷ್ಟವಾಗಿ ಬೆಳೆಯಬೇಕು, ಮಾನಸಿಕವಾಗಿ, ಮತ್ತು ದೈಹಿಕವಾಗಿ, ಬೆಳೆಯಬೇಕು. ಮತ್ತು ಒಳ್ಳೆಯ ವಾತಾವರಣ ಕೊಡತಕ್ಕಂತಹ ದೃಷ್ಟಿಯಿಂದ ನಾವು ಇದನ್ನು ಮಾಡಿದ್ದೇವೆ. ಸನ್ಮಾನ್ಯ ವಿನಯ ಕುಮಾರ ಸೊರಕೆಯವರು ಸೀಮೆಎಣ್ಣೆ ಮತ್ತು ಅಡಿಕೆ ವಿಚಾರವಾಗಿ ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಸೀಮೆಎಣ್ಣೆಯಲ್ಲಿ ಸ್ವಲ್ಪ ರಿಯಾಯಿತಿ ಕೊಡಬೇಕೆಂದು ಸೂಚನೆ ಕೊಟ್ಟಿದ್ದೀರಿ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. 1991ನೇ ಇಸವಿಯಲ್ಲಿ ಹೆಚ್ಚು ಪ್ರವಾಹ ಬಂದು ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ, ಗುಲ್ಬರ್ಗಾ ಜಿಲ್ಲೆ, ಇನ್ನು ಅನೇಕ ಕಡೆ ಆಯಿತು. ಇದರ ಬಗ್ಗೆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಿಕ್ಕೆ ಹೌಸಿಂಗ್ ಬೋರ್ಡ್‌ಗೆ ಹಣವನ್ನು ಕೊಟ್ಟೆವು.

ಆದರೆ ಹೌಸಿಂಗ್ ಬೋರ್ಡ್‌ನವರು ಕಾರ್ಯಕ್ರಮವನ್ನು ಸರಿಯಾಗಿ ತೆಗೆದುಕೊಳ್ಳಲಿಲ್ಲ. ಈಗ ಅದನ್ನು ಡೀ-ಲಿಂಕ್ ಮಾಡಿಕೊಂಡು ಡೆಪ್ಯೂಟಿ ಕಮೀಷನ್‌ರ್‌ಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಮಾನ್ಯ ಜಾಲಪ್ಪನವರು ಗೌರಿಬಿದನೂರಿನಲ್ಲಿ ಸ್ವಲ್ಪ ತೊಂದರೆ ಆಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ತಾರತಮ್ಯ ಆಗದ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಆಗುವಂತೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ . Already we are doing it. If it has not started yet, we have already given instructions. It will be taken up. ಇನ್ನು ಡಾ।। ಅಂಬೇಡ್ಕರ್ ಹೌಸಿಂಗ್ ಬಗ್ಗೆ ಕೂಡ ಸುಮಾರು 25 ಸಾವಿರ ಮನೆಗಳನ್ನು ಕೊಡಬೇಕು ಎಂದು ಸರ್ಕಾರದಿಂದ 15 ಕೋಟಿ ರೂಪಾಯಿಗಳನ್ನು ಹೌಸಿಂಗ್ ಬೋರ್ಡ್‌ಗೆ ಕೊಟ್ಟರೆ ಅವರು ಅದನ್ನು ಉಪಯೋಗ ಮಾಡಲಿಲ್ಲ. ಅದನ್ನು ಹೌಸಿಂಗ್ ಬೋರ್ಡ್‌ನವರು ಡೈವರ್ಟ್ ಮಾಡಿಕೊಂಡು ಯಲಹಂಕದಲ್ಲಿ ಮನೆಗಳ ಕಾರ್ಯಕ್ರಮಕ್ಕೆ ಕೊಟ್ಟಿದ್ದಾರೆ. ಇಂಥ ಡೈವರ್ಷನ್ ಇನ್ನು ಮುಂದೆ ನಡೆಯುವುದಕ್ಕೆ ಬಿಡುವುದಿಲ್ಲ. ಇದನ್ನೂ ಕೂಡ 25 ಸಾವಿರ ಮನೆಗಳನ್ನು ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂನಲ್ಲಿ ಡಾ।। ಅಂಬೇಡ್ಕರ್ ಯೋಜನೆಯನ್ನು ಕೂಡ ನಾವು ಕೈಗೆತ್ತಿಕೊಳ್ಳುತ್ತೇವೆ. ಇನ್ನು ಟ್ಯಾಪರ್ಸ್ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ತಾವು ಹೇಳಿದ್ದೀರಿ. ನಾವು ಅವರ ಜೊತೆಯಲ್ಲಿ ಮಾತನಾಡಿಕೊಂಡು ಅದರ ಬಗ್ಗೆ ಏನು ಪ್ರೊಡಕ್ಟೀವ್ ಇನ್‌ಸೆಂಟಿವ್ ಸ್ಕೀಮ್ ಅದನ್ನು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಕೊಟ್ಟರೆ ಸಾಲದು, ಎಲ್ಲಾ ರೈತರಿಗೆ ಕೊಡಬೇಕು ಎಂದು ಹೇಳಿದರು. ಶ್ರೀ ಯಡಿಯೂರಪ್ಪ ಮತ್ತು ಸದಸ್ಯರುಗಳು ಇದರ ಬಗ್ಗೆ ವಾದ ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಮುಂದೆ ನಡೆಯುತ್ತದೆ. ಆಗ ನಾವು, ಉತ್ತರ ಕೊಡುತ್ತೇವೆ. Minor irrigation we have provided more money.

ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯ ಮರೆತು ಬಿಟ್ಟೆ, ಬಹಳ ಸಮಯದಿಂದ ನಮ್ಮ ಶಾಸಕರಿಗೆ ಒಂದು ಆಶ್ವಾಸನೆಯನ್ನು ಕೊಟ್ಟು ಬಿಟ್ಟಿದ್ದೇವೆ. ಏನು ಎಂದರೆ 40 ಲಕ್ಷ ರೂಪಾಯಿಗಳನ್ನು ಅವರವರ ಕ್ಷೇತ್ರಕ್ಕೆ ಮೂರು ವರ್ಷಕ್ಕೆ ನಾವು ಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಆದರೆ ಅದನ್ನು ನಡೆಸುವುದಕ್ಕೆ ಆಗಲಿಲ್ಲ. ಆದರೆ ಈ ಎರಡು ವರ್ಷಕ್ಕೆ ಶಾಸಕರ ಕ್ಷೇತ್ರಕ್ಕೆ ಒಂದೊಂದು ವರ್ಷಕ್ಕೆ 20 ಲಕ್ಷ ರೂಪಾಯಿಗಳ ಪ್ರಕಾರ ನಾವು ವಿಶೇಷವಾದಂತಹ ಕಾರ್ಯಕ್ರಮವನ್ನು ಅಂದರೆ ರಸ್ತೆ, ಸೇತುವೆಗಳ ಬಗ್ಗೆ ತೆಗೆದುಕೊಳ್ಳುತ್ತೇವೆ. 1993-94ರಿಂದ ಇದನ್ನು ಪ್ರಾರಂಭ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:- ಬರಬೇಕಾಗಿದ್ದ 500 ಕೋಟಿ ರೂಪಾಯಿಗಳನ್ನು ವಸೂಲು ಮಾಡಲಿಲ್ಲ. ಪಿ.ಡಬ್ಲ್ಯೂ.ಡಿ.ಯಲ್ಲಿ ಒಂದಾಣೆಯ ಕೆಲಸವೂ ಮಾಡುತ್ತಿಲ್ಲ. ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರು ವಾಕ್‌ಔಟ್ ಮಾಡಿದರು.)

ಅಧ್ಯಕ್ಷರು:- ಸದನದ ಕಲಾಪವನ್ನು 1 ಗಂಟೆ ಕಾಲ ಮುಂದೂಡಿ 3.30ಕ್ಕೆ ಪುನಃ ಪ್ರಾರಂಭಿಸಲಾಗುವುದು.

(ಸದನವು 3.45 ಗಂಟೆಗೆ ಪುನಃ ಸಮಾವೇಶಗೊಂಡಿತು)

ಅಧ್ಯಕ್ಷರು:- ಶ್ರೀ ವಿ. ಎಸ್. ಕೌಜಲಗಿ, ಅವರು ಪೀಠವನ್ನು ಅಲಂಕರಿಸಿದರು.

ಪ್ರಶ್ನೋತ್ತರಗಳು

ಅಧ್ಯಕ್ಷರು:- ಈಗ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. ಶ್ರೀ ಮಲ್ಲಾರಿಗೌಡ, ಎಸ್. ಪಾಟೀಲರ ಪರವಾಗಿ ಶ್ರೀ ಎಂ.ಎಸ್. ಆತ್ಮಾನಂದ ಅವರು ಪ್ರಶ್ನೆ ಸಂಖ್ಯೆ 1859ನ್ನು ಕೇಳಬಹುದು.